

# ಅಮರತ್ವದೊಡನೆ ಅನುಸಂಧಾನ

ಅಖಿಲ ಭಾರತ ಪತ್ರಿಕೆ

ಡಿಸೆಂಬರ್ 2020

ಬೆಲೆ : 15/-



ಆತ್ಮದಾಭೀಪ್ಸೆಯಲಿ ಅವನು ಹೀಗೆ ಮೃಣ್ಮಯದ ಜೀವವನ್ನು
ವಿವರ್ಜಿತದಲ್ಲಿ ಉತ್ತರೋತ್ತರಕೆ ಎತ್ತರಿಸಿಕೊಂಡನಿನ್ನು,
ಅವನಾತ್ಮವೀಗ ಹೊಸ–ಹುಟ್ಟಿಗಾಗಿ ವೈರಾಜ್ಯ ವ್ಯಾಪ್ತಿಯೊಳಗೆ
ತಾ ಸ್ಪಂದಗೊಳಲು ನೆಲೆ ನಿಂತನೀಗ ಅವನಾಗ ವ್ಯಾಪ್ತದೊಳಗೆ
ಜಡದ–ಜಂಜಡದ ನಶ್ವರದ ವಸ್ತು–ವಿಷಯಗಳ ಮಧ್ಯೆ ರಕ್ತಿ
ಅದರೊಳಗೆ ಸಿಲುಕಿ ತಾ ಕರಗದಂತೆ ಪಡೆದಿಹನು ಈಗ ಮುಕ್ತಿ
ಮತ್ತಿದೋ ಚಲಿಸಿ ಪರಿಶುದ್ಧ ಭೂಮ–ಚಿನ್ಮಯದ –ಭುವನದೊಳಗೆ
ಅಪರೂಪದುಸಿರ ಸಮತಾಪನೀಯ–ಮಂಡಲದಿ ನೆಲೆಸಿ ಬೆಳಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 2 ಪುಟ 486)**

**ಅಖಿಲ ಭಾರತ ಪತ್ರಿಕೆ**
**ಡಿಸೆಂಬರ್ 2020**

ಸಂಪುಟ: 30 ಸಂಚಿಕೆ: 12

**ಪರಿವಿಡಿ**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಅಮರತ್ವದೊಡನೆ ಅನುಸಂಧಾನ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಸಾವಿನ ನಾಲ್ಕು ಭಯಗಳು ಮತ್ತು ಸಾವನ್ನು ಗೆಲ್ಲುವ ನಾಲ್ಕು ವಿಧಾನಗಳು** 6
ಅನು: ಡಾ॥ ಬಲಭೀಮ ಭೀಡ

**ಅಮರತ್ವ ಎಂದರೆ ಏನು?** 14
ಅನು: ಡಾ॥ ಮಹಾದೇವ ಸಕ್ರಿ

**ಪ್ರಾಚೀನ ಧರ್ಮ ಗ್ರಂಥಗಳಲ್ಲಿ ಅಮರತ್ವ** 24
ಅನು: ಶ್ರೀ ಪುಟ್ಟು ಕುಲಕರ್ಣಿ

**ಅಮರತ್ವದ ದಿವ್ಯ ದೇಹಪ್ರಾಪ್ತಿಯ ಸಾಧ್ಯತೆಗಳು**
**ಅಮರ ಆತ್ಮ** 43
ಅನು: ಶ್ರೀ ಮಂದರ್ಕೆ ಮಾಧವ ಪೈ

**ಸಾವು; ಒಂದು ವೈಜ್ಞಾನಿಕ ವಿಶ್ಲೇಷಣೆ** 44
ಅನು: ಶ್ರೀ ಪುಟ್ಟು ಕುಲಕರ್ಣಿ

**ದಿವ್ಯ ಜೀವನ** 56
ಅನು: ಜಾನ್ವಿ

## ಸಂಪಾದಕರ ಟಿಪ್ಪಣಿ

ಜನನ–ಮರಣ, ಮತ್ತೆ ಮತ್ತೆ ಜನನ–ಮರಣ–ಜನನ ಎನ್ನುವ ಮಾತು ಯುಗಯುಗಳಿಂದಲೂ ಕೇಳುತ್ತಲೇ ಇದೆ. ನಮ್ಮ ಚಿಂತನ ಮತ್ತು ನಮ್ಮ ಚೇತನವು ಮೇಲ್ನೋಟಕ್ಕೇ ಕಾಣುವ ಹಾಗೆ ಎರಡು ವೈರುದ್ಧತೆಗಳಿಂದಲೇ ಕೂಡಿದೆ; ಆದರೆ ಎಲ್ಲಿಯವರೆಗೂ ಈ ರಹಸ್ಯದ ಪುಟಗಳನ್ನು ಹಾಗೆಯೇ ಉಳಿಸಿಕೊಳ್ಳುವದು, ಅಲ್ಲಿ ಹುದುಗಿಸಲ್ಪಟ್ಟಿರುವ ಸತ್ಯಗಳನ್ನು ಮುಕ್ತಗೊಳಿಸಿಕೊಳ್ಳಬೇಕಿದೆ. ಕೇವಲ ಜೀವನವು ಮಾತ್ರವೋ ಅಥವಾ ಸಾವು ಎನ್ನುವದು ಜೀವವನ್ನು ಅಂತರ್ಗತಗೊಳಿಸಿ–ಕೊಂಡಿರುವದೋ ಎನ್ನುವದನ್ನು – ಸಾವಿನ ನಂತರದಲ್ಲಿಯೂ ಸಹಿತ ನಿಗದಿತ ಅವಧಿಯ ನಂತರ ಮತ್ತೆ ಜೀವನದ ಬಗೆಗೆ ಎಂದೆಂದಿಗೂ ಅಚ್ಚರಿ ಇದ್ದೇ ಇರುತ್ತದೆ. (ಏಐಎಮ್)

*

## ಸಂಪಾದಕೀಯ

ಜೀವನವು ದಿವ್ಯವಾದರೆ ಮರಣವು ದಿವ್ಯತ್ವವಾಗಿದೆ. ದಿವ್ಯಕ್ಕೂ ಭವಕ್ಕೂ ಅವಿನಾಭಾವವಾದ ಸಂಬಂಧವಿದೆ, ಆದರೆ ದಿವ್ಯತ್ವವು ಮಾತ್ರ ಸದಾ ಅವಕಾಶವನ್ನೇ ಆಧರಿಸಿಕೊಂಡಿರಲು ಅಭೀಪ್ಸೆ ಪಡುತ್ತದೆ. ಆದರೆ ಈ ಅಭೀಪ್ಸೆ ಈಡೇರಬೇಕೆಂದರೆ ಅದು 'ಜೀವನದ ಅನುಭವದ'ಲ್ಲಿಯೇ ಪಕ್ವವಾಗಿ ಪೂರ್ಣಗೊಳ್ಳಬೇಕಾಗುತ್ತದೆ. ಹೀಗಾಗಿ ಜನನ ಆಕಸ್ಮಿಕ; ಮರಣ ಖಚಿತ ಎನ್ನುವ ಮಾತನ್ನು ಮತ್ತೊಮ್ಮೆ ನಿಕಷಕ್ಕೆ ಒಡ್ಡಬೇಕಾಗಿದೆ. ಮರಣದ ಖಚಿತತೆ ಮಾನವ ಚಿಂತನೆಯ ಊಹೆ. ಆದರೆ ಇದೇ ಆಧಾರದಲ್ಲಿಯೇ ಜನನವೂ ಖಚಿತ ಎನ್ನುವ ಹಂತ ಗೋಚರಿಸುತ್ತದೆ. ಈ ಎರಡೂ ಹಂತಗಳು ವಿಕಾಸದ ಪಥದಲ್ಲಿ ನಡೆಯುವ, ಪರಿಪೂರ್ಣತೆಗಾಗಿ ಪಯಣಿಸುತ್ತಿರುವ ಪ್ರಕ್ರಿಯೆಗಳಾಗಿವೆ. ಹೀಗಾಗಿ ಜನನ–ಮರಣಗಳೆರಡೂ ರೂಪಾಂತರದ ಹಂತಗಳು ಎನ್ನುವದು 'ಅಮರತ್ವದ ಸಾರ'ವಾಗಿದೆ.

ಸಾವು ಎನ್ನುವದು ಸಗುಣ ಬ್ರಹ್ಮನಿಗೂ ತಪ್ಪಿಲ್ಲ. ಇದನ್ನೇ ಶಂಕರಾಚಾರ್ಯರೂ ಸಹಿತ 'ಬ್ರಹ್ಮನೂ ಸಹಿತ ಪಂಚತ್ವವನ್ನು ಹೊಂದುತ್ತಾನೆ'– ಎಂದು ಸೌಂದರ್ಯ ಲಹರಿಯಲ್ಲಿ ಹೇಳುತ್ತಾರೆ. ಅಂದರೆ ಯಾವುದು 'ರೂಪಧಾರಿ'ಯಾಗುತ್ತದೆಯೋ, ಆ ರೂಪಕ್ಕೆ ಕಾಲವು/ಸಮಯವು ನಿಗದಿಯಾಗುವದರಿಂದ, ಆ ರೂಪವು

ಪರಿವರ್ತನೆ ಹೊಂದಲೇಬೇಕಾಗುತ್ತದೆ. ಈ ಪರಿವರ್ತನೆಯನ್ನು ಮಾನವ ಕುಲವು 'ಮರಣ'ವೆಂದು ಪರಿಗಣಿಸಿಕೊಂಡಿದೆ. ಅಂದರೆ ರೂಪ ಮಾತ್ರ ಬದಲಾಗುವದರಿಂದ ಇದನ್ನು 'ಸಾವು' ಎನ್ನುವ ಬದಲು 'ರೂಪಾಂತರ' ಎನ್ನುವದು ಸೂಕ್ತವಾಗುತ್ತದೆ.

ಆದರೆ ಸಾವನ್ನು ಧೈರ್ಯವಾಗಿ ಎದುರಿಸಿದ ಕೇವಲ ಮೂರು ಘಟನೆಗಳು ಮಾತ್ರ ಇಂದಿಗೂ ಜನಜನಿತವಾಗಿದೆ. ಮೊದಲನೇಯದು ನಚೀಕೇತನ ವಿಷಯ. ಎರಡನೇಯದು ಮಾರ್ಕಾಂಡೇಯ. ಮೂರನೇಯದು 'ಸತ್ಯವಾನ–ಸಾವಿತ್ರಿ'. ಮಾರ್ಕಾಂಡೇಯನಾದರೋ ಶಿವನ ಸಹಾಯದಿಂದ ಸಾವನ್ನು ದೂರ ಮಾಡಿಕೊಂಡವನು. ನಚೀಕೇತನ ವಿಷಯದಲ್ಲಿ ನೇರವಾಗಿ ಸಾವಿನೊಡನೆ ಸಂಭಾಷಿಸಿ ರಹಸ್ಯವನ್ನರಿಯಲು ಯತ್ನಿಸಿದ ಘಟನೆ. ಆದರೆ ಸಾವಿತ್ರಿ ಮಾತ್ರ ತನ್ನ ಪತಿಯ ಸಲುವಾಗಿ ಮೃತ್ಯುದೇವತೆಯನ್ನೇ ಸೋಲಿಸಿ, ಅಮರತ್ವದ ಪಥವನ್ನು ತೋರಿದವಳು. ಪ್ರಾಣವು ದೇಹದಿಂದ ಹೊರಟ ನಂತರದಲ್ಲಿ, ಅದು ಅಮರತ್ವವಾಗುವ ಎಲ್ಲ ಹಂತಗಳನ್ನೂ 'ಸಾವಿತ್ರಿ'ಯಲ್ಲಿ ಕಾಣುತ್ತೇವೆ.

ಆದರೆ ಸಾವಿನ ಬಗೆಗೆ ಇರುವ ಭಯದಿಂದ, ನಮ್ಮದೇ ಗ್ರಂಥವಾಗಿರುವ 'ಗರುಡ ಪುರಾಣ'ವನ್ನೂ ಸಹಿತ ಅಧ್ಯಯನ ಪರಂಪರೆಯಿಂದ ದೂರವೇ ಇಟ್ಟಿದ್ದೇವೆ. ಆದರೆ ಶ್ರೀ ಅರವಿಂದರು ಈ 'ಜನನ–ಮರಣಗಳ' ಚಕ್ರದಾಚೆ ಅಮರತ್ವ ನೆಲೆಯಲ್ಲಿ ಶಾಶ್ವತವಾಗುವ ಪಥವನ್ನು ತೋರಿಸಿದ್ದಾರೆ.

ನಾನು ಸತ್ತಿದ್ದೇನೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ; ಅದೇ ರೀತಿಯಲ್ಲಿ "ನಾನು ಸತ್ತಿದ್ದೇನೆಯೇ" ಎಂದು ಪ್ರಶ್ನೆ ಕೇಳಲೂ ಸಹಿತ ಸಾಧ್ಯವಿಲ್ಲ. ಬೇರೆ ಯಾರಾದರೂ 'ಆ ವ್ಯಕ್ತಿಯ ಆ ಸ್ಥಿತಿಯ' ಬಗೆಗೆ ಹೇಳಬೇಕಾಗಿದೆ. ಹೀಗಾಗಿ "ಅವನು ಸತ್ತಿದ್ದಾನೆ" ಎನ್ನುವ ಹೇಳಿಕೆ ಬರುತ್ತದೆ. ಆದರೆ ಈ 'ಅವನು ಸತ್ತಿದ್ದಾನೆ' ಎನ್ನುವ ಮಾತನ್ನು ಕೇಳಿದ ಆತ್ಮವು ನಗೆಯಾಡುತ್ತದೆಯಂತೆ. ಹೀಗಾಗಿ 'ಸಾವಿನ ಸ್ವಯಂ' ಅನುಭವವು ಸಾಧ್ಯವಿಲ್ಲ. ಮತ್ತೊಬ್ಬರ 'ಸಾವಿನ' ಮೂಲಕವೇ 'ಸಾವಿನ ರಹಸ್ಯ'ವನ್ನು ಅರಿಯಬೇಕಾದ ಅಪರೂಪದ ಸಂದರ್ಭವಿದೆ.

ಇಲ್ಲಿ ಸತ್ಯವಾನನ ಸಾವಿನ ಮೂಲಕವೇ 'ಸಾವಿನ ರಹಸ್ಯದ' ಬಗೆಗೆ 'ಸಾವಿತ್ರಿ' ತಿಳಿಸುತ್ತಾಳೆ. ಆದರೆ ಈ 'ಸಾವಿನ ರಹಸ್ಯ'ವನ್ನು ಅರಿತುಕೊಳ್ಳುವ, ಅದನ್ನು "ಧರಿಸಿಕೊಳ್ಳುವ ಸಾಮರ್ಥ್ಯ" ಇರುವದು 'ಚೈತನ್ಯಕ್ಕೆ' ಮಾತ್ರ. ಹೀಗಾಗಿ ಇಲ್ಲಿ 'ಸಾವಿತ್ರಿ'ಯನ್ನು ಚೈತನ್ಯವಾಗಿ, ಸತ್ಯವಾನನ್ನು 'ಸಾಕಾರವಾಗಿ' ಅಧ್ಯಯನ

ಮಾಡಬೇಕಿದೆ. ಈ ವಿಷಯಕ್ಕೆ ಪೂರವಾಗುವಂತೆ "ಚೈತನ್ಯದ" ಭಾಷೆ ಮತ್ತು ಸಾಕಾರದ ಭಾಷಾ ವ್ಯವಸ್ಥೆಯನ್ನೂ ಅರಿತುಕೊಳ್ಳಬೇಕಿದೆ. ಜಗತ್ತಿನಾದ್ಯಂತ 'ಸಾವಿನ ಭಯ' ಇದ್ದೇ ಇದೆ. ಆದರೆ ಸಾವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರುವ ಉದಾಹರಣೆಗಳು ಕಡಿಮೆ. ನಮ್ಮ 'ಗರುಡ ಪುರಾಣ', ಈಜಿಪ್ತಿನ 'ಕಾ' ಗ್ರಂಥ, ಹಾಗೂ "ಟಿಬೇಟಿನ ಬುಕ್ ಆಫ್ ಡೆಥ್"ದಂತಹ ಕೆಲವೇ ಕೃತಿಗಳು ಈ ವಿಷಯವಾಗಿ ವಿವರಣೆಗಳನ್ನು ಒದಗಿಸುತ್ತಿವೆ.

ಆದರೆ 'ಸಾವಿತ್ರಿ' ಈ 'ಸಾವಿನ ರಹಸ್ಯವನ್ನು' ಹಾಗೂ ಅದನ್ನು ಗೆಲ್ಲುವ ಸೂತ್ರವನ್ನು ತೋರುತ್ತಿದೆ. ಇದನ್ನು ಸ್ಪಷ್ಟವಾಗಿ;

'ಕಾಲದಂಚಿನಲಿ ಹುಟ್ಟು–ಸಾವಿನಾ ಸಂಕೇತ ತೋರುತಲ್ಲಿ
ಅದು ಚಲಿಸುತಿಹುದು ಅದು ಸುತ್ತುತಿಹುದು ಮಿನುಮಿನುಗು ರೂಪದಲ್ಲಿ
ಜ್ಞಾತ ವಿಶ್ವದಾ ಅಂಚಿನಾಚೆಯಲಿ ಘನನಿಶೆಯ ಒಡಲಿನೊಳಗೆ
ಧಗಧಗಿಸಿ ಸತತ ಜ್ವಾಲೆಯದು ಪ್ರಬಲ ಕ್ರಿಯೆಯನ್ನು ಗೋಳದೊಳಗೆ'

[ಸಾವಿತ್ರಿ; ಪುಟ 56]

ಎಂದು ವಿವರಣೆ ಇದೆ. ಇದು ಕೇವಲ ಕಾವ್ಯಪ್ರತಿಮೆಗಾಗಿ ಸೃಷ್ಟಿಗೊಂಡ ಶಬ್ದಪುಂಜಗಳಲ್ಲ. ಏಕೆಂದರೆ "Mighty Action-Blaze" ಎನ್ನುವದು ನಿಜವಾಗಿಯೂ ಅಸ್ತಿತ್ವದಲ್ಲಿದೆ. ನಮ್ಮ ಆಕಾಶಗಂಗೆಯ ವ್ಯಾಪ್ತಿಯ ಆಚೆ ದೂರದಲ್ಲಿ ಇರುವ ತೀವ್ರಾತಿ ತೀವ್ರವಾದ ಕಾಂತಿತೇಜವನ್ನು ಬೀರುತ್ತಿರುವ 'ಕ್ವೆಸಾರ್' ಮಾದರಿಯ ಆಕಾಶಕಾಯವೊಂದಿದೆ. ಬಹುತೇಕವಾಗಿ ಲಕ್ಷಣಾತೀತವಾಗಿರುವ ಹಂತದ ಇದನ್ನು 1961ರಲ್ಲಿ ಗುರುತಿಸಲಾಗಿದೆ. 1930ರ ಸಮಯಕ್ಕೆ ಇದು ಸಾವಿತ್ರಿಯಲ್ಲಿ "ವ್ಯಾಕೋಚ ವಿಶ್ವದ ಸ್ವರೂಪದ ಸಿದ್ಧಾಂತ"ಕ್ಕೆ ಪುರಾವೆ ಒದಗಿಸಿದೆ. ಇದು ನಕ್ಷತ್ರಗಳ ಜನನದ ತೊಟ್ಟಿಲು ಎಂದೂ ಗುರುತಿಸಲಾಗುತ್ತಿದೆ.

ಈ ಎಲ್ಲ ಆಯಾಮಗಳಲ್ಲಿ ಈ ಸಂಚಿಕೆಯಲ್ಲಿ 'ಸಾವಿನ ಸ್ವರೂಪ ಹಾಗೂ ಅಮರತ್ವದ ನೆಲೆಯ' ಕುರಿತು ವೈಜ್ಞಾನಿಕ ಸ್ವರೂಪದ ಅಧ್ಯಯನದ ಆಯಾಮದ ಚಿಂತನಾ ಸ್ವರೂಪವನ್ನೂ ರೂಪಿಸಲಾಗಿದೆ. 'ದಿವ್ಯ ಜೀವನ'ದಲ್ಲಿ ಶ್ರೀ ಅರವಿಂದರು ರೂಪಿಸಿರುವ 'ಅಮರತ್ವದ' ಕುರಿತ ಮಾಹಿತಿಗಳನ್ನು 'ದಿವ್ಯ ಜೀವನ' ಲೇಖನ ಸರಣಿಯಲ್ಲಿ ನಿರೂಪಿಸಲಾಗಿದೆ. [ಪಿಪಿಕೆ]



**ಸಾವಿನ ಭಯ**

ನಮ್ಮ ಜೀವನದಿ ತನ್ನಿಚ್ಛೆಯಂತೆ ಅಲೆತದಲಿ ಮೃತ್ಯು–ನೃತ್ಯ
ನಮ್ಮೊಳಗಿನುಸಿರ ಉಸಿರಿನಲಿ ಮಧುರ ಲಯದ–ಮರಣ –ಕೃತ್ಯ
ಸದಾ ತತ್ಪರತೆಯಲಿ ಇದುವು ಹೀಗೆ ಪ್ರತಿಸ್ಪಂದಗೊಳುತ ನಿನದ
ಏಕಿಂತು ಹೀಗೆ ಈ ಸಾವಿಗಂಜಿ ದೂರವಿರುವೆ ಅವಳಿಂದ
ಇದೋ ನೋಡಿಲ್ಲಿ ಅವಳ ಆ ಮಂದಹಾಸದಲಿ ಇರುವವದನ
ಪ್ರಫುಲ್ಲತೆಯಲ್ಲಿ ಕೃಪೆಯೀಗ ನಿತ್ಯ ಉಲ್ಲಸಿತ ಬೆಳಗು ಹಾದಿ
ಅರುಣ ವರ್ಣದಲಿ ವರ್ಣವರ್ಣಗಳ ಆ ಶೋಭೆ ಶೋಭಿತದಿ!
ದಯೆಯಲ್ಲಿ ಮತ್ತೆ ಪ್ರೇಮದಲಿ ಪ್ರಥಮ ಆಯ್ಕೆಯಲಿ ಆಯ್ದುಕೊಳುವ
ಸಂಕಲಿತ ಪುಷ್ಪಸಂಕುಲವು ನಿತ್ಯ ಪುಲಕಿತದ ಮೋದ ಭಾವ
ಮಧುರ ವನದಲ್ಲಿ ಮಧು–ವಸಂತ–ಸಂತಸದ ಸಿಂಫನಿಗಳಲ್ಲಿ
ನಿನ್ನ ಅಂಜಿಕೆಯು ಇಂಥ ವಿಷಯಕ್ಕೆ? ನವ ದುರ್ಗೆ ತೇಜದಲ್ಲಿ

ಲೋಕ–ಲೋಕಗಳ ದಿವ್ಯ ಬೆಳಕನ್ನು ನಮ್ಮಾತ್ಮಗಳಿಗೆ ತೋರಿ
ತಿರುಚಿ ಹೋಗಿರುವ ಕಾಂಡವಿದು ಖಚಿತದಲಿ ಸ್ಪರ್ಶಗೊಳಲು ಎಂದು
ಕುಸುಮಕೋಮಲದ ಕರಗಳಲ್ಲೀಗ ವೈಭವವು ಕಳೆಯೆ ನೋವು?
ಪುಷ್ಪಗಳು ಇರದೆ ಮುರುಟಿ ಮಂಕಾದ ಕಾಂಡದಿಂದೇನು ಏನು
ವಿಕರಾಳವಿದ್ದರೂ ಸಹಿತ ಇನಿತು ರಮಣೀಯವಿಹುದು ತಾನು
ಇಲ್ಲದಿರೆ ಇದುವು ಪ್ರಮುಖದ್ವಾರದಲಿ  ಕರ್ಕಶದ ಭೀತ ಸ್ವರವೊ
ನಿಮಗೆ ಈಗಿದೋ ಕಂಪಿತಕೆ ಆತ್ಮ, ದುರ್ಬಲದಿ ಸ್ಥೈರ್ಯ ಕುಸಿದು?
ಸಾವೆಂಬುದಿದುವು ಪರಿವರ್ತನೀಯ ನಿಲುವಂಗಿ ತೆರದಿ ನಮಗೆ
ಶಾಶ್ವತದ ದ್ವಾರದಲಿ ಹೀಗೆ ವಸ್ತ್ರ ಸಂಲಗ್ನಗೊಳುವ ಹಾಗೆ

**– ಅನುವಾದ: ಪುಟ್ಟು ಕುಲಕರ್ಣಿ**

[ಇದು ಶ್ರೀ ಅರವಿಂದರು 1900–1909ರ ಅವಧಿಯಲ್ಲಿ ಬಡೋದಾ ಮತ್ತು ಬಂಗಾಲದಲ್ಲಿ ಇದ್ದಾಗ ಬರೆದ ಕವನಗಳ ಸಂಗ್ರಹದಲ್ಲಿದೆ.]

## ಸಾವಿನ ನಾಲ್ಕು ಭಯಗಳು ಮತ್ತು ಸಾವನ್ನು ಗೆಲ್ಲುವ ನಾಲ್ಕು ವಿಧಾನಗಳು

**– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು**

### ಭಯವೇ ಅತಿ ದೊಡ್ಡ ಅಡ್ಡಿ

ಬಹುಶಃ ಮಾನವನ ಪ್ರಗತಿಯ ದಾರಿಯಲ್ಲಿ ಅತಿ ದೊಡ್ಡ ಅಡ್ಡಿ ಅಂದರೆ ಭಯವೇ; ಭಯವು ಬಹುಮುಖಿಯಾಗಿದ್ದು ಅನೇಕ ಆಕಾರಗಳನ್ನು ತಾಳಬಲ್ಲದು. ಅದು ಸ್ವಯಂವಿರೋಧೀ ಕೂಡ ಹೌದು, ಅದು ಅತಾರ್ಕಿಕ ಮತ್ತು ಅನೇಕ ವೇಳೆ ಬುದ್ಧಿಹೀನತೆಯುಳ್ಳದ್ದೂ ಹೌದು. ಎಲ್ಲ ಭಯಗಳ ಪೈಕಿ ಅತ್ಯಂತ ಸೂಕ್ಷ್ಮ ಹಾಗೂ ಮೊಂಡು ಅಂದರೆ ಸಾವಿನ ಭಯವೇ ಆಗಿದೆ. ಈ ಭಯವು ಸುಪ್ತಚೇತನದಲ್ಲಿ ಆಳವಾಗಿ ಬೇರೂದಿದ್ದು ಅದನ್ನು ತೆಗೆದುಹಾಕುವುದು ಅಷ್ಟು ಸುಲಭವಾದುದೇನಲ್ಲ. ಭಯದಲ್ಲಿ ಅನೇಕ ಘಟಕಗಳಿರುತ್ತವೆ; ಭಯವು ಸಾಂಪ್ರದಾಯಿಕ ಹಾಗೂ ನಿರಂತರವಾಗಿ ಮುಂದುವರಿಯಬೇಕೆನ್ನುವಂಥದು, ಗೊತ್ತಿಲ್ಲದ ಸಂಗತಿ ಎದುರು ಹಿಂಜರಿಯುವಿಕೆ, ಅನಿರೀಕ್ಷಿತವಾದುದು, ಅನೂಹ್ಯವಾದುದು ಮುಂದೆ ಬಂದಾಗ ತಳಮಳ ಹೊಂದುವುದು, ಮತ್ತು ಎಲ್ಲದರ ಹಿಂದೆ, ಜೀವಕೋಶಗಳ ಆಳದಲ್ಲಿ ಸಾವು ಅನಿವಾರ್ಯ ಎಂಬ ಭಾವ ಇರುತ್ತದೆ. ಕೆಲ ಪರಿಸ್ಥಿತಿಗಳು ಬದಲಾವಣೆ

ಹೊಂದಿದರೆ, ಆಗ ಈ ಭಾವವನ್ನು ಅಂದರೆ ಭಯವನ್ನು ಹೋಗಲಾಡಿಸಬಹುದು. ವಾಸ್ತವಿಕವಾಗಿ, ಭಯವೇ ನಿಜವಾಗಿ ಅಂಥ ಗೆಲುವಿಗೆ ದೊಡ್ಡ ಅಡ್ಡಿ. ಏಕೆಂದರೆ ಯಾವ ವಿಷಯಕ್ಕೆ ಹೆದುರುತ್ತಾನೋ ಅದನ್ನು ಅವನು ಗೆಲ್ಲುವುದಿಲ್ಲ. ಯಾರು ಸಾವಿಗೆ ಹೆದುರುತ್ತಾರೋ ಅವರು ಅದಾಗಲೇ ಅದಕ್ಕೆ ಸೋತು ಶರಣಾಗಿರುತ್ತಾರೆ.

ಹಾಗಾದರೆ ಈ ಭಯವನ್ನು ಗೆಲ್ಲುವುದು ಹೇಗೆ? ಅನೇಕ ಉಪಾಯಗಳಿವೆ, ಮೊದಲು ನಾವು ಪ್ರಯತ್ನ ಮಾಡಬೇಕಾದರೆ ಕೆಲವೊಂದಿಷ್ಟು ಮೂಲಭೂತ ಅಂಶಗಳ ನೆರವು ಬೇಕು. ಅತ್ಯಂತ ಮೊದಲು ಮತ್ತು ಮುಖ್ಯವಾಗಿ ತಿಳಿದುಕೊಳ್ಳಬೇಕಾದ ಸಂಗತಿ ಏನೆಂದರೆ ಪ್ರಾಣವೆಂಬುದು ವಿಶ್ವವ್ಯಾಪಿಯಾಗಿ ಒಂದೇ ತತ್ವ ಮತ್ತು ಅದು ಶಾಶ್ವತ ಮತ್ತು ಅಮರವಾದ ತತ್ವವಾಗಿದೆ. ಆಕಾರಗಳು ಅನೇಕ, ಆದರೆ ಎಲ್ಲವೂ ಅಶಾಶ್ವತ, ನಾಶ ಹೊಂದುವಂಥವುಗಳು ಈ ಅರಿವು ಮನಸ್ಸಿನಲ್ಲಿ ಗಟ್ಟಿಯಾಗಿ ತಳವೂರಬೇಕು ಹಾಗೂ ಸಾಧ್ಯವಾದ ಮಟ್ಟಿಗೆ, ಪ್ರತಿಯೊಂದು ಆಕಾರಗಳಲ್ಲಿರುವ ಆದರೆ ಆಕಾರಕ್ಕೆ ಬದ್ಧವಾಗದೇ ಸ್ವತಂತ್ರವಾಗಿರುವ ಶಾಶ್ವತ ಪ್ರಾಣದ ಜೊತೆಗೆ, ಹೆಚ್ಚು ಹೆಚ್ಚಾಗಿ ತನ್ನ ಪ್ರಜ್ಞೆಯಲ್ಲಿ ಗುರುತಿಸಿಕೊಳ್ಳಬೇಕು. ಇದರಿಂದಾಗಿ ಈ ಸಮಸ್ಯೆಯನ್ನು ಎದುರಿಸಲು ಅವಶ್ಯವಾಗಿ ಬೇಕಾಗಿರುವ ಮನೋಧಾರ್ಢ್ಯತೆ ದೊರೆಯುವುದು. ಅಂತಃಸತ್ತೆಯು ಜಾಗೃತವಾದರೂ ಸಹ, ಅದು ಸಾವಿನ ಭಯದಿಂದ ಪಾರಾದರೂ ಸಹ, ಸಾವಿನ ಭಯವು ಶರೀರದ ಜೀವಕೋಶಗಳಲ್ಲಿ ಅಸ್ಪಷ್ಟರೂಪದಲ್ಲಿ, ತರ್ಕಕ್ಕೆ ನಿಲುಕದ ಹಾಗೆ, ನಮ್ಮ ಅರಿವಿಗೆ ಬಾರದಂತೆ ರಹಸ್ಯವಾಗಿ ಅಡಗಿರುತ್ತದೆ. ಇಂಥ ರಹಸ್ಯದ ಆಳಗಳಲ್ಲಿರುವ ಭಯವನ್ನು ಹುಡುಕಿ ತೆಗೆದು, ಅದರ ಮೇಲೆ ಜ್ಞಾನದ ಹಾಗೂ ಭರವಸೆಯ ಬೆಳಕು ಚೆಲ್ಲಬೇಕು.

### ಪ್ರಾಣ ಸಾಯುವುದಿಲ್ಲ, ಕೇವಲ ಆಕಾರ ನಾಶವಾಗುತ್ತವೆ

ಹೀಗೆ ಪ್ರಾಣವು ನಾಶವಾಗುವುದಿಲ್ಲ, ಆದರೆ ಆಕಾರಗಳು ಮಾತ್ರ ನಾಶವಾಗುತ್ತವೆ. ಈ ರೀತಿಯ ನಾಶವನ್ನು ಕಂಡೇ ಭೌತಿಕ ಪ್ರಜ್ಞೆ ಗಾಬರಿ ಬೀಳುತ್ತದೆ. ಆಕಾರವೆನ್ನುವುದು ನಿರಂತರ ಬದಲಾಗುತ್ತಲೇ ಇರುವಂಥದು ಹಾಗೂ ಆ ಬದಲಾವಣೆಯನ್ನು ಹಾಗೂ ಆ ಮೂಲಕ ಆಗುವ ವಿಕಾಸವನ್ನು ತಡೆಯುವುದು ಸಾಧ್ಯವಿಲ್ಲ. ಈ ರೀತಿಯ ವಿಕಾಸನದ (ಪ್ರಗತಿಯ) ಬದಲಾವಣೆಯು ಮೃತ್ಯುವನ್ನು ಅನಿವಾರ್ಯಗೊಳಿಸುವುದು ಅಂತೇನಲ್ಲ, ಆದರೆ

ಬದಲಾವಣೆಯು ಬಯಸುವ ಸ್ಥಿತಿಯನ್ನು ಪೂರೈಸುವುದು ತುಂಬ ಕಠಿಣ, ಕೇವಲ ಕೆಲವೇ ಜನರು ಅದನ್ನು ಪೂರೈಸಬಲ್ಲರೇನೋ, ಹೀಗೆ ಸಾವಿನ ಭಯವನ್ನು ಗೆಲ್ಲುವುದಕ್ಕಾಗಿ ಮಾಡಬೇಕಾದ ಪ್ರಯತ್ನವು ಪ್ರಜ್ಞೆಯ ಸ್ಥಿತಿಯನ್ನನುಸರಿಸಿ, ಅದರ ಸ್ವಭಾವವನ್ನನುಸರಿಸಿ ಬೇರೆಬೇರೆಯಾಗುವುದು. ಇವುಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು, ಪ್ರತಿಯೊಂದರಲ್ಲೂ ಮತ್ತೆ ಹೆಚ್ಚಿನ ವೈವಿಧ್ಯತೆಗಳು ಇವೆ. – ಪ್ರತಿ ವ್ಯಕ್ತಿಯೂ ತನ್ನದೇ ಆದ ವ್ಯವಸ್ಥೆಯನ್ನು ಕಂಡುಕೊಳ್ಳಬೇಕು.

**ತರ್ಕದಿಂದ ಭಯವನ್ನು ತೆಗೆದುಹಾಕುವುದು**

ಮೊದಲನೆಯ ಉಪಾಯವು ತರ್ಕಕ್ಕೆ ಒಪ್ಪುವಂಥದು. ಸದ್ಯದ ಪರಿಸ್ಥಿತಿಯಲ್ಲಿ ಇವತ್ತಿನ ಜಗದ ಮಟ್ಟಿಗೆ ಸಾವು ಅನ್ನುವುದು ಅನಿವಾರ್ಯ. ಹುಟ್ಟಿದ ವ್ಯಕ್ತಿ ಅಥವಾ ಅವನ ಶರೀರ ಇಂದಿಲ್ಲ ಎಂದಾದರೊಂದು ದಿನ ಸಾಯಲೇಬೇಕು. ಪ್ರತಿ ಜೀವಿಗೂ ಕ್ಲುಪ್ತ ಕಾಲದಲ್ಲಿ ಸಾವು ಅವಶ್ಯವಾಗಿ ಬಂದೇ ಬರುತ್ತದೆ. ಯಾರು ಸಾವನ್ನು ಮುಂದೆ ತಳ್ಳಲಾರರು ಹಾಗೂ ಅದರ ವೇಗವನ್ನು ವರ್ಧಿಸಲಾರರು. ಯಾರು ಸಾವಿಗಾಗಿ ಕಾಯುತ್ತಿದ್ದಾರೋ, ಅದನ್ನು ಬಯಸುತ್ತೀದ್ದಿರೋ ಅಂಥವರು ಅದಕ್ಕಾಗಿ ಬಹುಕಾಲ ಕಾಯಬೇಕಾಗಿ ಬರಬಹುದು; ಯಾರು ಸಾವಿಗೆ ಹೆದರಿ, ಏನೆಲ್ಲ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಂಡಿದ್ದಾರೋ ಅಂಥವರು ಆಕಸ್ಮಾತ್ತಾಗಿ ಸಾವಿಗೆ ತುತ್ತಾಗಬಹುದು. ಸಾವಿನ ಗಳಿಗೆ ನಿಶ್ಚಯವಾಗಿದೆ ಎನ್ನುವದಂತೂ ನಿಜ, ಎಲ್ಲೋ ಕೆಲವೇ ಕೆಲ ವ್ಯಕ್ತಿಗಳು, ಇಡೀ ಮಾನವ ಕುಲ ಸಾಮಾನ್ಯವಾಗಿ ಪಡೆದಿರದಂಥ ಅಪೂರ್ವ ಶಕ್ತಿಯನ್ನು ಪಡೆದಿರಬಹುದು. ಆ ಮಾತು ಬೇರೆ. ಯಾವುದನ್ನು ತಪ್ಪಿಸಲೋ ಸಾಧ್ಯವೇ ಇಲ್ಲವೋ, ಅದಕ್ಕೇ ಹೆದರಿ ಪ್ರಯೋಜನವಿಲ್ಲವೆಂದು ತರ್ಕ ನಮಗೆ ಹೇಳುತ್ತದೆ. ನಾವು ಮಾಡಬಹುದಾದು–ದೇನೆಂದರೆ, ಸಾವಿನ ಸಿದ್ಧಾಂತವನ್ನು ಒಪ್ಪಿಕೊಳ್ಳಬೇಕು, ದಿನನಿತ್ಯದ ಕೆಲಸಗಳನ್ನು ನಿರ್ಭಯವಾಗಿ ಯಥಾವತ್ತಾಗಿ ಮಾಡುತ್ತ ಹೋಗಬೇಕು, ಹೆದರಬಾರದು. ತರ್ಕವನ್ನು ಅನುಸರಿಸಿ ನಡೆಯಲು ಸಾಧ್ಯವಿರುವ, ಅಂಥ ಉಪಕ್ರಮಕ್ಕೆ ಹೊಂದಿಕೊಂಡಿರುವ ವ್ಯಕ್ತಿಗಳಿಗೆ ಮಾತ್ರ ಇದು ಅತ್ಯಂತ ಪರಿಣಾಮಕಾರಿಯಾದ ಉಪಾಯವಾಗಿದೆ. ಆದರೆ ಭಾವನಾತ್ಮಕ ಜೀವಿಗಳಿಗೆ, ಸಂವೇದನಾಶೀಲರಾಗಿ ಬದುಕುವ ವ್ಯಕ್ತಿಗಳಿಗೆ ಈ ಉಪಾಯದಿಂದ ಪ್ರಯೋಜನವಾಗುವುದಿಲ್ಲ.

## ಅಂತರಾತ್ಮನಿಗಾಗಿ ಹುಡುಕಾಟ

ಅಂಥವರು ಬೇರೆ ಉಪಕ್ರಮವನ್ನು ಅಂದರೆ ಎರಡನೆಯ ಉಪಾಯವನ್ನು ಅನುಸರಿಸಿಬೇಕಾಗುವುದು – ಅಂದರೆ ಉಪಾಯವನ್ನು ಅಂತರಂಗದಲ್ಲಿ ಶೋಧಿಸುವುದು. ಎಲ್ಲ ಭಾವನೆ, ಭಾವಾವೇಶಗಳ ಹಿಂದೆ, ನಮ್ಮ ಸತ್ತೆಯ ಅಂತರಂಗದಾಳದಲ್ಲಿ ಒಂದು ಪ್ರಕಾಶ ನಿರಂತರವಾಗಿ ಬೆಳಗುತ್ತಿರುತ್ತದೆ, ಅದು ಚೈತ್ಯ ಪ್ರಜ್ಞೆಯ ಬೆಳಕು ಆ ಚೈತ್ಯ ಪ್ರಜ್ಞೆಯ ಬೆಳಕನ್ನರಸಿ ಹೋಗಬೇಕು, ಅದರ ಮೇಲೆ ಕೇಂದ್ರೀಕರಿಸಬೇಕು. ಅದು ನಿಮ್ಮೊಳಗೇ ಇದೆ. ಅಸಹನೆಯಿಂದ ಕೂಡಿದ ಸಂಕಲ್ಪದಿಂದ ನೀವು ಅಂತರಾತ್ಮವನ್ನು ಖಂಡಿತವಾಗಿ ಶೋಧಿಸಬಲ್ಲಿರಿ. ಅದರೊಳಗೆ ಪ್ರವೇಶಿಸಿದ ತಕ್ಷಣ ಅಮರತ್ವದ ಕಲ್ಪನೆ ಬರುವುದು. ನೀವು ಯಾವಾಗಲೂ ಇದ್ದಿರಿ, ನೀವು ಸದಾಕಾಲ ಇರುತ್ತೀರಿ. ನೀವಾಗ ನಿಮ್ಮ ಶರೀರಕ್ಕೆ ಬದ್ಧರಾಗಿ ಉಳಿಯುವುದಿಲ್ಲ. ನಿಮ್ಮ ಪ್ರಜ್ಞೆ ಅದರ ಮೇಲೆ ಆಧಾರಿತವಾಗುವುದಿಲ್ಲ. ಈ ಶರೀರ ಒಂದು ತಾತ್ಕಾಲಿಕ ಆಕಾರ, ಈ ಆಕಾರದ ಮೂಲಕ ನೀವು ವ್ಯಕ್ತವಾಗಿದ್ದೀರಿ, ಅಷ್ಟೇ. ಸಾವು ಅನ್ನುವುದು ಅಂತ್ಯ ಅಥವಾ ವಿನಾಶವಲ್ಲ. ಅದು ಒಂದು ಅವಸ್ಥಾಂತರದ ಹಂತ. ನಿಮ್ಮ ಎಲ್ಲ ಭಯ ನಾಶವಾಗಿ ಬಿಡುವುದು, ನೀವು ಸ್ವತಂತ್ರ ಮನುಷ್ಯನಾಗಿ ನಿಶ್ಚಿಂತೆಯಾಗಿ ಭರವಸೆಯಿಂದ ಜೀವಿಸಲು ಸಾಧ್ಯವಾಗುವುದು.

## ನಂಬಿಕೆಯ ಉಪಾಯ

ಮೂರನೆಯ ಉಪಾಯವು ಭಗವಂತನಲ್ಲಿ ಭಕ್ತಿ, ನಂಬಿಕೆ ಇರುವವರಿಗಾಗಿ ಭಗವಂತನಿಗೆ ಯಾರು ತಮ್ಮನ್ನು ಸಮರ್ಪಿಸಿಕೊಂಡಿದ್ದಾರೋ ಅವರಿಗಾಗಿ ಈ ಉಪಾಯ. ಅಂಥವರು ಭಗವಂತನಿಗೆ ಸಂಪೂರ್ಣವಾಗಿ ಒಪ್ಪಿಸಿಕೊಂಡಿರುತ್ತಾರೆ. ಅವರ ಜೀವನದ ಎಲ್ಲ ಘಟನೆಗಳು ಭಗವಂತನ ಸಮಕಲ್ಪದ ಪ್ರಕಟಣೆಗಳೇ ಆಗಿವೆ; ಅವೆಲ್ಲವನ್ನು ಅವರು ಕೇವಲ ಸಮರ್ಪಣಾಭಾವದಿಂದ ಒಪ್ಪಿಕೊಳ್ಳುವುದಿಲ್ಲ, ಬದಲಾಗಿ ಕೃತಜ್ಞತೆಯಿಂದ ಸ್ವೀಕರಿಸುತಾರೆ. ಏನು ನಡೆಯುವುದೋ ಅದು ತಮ್ಮ ಒಳ್ಳೆಯದಕ್ಕೆ ಎಂಬ ದೃಢ ವಿಶ್ವಾಸ ಅವರಲ್ಲಿರುತ್ತದೆ. ಭಗವಂತನಲ್ಲಿ ಅವರಿಗೆ ಅತ್ಯಂತ ದೃಢ ಭಕ್ತಿ ಇರುತ್ತದೆ. ಭಗವಂತನ ಜೊತೆ ಅವರಿಗೊಂದು ವೈಯಕ್ತಿಕ ಸಂಬಂಧ ಇರುತ್ತದೆ. ಅವರು ಅವನ ಸಂಕಲ್ಪಕ್ಕೆ ಸಂಪೂರ್ಣವಾಗಿ ಶರಣಾಗತ–ರಾಗಿರುತ್ತಾರೆ. ಅವನ ಅವ್ಯಾಜಪ್ರೀತಿಯನ್ನವರು ಪ್ರತ್ಯಕ್ಷ ಅನುಭವಿಸುತ್ತಾರೆ.

ಅವರಿಗೆ ಆಕಸ್ಮಿಕ ಘಟನೆಗಳು, ಸಾವು ಇವೆಲ್ಲ ಏನೂ ಅನ್ನಿಸುವುದಿಲ್ಲ. ಅವು ಸಂಪೂರ್ಣವಾಗಿ ಸ್ವತಂತ್ರರಾಗಿರುತ್ತಾರೆ. ತಾವು ತಮ್ಮ ಪ್ರಿಯಕರನ–ಪರಮಾತ್ಮನ ಪದತಲದಲ್ಲಿರುವಂತೆ, ತಮ್ಮ ಸತ್ತೆ ಸಂಪೂರ್ಣ ಶರಣಾಗತವಾಗಿ ಆತನ ತೋಳ್ತೆಕ್ಕೆಯಲ್ಲಿ ಇರುವಂತೆ, ಸಂಪೂರ್ಣ ಸುರಕ್ಷಾಭಾವವನ್ನು ಅನುಭವಿಸುತ್ತಾರೆ. ಅವರಿಗೆ ಭಯಕ್ಕೆ ಕಾರಣವೇ ಇರುವುದಿಲ್ಲ. ಆತಂಕ, ಒತ್ತಡ ಹಿಂಸೆಗಳಿಗೆ ಅವಕಾಶವೇ ಇರುವುದಿಲ್ಲ. ಅಂಥದೆಲ್ಲವೂ ದೈವೀ ಆನಂದದಿಂದ ಪಲ್ಲಟಿತವಾಗಿರುತ್ತದೆ. ಆದರೆ ಎಲ್ಲರಿಗೂ ಈ ರೀತಿ ಭಕ್ತರಾಗಿರುವ ಆದೃಷ್ಟವಿರುವುದಿಲ್ಲ.

**ಹೋರಾಟಗಾರನ ಉಪಾಯ**

ಕೆಲವರು ಜನ್ಮತಃ ಹೋರಾಟಗಾರರಾಗಿರುತ್ತಾರೆ. ಅಂಥವರು ಜೀವನವನ್ನು ಅದು ಹೇಗಿದೆಯೋ ಹಾಗೆ ಒಪ್ಪಿಕೊಳ್ಳುವುದಿಲ್ಲ. ಅವರಲ್ಲಿ ಅಮರತ್ವದ ಹಕ್ಕು ತಮಗಿದೆ ಎಂಬ ಭಾವ ತುಡಿಯುತ್ತಿರುತ್ತದೆ, ಸಂಪೂರ್ಣ ಹಾಗೂ ಭೌತಿಕ ಅಮರತ್ವದ ಭಾವ ಇರುತ್ತದೆ. ಸಾವು ಅನ್ನುವುದೊಂದು ಕೆಟ್ಟ ಹವ್ಯಾಸವೆಂದು ಅವರಿಗೆ ಅಂತರ್ಬೋಧೆಯ ಮೂಲಕ ವೇದ್ಯವಾಗಿದ್ದು, ತಾವು ಅದನ್ನು ಗೆಲ್ಲಲೆಂದೇ ಹುಟ್ಟಿದವರೆಂಬ ನಂಬಿಕೆ ಇರುತ್ತದೆ. ಅಂಥ ಬಲವಾದ ಸಂಕಲ್ಪವೂ ಅವರಲ್ಲಿ ಇರುತ್ತದೆ. ಆದರೆ ಈ ಹೋರಾಟವು ಅನೇಕ ಭಯಾನಕ ಮತ್ತು ಸೂಕ್ಷ್ಮ ಆಕ್ರಮಣಕಾರಕ ವಿರುದ್ಧ, ಸತತವಾಗಿ ಹೋರಾಡುವ, ಪ್ರತಿನಿಮಿಷ ಕಾದಾಡುವಂಥರಾಗಿರುತ್ತದೆ. ಯಾರಿಗೆ ಅಂಥ ಅಜೇಯವಾದ ಚೈತನ್ಯ ಇದೆಯೋ ಅಂಥವರು ಮಾತ್ರ ಸಾಹಸ ಮಾಡಬಹುದಾಗಿದೆ. ಅಂಥ ಯುದ್ಧಕ್ಕೆ ಅನೇಕ ಮಗ್ಗಲುಗಳಿರುತ್ತವೆ; ಪರಸ್ಪರ ಸಂಬಂಧಿತ ಅನೇಕ ಸ್ತರಗಳಲ್ಲಿ ಅಂಥ ಯುದ್ಧ ಮಾಡಬೇಕಾಗುತ್ತದೆ.

**ಮನದೊಳಗೆ ಯುದ್ಧ**

ಈಗಾಗಲೇ ಹೇಳಿದಂತೆ ಅಂಥ ಹೋರಾಟವೇ ಭಯಾನಕ. ಅದು ಮಾನಸಿಕ ಹೋರಾಟ, ಅನೇಕ, ಸಾಮೂಹಿಕವಾಗಿ, ನಮ್ಮ ಮೇಲೇರಿಬಂದು ನಮ್ಮನ್ನು ದುರ್ಬಲರನ್ನಾಗಿ ಮಾಡುವಂಥ, ಸಾವಿರಾರು ವರ್ಷಗಳಿಂದ ಇದನ್ನೇ ಮಾಡುತ್ತಿರುವ ಅನುಭವ ಇರುವ, ಶಕ್ತಿಗಳ ವಿರುದ್ಧ ಹೋರಾಡಬೇಕಾಗುತ್ತದೆ.

ಪ್ರಕೃತಿಯ ಈ ನಿಯಮ ಯಾರಿಗೂ ಹೊರತಲ್ಲ, ಯಾರನ್ನೂ ಅದು ಬಿಡುವುದಿಲ್ಲ. ಅದು ತುಂಬ ಮೊಂಡು, ಹಠಮಾರಿ. ಅದು ಯಾವಾಗಲೂ ಹಾಗೆಯೇ. ಸಾವು ಅನಿವಾರ್ಯ. ಅದನ್ನು ನಿವಾರಿಸಬೇಕೆನ್ನುವುದು ಹುಚ್ಚುತನ. ಮುಂದಿನ ಭವಿಷ್ಯದ ಬಗ್ಗೆ ಯಾರಿಗೂ ಅಂಥ ಭರವಸೆ ಇರುವುದಿಲ್ಲ. ಧರ್ಮಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಬಹುಶಃ ಎಲ್ಲ ಧರ್ಮಗಳೂ ಸಾವನ್ನು ಒಪ್ಪಿಕೊಂಡೇ ಬಿಟ್ಟಿವೆ. ಭಗವಂತನು ಮಾನವನನ್ನು ಮರಣಾಧೀನನನ್ನಾಗಿಯೇ ಹುಟ್ಟಿಸಿದ್ದಾನೆ ಎಂದು ನಂಬಿವೆ ಮತ್ತು ಅದರ ಆಧಾರದ ಮೇಲೆಯೇ ತಮ್ಮ ತಮ್ಮ ತತ್ತ್ವಗಳನ್ನು ರೂಪಿಸಿವೆ. ಅನೇಕ ಧರ್ಮಗಳು ಸಾವನ್ನೊಂದು ಮುಕ್ತಿ, ಸ್ವಾತಂತ್ರ್ಯ, ಇನ್ನೂ ಕೆಲವೊಂದು ಅದನ್ನು ಬಹುಮಾನವೆಂಬಂತೆ ಭಾವಿಸುತ್ತವೆ. ಅವು ಹೇಳುವಂತೆ, ಪರಮೋಚ್ಚ ಸಂಕಲ್ಪಕ್ಕೆ ತಲೆಬಾಗಬೇಕು, ಅದನ್ನು ಪ್ರತಿ ಮಾತಿಲ್ಲದೇ ಸಾವನ್ನು ಒಪ್ಪಿಕೊಳ್ಳಬೇಕು. ಅಂದಾಗ ಮಾತ್ರ ಶಾಂತಿ, ಸಮಾಧಾನ, ಸುಖ ಇರುತ್ತದೆ. ಇದೆಲ್ಲದರ ಜೊತೆಗೆ ಮನಸ್ಸಿನಲ್ಲಿ ಈ ಬಗ್ಗೆ ದೃಢ ಭಾವ, ಸಂಕಲ್ಪ, ನಿರ್ಧಾರ ಇರಬೇಕು. ಯಾರು ಸಾವನ್ನು ಗೆಲ್ಲಬೇಕೆಂದು ನಿರ್ಧಾರ ಮಾಡಿರುವುರೋ ಅವರು ಮಾತ್ರ, ಇಂಥ ನಂಬಿಕೆಗಳಿಗೆ ಬಲಿ ಬೀಳುವುದಿಲ್ಲ. ಅವರ ಮೇಲೆ ಇವು ಯಾವ ಪರಿಣಾಮವನ್ನೂ ಮಾಡುವುದಿಲ್ಲ, ಅವರ ದೃಢ ನಂಬಿಕೆ ಅಲುಗಾಡುವುದಿಲ್ಲ. ಅವರ ನಿರ್ಧಾರ ಆಳವಾದ ಸಾಕ್ಷಾತ್ಕಾರದ ಮೇಲೆ ಆಧರಿಸುತ್ತದೆ.

**ಭಾವನೆಗಳ ಯುದ್ಧ**

ಎರಡನೆಯ ಯುದ್ಧವು ಭಾವನಾತ್ಮಕ ಅಥವಾ ಭಾವೆನಗಳ ವಿರುದ್ಧ, ಮೋಹದ ವಿರುದ್ಧ, ಮಮಕಾರದ ವಿರುದ್ಧ – ಬಹು ಪ್ರಯತ್ನದಿಂದ, ದೊಡ್ಡ ಸಾಹಸ ಮಾಡಿ ನೀವೊಂದು ಮನೆ ಕಟ್ಟಿಸಿರುತ್ತೀರಿ, ಭವಿಷ್ಯ ರೂಪಿಸಿಕೊಂಡಿರುತ್ತೀರಿ, ಸಾಮಾಜಿಕ ಅಂತಸ್ತು, ಕಲಾತ್ಮಕ, ಸಾಹಿತ್ಯಿಕ, ವೈಜ್ಞಾನಿಕ ಅಥವಾ ರಾಜಕೀಯ ಪದವಿ ರೂಪಿಸಿಕೊಂಡಿರುತ್ತೀರಿ. ನಿಮ್ಮ ಸುತ್ತ ಒಂದು ಪರಿಸರ ನಿರ್ಮಾಣ ಮಾಡಿಕೊಂಡಿರುತ್ತೀರಿ, ಅದರಲ್ಲಿ ಎಲ್ಲವೂ ನಿಮ್ಮ ಮೇಲೆಯೇ ಆಧಾರವಾಗಿರುತ್ತದೆ. ಅನೇಕ ಜನ, ಸಂಬಂಧಿಕರು, ಸ್ನೇಹಿತರು, ಸಹಾಯಕರು ನಿಮ್ಮ ಸುತ್ತ ಸಹಾ ಗುಂಪು ಕಟ್ಟಿಕೊಂಡಿರುತ್ತಾರೆ, ನಿಮ್ಮ ಬಗ್ಗೆ ನೀವು ವಿಚಾರಿಸಿದಾಗಲೆಲ್ಲ ನೀವು ಅವರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ,

ಹೀಗಿರುವಾಗ ಅಂಥವರನ್ನು ನಿಮ್ಮಿಂದ ಕಿತ್ತುಕೊಂಡರೆ ನೀವು ಕುಸಿದು ಹೋಗಿ ಬಿಡುತ್ತೀರಿ. ನಿಮ್ಮದೇ ಆದ ಮಹತ್ವದ ಅಂಗ ಅಥವಾ ಭಾಗ ನಿಮ್ಮಿಂದ ಕಳೆದು ಹೋಗಿದೆ ಎಂಬ ಹತಾಶೆಯಿಂದ ಕೊರಗುತ್ತೀರಿ.

ಇವನ್ನೆಲ್ಲ ಬಿಟ್ಟುಬಿಡಬೇಕು ಅಂತಲ್ಲ, ಏಕೆಂದರೆ ಅವು ಬಹುಪಾಲ ನಿಮ್ಮ ಇರುವಿಕೆಗೆ ಬದುಕಿಗೆ ಒಂದು ರೀತಿಯ ಉದ್ದೇಶವನ್ನು, ಗುರಿಯನ್ನು ರೂಪಿಸಿರುತ್ತವೆ. ಆದರೆ ನೀವು ಅವುಗಳಿಗೆ ಅಂಟಿಕೊಂಡಿದ್ದೀರಲ್ಲ ಅದನ್ನು ಬಿಡಬೇಕು. ಅವುಗಳಿಲ್ಲದೆ ನೀವು ಬದಕುಬಹುದು ಎಂದು ನಿಮಗೆ ಅನಿಸಬೇಕು. ಕನಿಷ್ಠ ಪಕ್ಷ, ಅವರು ನಿಮ್ಮಿಂದ ದೂರಾದರೆ ನಿಮ್ಮ ಬದುಕನ್ನು ಪುನಃ ರೂಪಿಸಿಕೊಳ್ಳಲು ನಿಮಗೆ ಸಾಧ್ಯವಾಗಬೇಕು. ಹೊಸ ವಾತಾವರಣದಲ್ಲಿ ಬದುಕುವ ಸಿದ್ಧತೆ ಇರಬೇಕು. ಇದು ಒಂದು ಸಲ ಅಲ್ಲ, ಅಗಣಿತ ಸಲ ಮಾಡಬೇಕಾಗಿ ಬರುವುದು. ಅಮರತ್ವದ ಪರಿಣಾಮವೇ ಇದು. ಈ ಸ್ಥಿತಿಯನ್ನು ಹೀಗೆ ವರ್ಣಿಸಿಬಹುದು: ಎಲ್ಲವನ್ನೂ ವ್ಯವಸ್ಥಿತವಾಗಿ ರೂಪಿಸಿಕೊಳ್ಳಿ, ಅತಿ ಕಾಳಜಿ ಪೂರ್ವಕ ಎಲ್ಲವನ್ನೂ ನಿರ್ಮಿಸಿಕೊಳ್ಳಿ, ಆದರೆ ಎಲ್ಲದರಿಂದಲೂ ಮುಕ್ತವಾಗಿರಿ, ಬಯಕೆ, ಆಶೆ, ಮೋಹ ಬಿಟ್ಟುಬಿಡಿ. ಏಕೆಂದರೆ, ನೀವು ಸಾವಿನಿಂದ ಪಾರಾಗಬೇಕಾದರೆ ನಾಶವಾಗುವಂಥ ಎಲ್ಲ ಸಂಗತಿಗಳಿಂದ ನೀವು ಮುಕ್ತವಾಗಿರಲೇಬೇಕು. ಭಾವನೆಗಳ ನಂತರದ ಸ್ಥಾನ ಸಂವೇದನೆಗಳದು. ಇಲ್ಲಿನ ಯುದ್ಧ ಮಾತ್ರ ನಿರ್ದಯ ಮತ್ತು ತುಂಬ ಭಯಂಕರವಾದುದು. ವಿರೋಧಿ ಶಕ್ತಿಗಳು ನಿಮ್ಮ ಅತ್ಯಂತ ಸೂಕ್ಷ್ಮ ದೌರ್ಬಲ್ಯವನ್ನು ಸಹ ಗುರುತಿಸಿ, ಅಲ್ಲಿಯೇ ದಾಳಿ ಮಾಡುತ್ತವೆ. ನೀವು ಒಂದು ಸಲ ಗೆದ್ದಿರಿ ಅಂತಿಲ್ಲ, ಪದೇ ಪದೇ ಹೋರಾಡಬೇಕಾಗಿ ಬರುತ್ತದೆ, ನೀವು ಗೆದ್ದೆ ಎಂದು ಭಾವಿಸಿರುವ ಶತ್ರು ಪುನಃ ತಲೆ ಎತ್ತಿ ನಿಮ್ಮನ್ನು ಆಕ್ರಮಿಸಲೆತ್ನಿಸುವುದುಂಟು. ಅಂತೆಯೇ ನೀವು ತುಂಬ ಶಾಂತಿ ಸ್ವಭಾವ ಕಾಯ್ದುಕೊಳ್ಳಬೇಕು, ಪ್ರತಿ ಸೋಲನ್ನು ತಡೆದುಕೊಳ್ಳುವ ಸಮತೋಲ ಭಾವ ಬೇಕು, ಪ್ರತಿ ತಿರಸ್ಕಾರ, ಪ್ರತಿಭಟನೆ, ನಿರುತ್ತೇಜನಕರ ಘಟನೆ, ಬೇಸರ, ದೈನಂದಿನ ಅನುಭವ ಹಾಗೂ ಘಟನೆಗಳ ವಿರೋಧ ನಿಮ್ಮನ್ನು ಕಂಗೆಡಿಸದಂತೆ ನೀವು ಸಮಾಧಾನಿಯಾಗಿರಬೇಕು.

ಈಗ ಎಲ್ಲಕ್ಕಿಂತ ಹೆಚ್ಚು ಭಯಾನಕವಾದ ಹೋರಾಟದ ವಿಷಯಕ್ಕೆ ಬರುತ್ತೇವೆ. ಭೌತಿಕ ಹೋರಾಟ ಇದನ್ನು ಶರೀರದ ಜೊತೆ ಮಾಡಬೇಕಾಗುತ್ತದೆ.

ಇಲ್ಲಿ ವಿರಾಮ, ವಿಶ್ರಾಂತಿ ಒಂದೂ ಇಲ್ಲ. ಈ ಯುದ್ಧವನ್ನು ನಿರಂತರ ಮಾಡಬೇಕಾಗಿಬರುತ್ತದೆ. ಈ ಹೋರಾಟ ಹುಟ್ಟಿನಿಂದಲೇ ಆರಂಭವಾಗಿ–ದಾದರೊಂದು ಶಕ್ತಿಯ ಅಂತ್ಯದವರೆಗೆ ಮುಂದುವರಿಯುತ್ತದೆ, ಪರಿವರ್ತನೆಯ ಶಕ್ತಿ ಅಥವಾ ವಿಘಟನೆಯ ಶಕ್ತಿ. ಹುಟ್ಟಿನಿಂದಲೇ ಎಂದು ನಾನು ಏಕೆ ಹೇಳಿದೆನೆಂದರೆ, ವ್ಯಕ್ತಿ ಈ ಜಗತ್ತಿಗೆ ಬರುವ ಕ್ಷಣದಿಂದ ಹಿಡಿದು ಮೊದಲಾಗುತ್ತದೆ, ಈ ಯುದ್ಧವೆನ್ನುವುದು ಹುಟ್ಟಿನ ನಂತರ ಬಹು ವರ್ಷಗಳ ನಂತರ ಪ್ರಜ್ಞಾಯುಕ್ತವಾಗಿ ನಡೆಯಬಹುದು, ಆ ಮಾತು ಬೇರೆ, ಆದರೆ ಅದು ಆರಂಭವಾಗುವುದು ಹುಟ್ಟುವುದರ ಜೊತೆಗೇ ಏಕೆಂದರೆ ಪ್ರತಿಯೊಂದು ನಿರಾಸಕ್ತಿ, ರೋಗ, ವಿಕೃತಿ, ಅಪಘಾತ ಇವೆಲ್ಲವೂ ವಿಘಟನಾತ್ಮಕ ಶಕ್ತಿ ಕಾರ್ಯಗಳು, ಬೆಳವಣಿಗೆ, ಸಾಮರಸ್ಯದ ವೃದ್ಧಿ, ಆಕ್ರಮಣಗಳನ್ನು ಸಹಿಸಿಕೊಳ್ಳುವುದು, ವ್ಯಾಧಿಯಿಂದ ಗುಣವಾಗುವುದು. ಸಹಜ ಕ್ರಿಯೆಗೆ ಮರುಳುವುದು, ಪ್ರತಿಯೊಂದು ಪ್ರಗತಿಯ ಹೆಜ್ಜೆ ಇವೆಲ್ಲವೂ ಪರಿವರ್ತನಾ ಶಕ್ತಿಯ ಕಾರ್ಯಗಳು, ಆನಂತರ, ತುಸು ದೊಡ್ಡವರಾದ ಮೇಲೆ, ಈ ಹೋರಾಟವು ಪ್ರಜ್ಞಾಯುಕ್ತವೂ, ಸಂಕಲ್ಪಿತವೂ ಆದಾಗ ತುಂಬ ತೀವ್ರತೆ ಪಡೆದುಕೊಳ್ಳುವುದು, ಪರಿವರ್ತನೆ ಮತ್ತು ವಿಘಟನೆಯ ಶಕ್ತಿಗಳಲ್ಲಿ ಯಾವುದು ಗೆಲ್ಲುವುದೋ ಅನ್ನುವ ಬಗ್ಗೆ ಪೈಪೋಟಿ ಆರಂಭವಾಗುವುದು. ಅಂದರೆ ಇದು ಆಗ ನಿರಂತರ ಪ್ರಯತ್ನವಾಗಿ ಬಿಡುವುದು. ಸದಾ ಪುನರ್ನವೀಕರಣ ಶಕ್ತಿಯನ್ನಾಗಿ ಆಹ್ವಾನ ಮಾಡಬೇಕಾಗುವುದು, ಶರೀರದ ಜೀವಕೋಶಗಳೆಲ್ಲ ಆ ಶಕ್ತಿಯನ್ನು ಸ್ವೀಕರಿಸಲು ಸಮರ್ಥವಾಗಬೇಕಾಗುವುದು, ಹಂತಹಂತವಾಗಿ ಹೋರಾಡಲು, ಸೋಲಿಸುವ–ವಿನಾಶಗೊಳಿಸುವ ಶಕ್ತಿಯ ವಿರುದ್ಧ ಹೋರಾಡುವ ಶಕ್ತಿ ಬೆಳೆಸಿಕೊಳ್ಳಬೇಕಾಗುವುದು, ಇದು ನಿರಂತರವಾಗಿ ನಡೆಯುವ ಹಠಮಾರಿ ಯುದ್ಧ, ಎಷ್ಟೋ ಸಲ ಪರಿಣಾಮ ಏನಾಗಿದೆ ಎಂಬುದು ಗೊತ್ತಾಗುವುದಿಲ್ಲ ಕೂಡ. ಗೆದ್ದವೋ, ಸೋತವೊ ಕೂಡ ಅರಿವಾಗುವುದಿಲ್ಲ, ಅರ್ಧಮರ್ಧವಾದರೂ ಗೆಲುವು ಸಿಕ್ಕಿದೆಯೇ ಎಂಬುದೂ ಸಹ ಗೊತ್ತಾಗುವುದಿಲ್ಲ. ಏಕೆಂದರೆ ಮಾಡಿದ ಹೋರಾಟವನ್ನೇ ಮತ್ತೆ ಮತ್ತೆ ಮಾಡಬೇಕಾಗಿ ಬರುತ್ತದೆ. ಹೀಗಾಗಿ ಯಾವುದೂ ಖಾತ್ರಿ ಇರುವುದಿಲ್ಲ. ಒಂದೆಡೆ ಗೆದ್ದೆವು ಅನಿಸಿದರೆ, ಮತ್ತೊಂದೆಡೆ ಅದೇ ಹೆಜ್ಜೆ ಮತ್ತೊಂದು ಸೋಲಿಗೆ ಕಾರಣವಾಗಿರುವ ಸಂಭವ ಇರುತ್ತದೆ. ಒಂದೆಡೆ, ಒಂದು ಹೆಜ್ಜೆ ಮುಂದೆ ಹೋದರೆ ಮತ್ತೊಂದಡೆ ಒಂದು ಹಜ್ಜೆ ಹಿಂದೆ ಹೋಗಿರುವ ಸಂಭವ ಇರುತ್ತದೆ. ಒಂದು ದಿನ ಗೆದ್ದು ಇನ್ನೊಂದು

ದಿನ ಸೋಲಲೂ ಬಹುದು. ಕೊನೆಗೆ ಒಂದು ದಿನ ಸಂಪೂರ್ಣ ಗೆಲುವು ನಿಶ್ಚಿತ, ಆದರೆ ಆ ಗೆಲುವು ಸಮಗ್ರವಾಗಿರಬೇಕು. ಇದು ಬಹಳ ಸಮಯ ತೆಗೆದುಕೊಳ್ಳುವುದು, ಎಷ್ಟೋ ವರ್ಷಗಳ ಸಮಯ ಕೂಡ ಬೇಕಾಗುವುದುಂಟು. ಈ ಮಧ್ಯೆ ವಿರೋಧಿ ಶಕ್ತಿಗಳ ಬಲ ಕೂಡ ಹೆಚ್ಚಾಗುವ ಸಂಭವ ಇರುತ್ತದೆ.

ಇದೆಲ್ಲದರ ನಡುವೆ ಪ್ರಜ್ಞೆ ಅನ್ನುವುದು ಕಾವಲುಗಾರವಾಗಿ ನಿಂತಿರುತ್ತದೆ. ನೀವು ಗಟ್ಟಿಯಾಗಿ ನಿಂತುಕೊಳ್ಳಬೇಕು. ಏನೇ ಆಗಲಿ ಗಟ್ಟಿಯಾಗಿ ನಿಂತುಕೊಳ್ಳಬೇಕು, ಸ್ವಲ್ಪವೂ ಕೂಡ ಭಯಬೀಳಬಾರದು, ಎಚ್ಚರ ತಪ್ಪಬಾರದು, ತಾವೇನು ಮಾಡಬೇಕಾಗಿದೆಯೋ ಅದರ ಪೂರ್ತಿಯ ಬಗ್ಗೆ ಗಟ್ಟಿ ವಿಶ್ವಾಸ ಇರಬೇಕು, ಮೇಲಿನಿಂದ ಸಹಾಯ, ಕೃಪೆ ಸಿಕ್ಕೇ ಸಿಗುತ್ತದೆ ಎಂಬ ಬಗ್ಗೆ ಗಟ್ಟಿಯಾದ ನಂಬಿಕೆ ಇರಬೇಕು. ಏಕೆಂದರೆ ಯಾರಲ್ಲಿ ಹೆಚ್ಚು ತಾಳ್ಮೆ ಮತ್ತು ಸಹನೆ ಇರುತ್ತದೋ ಅವರು ಮಾತ್ರ ಗೆಲ್ಲಲು ಸಾಧ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/82–87 – ಶ್ರೀಮಾತೆ**

## ಅಮರತ್ವ ಎಂದರೆ ಏನು?

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

***ಮರಣಾನಂತರದ ಮಾನಸಿಕ ವ್ಯಕ್ತಿತ್ವದ ಉಳಿಯುವಿಕೆಯು ಅಮರತ್ವ ಅಲ್ಲ, ಅದು ಸತ್ಯವಾದರೂ ಸಹ, ದೇಹವು ಅಜಾತ ಹಾಗೂ ಸಾವಿಲ್ಲದ ಆತ್ಮನ ಜಾಗೃತ ಸ್ವಾಧೀನತೆಯ ಒಂದು ಸಾಧನ ಮತ್ತು ನೆರಳು ಮಾತ್ರ.***

... ಅಮರತ್ವವು ಆದಿ ಅಥವಾ ಅಂತ್ಯವಿರದ, ಜನನ ಅಥವಾ ಮರಣವಿರದ, ಒಟ್ಟಿನಲ್ಲಿ ದೇಹದಿಂದ ಸ್ವತಂತ್ರವಾದ ಒಂದು ಜೀವವಾಗಿದೆ. ಅದು ಆತ್ಮನ ಜೀವವಾಗಿದೆ, ಪ್ರತಿಯೊಬ್ಬ ವ್ಯಕ್ತಿಯ ಅಗತ್ಯವಾದ ಇರುವಿಕೆಯಾಗಿದೆ, ಮತ್ತು ಅದು ವಿಶ್ವಾತ್ಮನಿಂದ ಬೇರೆಯಾದುದಲ್ಲ. ಈ ಪ್ರಮುಖವಾದ ಇರುವಿಕೆಯು ವಿಶ್ವಾತ್ಮನೊಂದಿಗೆ ಏಕತ್ವದ ಒಂದು ಭಾವವನ್ನು ಹೊಂದಿದೆ; ವಾಸ್ತವವಾಗಿ ಅದೊಂದು ವಿಶ್ವಾತ್ಮನ ಮೈವೆತ್ತ, ವ್ಯಕ್ತಿಗತವಾದ ಮತ್ತು ಅದು ಆದಿ ಅಥವಾ ಅಂತ್ಯ, ಜೀವನ ಅಥವಾ ಮರಣ ಹೊಂದಿಲ್ಲದ ಅಭಿವ್ಯಕ್ತಿಯಾಗಿದೆ, ಅದು ಶಾಶ್ವತವಾಗಿ ಅಸ್ತಿತ್ವದಲ್ಲಿದೆ ಮತ್ತು ಅಮರವಾಗಿದೆ. ಈ ಆತ್ಮನ ಸಂಪೂರ್ಣ

ಅರಿವನ್ನು ಹೊಂದಿದ್ದರೆ ನಾವು ಅದರ ಶಾಶ್ವತ ಜೀವನದಲ್ಲಿ ಭಾಗವಹಿಸುತ್ತೇವೆ, ಮತ್ತು ಆದ್ದರಿಂದ ನಾವು ಅಮರರಾಗುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/82–87**

ಅಮರತ್ವವನ್ನು ಗುರಿ ಎಂದು ಪರಿಗಣಿಸುವುದು – ನಂಬುವುದು ಎಲ್ಲರೂ ಮಾಡುವ ಪ್ರಮಾದವಾಗಿದೆ. ಆದರೆ ನೀವು ಪ್ರಾಮಾಣಿಕ ಜೀವನ ನಡೆಸುತ್ತಿದ್ದರೆ – ಅಮರತ್ವವು ಕೇವಲ ಅದರ ಪರಿಣಾಮಗಳಲ್ಲೊಂದು... ಅದೊಂದು ಕೇವಲ ಸ್ವಾಭಾವಿಕ ಪರಿಣಾಮ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಆಗಸ್ಟ 5, 1964**

***ಮರಣವೆಂಬುದಿಲ್ಲ. ರೂಪಾಂತರಣ ಹೊಂದುವವರು ಮಾತ್ರ ಸಾಯಬಹುದು; ಮರ್ತ್ಯ (ಸಾವು) ಹುಟ್ಟಲು ಅಥವಾ ನಾಶವಾಗಲು ಸಾಧ್ಯವಿಲ್ಲ.***

ಅಮರನು ಜೀವನದ ಸ್ಥಿತಿಯಿಂದ ಸಾವಿನ ಸ್ಥಿತಿಗೆ ಹೋಗಬಹುದು (ಆದರೆ 'ಸಾವು' ನಾವು ತಿಳಿದುಕೊಂಡಂತೆ ಅಲ್ಲ); 'ಸಾಯಬಹುದು' ಎಂದರೆ 'ಸ್ಥಿತಿಯನ್ನು ಬದಲಾಯಿಸಬಹುದು.' ಅಮರನು ಈ ಸ್ಥಿತಿಯಿಂದ ಆ ಸ್ಥಿತಿಗೆ ಹೋಗಬಹುದು ಹಾಗೆಯೆ ಮತ್ತೊಮ್ಮೆ ಹಿಂದಕ್ಕೆ ಮತ್ತು ಮುಂದಕ್ಕೆ. ನಾವು ಅದನ್ನು 'ಸಾವು' ಎಂದು ಕರೆಯುತ್ತೇವೆ, ಆದರೆ ಜೀವನ ಅಥವಾ ಸಾವಿನೊಂದಿಗೆ ಅದರ ಸಂಬಂಧವಿಲ್ಲ. ಅವು ಸ್ಥಿತಿಯ ಬದಲಾವಣೆಗಳು ಮಾತ್ರ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 12, 1961**

**ಮಾನವ ಸ್ವಭಾವದಲ್ಲಿ ಅಂತರ್ಗತವಾಗಿರುವ ಅಮರತ್ವದ ಅವಶ್ಯಕತೆ**

ಒಂದು ದಿನ, ಯಾವ ಘಟನೆ ಎಂದು ನನಗೆ ಸರಿಯಾಗಿ ನೆನಪಿಲ್ಲ, ವೇದಗಳನ್ನು ಬರೆದ 'ಪೂರ್ವಜರನ್ನು' ಪ್ರೇರೇಪಿಸಿದ್ದನ್ನು ನಾನು ಕಂಡೆ: ಅದು ಅಮರತ್ವದ ಅಗತ್ಯವಾಗಿತ್ತು; ಅವರು ಅಮರತ್ವದ ಅನ್ವೇಷಣೆಯಲ್ಲಿದ್ದರು. ಅಲ್ಲಿಂದ ನಾನು ಬುದ್ಧನ ಕಡೆಗೆ ಹೊರಟೆ ಮತ್ತು ಯಾವುದು ಬುದ್ಧನನ್ನು ತನ್ನ ಮಾರ್ಗದಲ್ಲಿ ಗಟ್ಟಿ ಮಾಡಿದೆ ಎನ್ನುವುದನ್ನು ನೋಡಿದೆ: ಸ್ಥಿರತೆಗೆ ಈ ರೀತಿಯ

ಅವಶ್ಯಕತೆ, ಪರಿಶುದ್ಧವಾಗಿ ಮತ್ತು ಸರಳವಾಗಿ; ವಿಷಯಗಳ ಅಶಾಶ್ವತತೆಯ ದೃಷ್ಟಿ ಅವನನ್ನು ತೀವ್ರವಾಗಿ ತೊಂದರೆಗೊಳಿಸಿತು, ಮತ್ತು ಅವನು ಶಾಶ್ವತತೆಯ ಅಗತ್ಯತೆಯನ್ನು ಅನುಭವಿಸಿದನು. ಅವನ ಸಂಪೂರ್ಣ ಅನ್ವೇಷಣೆಯು ಶಾಶ್ವತವನ್ನು ಕಂಡುಹಿಡಿಯುವುದಾಗಿದೆ (ಶಾಶ್ವತವನ್ನು ಹೊಂದಲು ಅವನು ಅಷ್ಟೊಂದು ಏಕೆ ಆಸಕ್ತನಾಗಿದ್ದ?...). ಆ ರೀತಿಯ ಕೆಲವು ವಿಷಯಗಳು ಮಾನವನ ಸ್ವಭಾವದಲ್ಲಿವೆ, ಮಾನವನ ಅವಶ್ಯಕತೆಯ ಆಳದಲ್ಲಿ. ನಂತರ ಇಂತಹದೇ ಇನ್ನೊಂದು ಅಗತ್ಯತೆಯನ್ನು ನೋಡಿದೆ: ಸುರಕ್ಷತೆಯಾದ ದೃಢನಂಬಿಕೆಗಾಗಿ ಒಂದು ಅಗತ್ಯತೆ...

...ಅದು ಜೀವನದ ಅವಶ್ಯಕತೆಗಳಲ್ಲಿ ಒಂದು (ಅಲ್ಲಿ ಹಲವಾರಿವೆ); ಮತ್ತು ಮನುಷ್ಯನು ತನ್ನ ಪ್ರಸ್ತುತ ಸ್ಥಿತಿಯಿಂದ ಹೊರಬರಲು ಮತ್ತು ಇನ್ನೊಂದನ್ನು ಕಂಡುಹಿಡಿಯಲು ಪ್ರೇರೆಪಿಸುತ್ತಾನೆ. ಈ ಅಗತ್ಯತೆಗಳು (ಯಾವ ಶಬ್ದವದು?)... ಬೀಜಗಳು, ವಿಕಾಸದ ಸೂಕ್ಷ್ಮಜೀವಿಗಳು. ಮುನ್ನಡೆಯಲು ಅವುಗಳು ನಮ್ಮನ್ನು ಒತ್ತಾಯಿಸುತ್ತವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 27, 1962**

## ಅಮರತ್ವವನ್ನು ಅರ್ಥಮಾಡಿಕೊಳ್ಳುವುದು

"ಅಮರತ್ವ" ಈ ಪದದ ಬಗ್ಗೆ ಸ್ವಲ್ಪ ತಪ್ಪು ತಿಳುವಳಿಕೆ ಇದೆ – ಮತ್ತು ಇದೇನು ಹೊಸ ವಿಷಯವಲ್ಲ; ಇದು ಅಗಾಗ್ಗೆ ಮರುಕಳಿಸುವ ತಪ್ಪು ಗ್ರಹಿಕೆಯಾಗಿದೆ. ಒಬ್ಬರು ಅಮರತ್ವದ ಬಗ್ಗೆ ಮಾತನಾಡುವಾಗ ಹೆಚ್ಚಿನ ಜನರು ಇದನ್ನು ದೇಹದ ಅನಿರ್ದಿಷ್ಟ ಉಳಿವು ಎಂದು ಅರ್ಥಮಾಡಿಕೊಳ್ಳುತ್ತಾರೆ.

ದೇಹವು ಈ ಶಾಶ್ವತವಾದ ಆತ್ಮನ ಬಗ್ಗೆ ಪೂರ್ಣವಾಗಿ ಜಾಗೃತವಾದಾಗ ಮತ್ತು ಅದರ ಜೊತೆಗೂಡಿದಾಗ ಮಾತ್ರ ಅನಿರ್ದಿಷ್ಟವಾಗಿ ಉಳಿಯುತ್ತದೆ, ಅದೇ ಸಾಮರ್ಥ್ಯ ಹೊಂದಿದೆ ಎನ್ನುವಷ್ಟರ ಮಟ್ಟಿಗೆ, ವಿಶ್ವವ್ಯಾಪಿ ಚಲನೆಯನ್ನು ಅದು ಅನುಸರಿಸಲು ಸಾಧ್ಯವಾಗಿಸುವಂತೆ ಮಾಡುವ ನಿರಂತರ ಪರಿವರ್ತನೆಯ ಅದೇ ಸಹಜ ಶಕ್ತಿಯೊಂದಿಗೆ ಅದರ ಜೊತೆಗೆ ಗುರುತಿಸಿಕೊಳ್ಳುತ್ತದೆ. ದೇಹವು ಸಹಿಸಿಕೊಳ್ಳಬೇಕೆಂದರೆ ಇದೊಂದು ಸಂಪೂರ್ಣವಾಗಿ ಅನಿವಾರ್ಯವಾದ ಷರತ್ತು. ದೇಹವು ಬಾಗದಿರುವುದರಿಂದ, ಅದು ಚಲನೆಯನ್ನು ಅನುಸರಿಸದೆ

ಇರುವುದರಿಂದ, ಅದು ವಿಶ್ವ ವಿಕಾಸದ ಜೊತೆ ತನ್ನನ್ನು ನಿರಂತರವಾಗಿ ಗುರುತಿಸಿಕೊಳ್ಳಲು ಅದು ತನ್ನನ್ನು ಸಾಕಷ್ಟು ಕ್ಷಿಪ್ರವಾಗಿ ಮಾರ್ಪಡಿಸಿ–ಕೊಳ್ಳದಿರುವುದರಿಂದ, ಅದು ನಾಶವಾಗುತ್ತದೆ ಮತ್ತು ಸಾಯುತ್ತದೆ. ಅದರ ಸ್ಥಾಯಿತ್ವ, ಅದರ ಕಠಿಣತೆ, ತನ್ನನ್ನು ಮಾರ್ಪಡಿಸಿಕೊಳ್ಳದ ಅದರ ಅಸಮರ್ಥತೆ, ಅದರ ನಾಶವನ್ನು ಅವಶ್ಯಕತೆಯನ್ನಾಗಿಸುತ್ತದೆ, ಹಾಗಾಗುವುದರಿಂದ ಅದರ ಸತ್ವವು ಸಾಮಾನ್ಯವಾದ ಭೌತಿಕ ವಸ್ತುವಿನ ಕ್ಷೇತ್ರಕ್ಕೆ ಮರಳಬಹುದು ಮತ್ತು ಹೆಚ್ಚಿನ ಪ್ರಗತಿಗೆ ಬೇಕಾದ ಸಾಮರ್ಥ್ಯವನ್ನು ಹೊಂದಲು ದೇಹವನ್ನು ಹೊಸ ರೂಪದಲ್ಲಿ ಪುನಃ ನಿರ್ಮಿಸಬಹುದು. ಆದರೆ ಸಾಮನ್ಯವಾಗಿ, ನಾವು ಅಮರತ್ವದ ಬಗ್ಗೆ ಮಾತನಾಡುವಾಗ ಜನರು ಭೌತಿಕ ಅಮರತ್ವದ ಬಗ್ಗೆ ಯೋಚಿಸುತ್ತಾರೆ – ಅದನ್ನು ಇನ್ನೂ ಸಾಧಿಸಲಾಗಿಲ್ಲ ಎಂದು ಹೇಳದೆ ಅದು ಹೋಗುತ್ತದೆ.

ಅದು ಸಾಧ್ಯ ಮತ್ತು ಅದು ಸಂಭವಿಸುತ್ತದೆಯೂ ಸಹ ಎಂದು ಶ್ರೀ ಅರವಿಂದರು ಹೇಳುತ್ತಾರೆ, ಆದರೆ ಅವರು ಒಂದು ಷರತ್ತನ್ನು ಹಾಕುತ್ತಾರೆ: ದೇಹವನ್ನು ಅಧಿಮಾನಸಮಯವನ್ನಾಗಿಸಬೇಕು, ಅದು ಮೃದುತ್ವದ ಮತ್ತು ನಿರಂತರ ಪರಿವರ್ತನೆಯ ಗುಣಗಳಾದ ಅಧಿಮಾನಸ ಪುರುಷನ ಕೆಲವು ಗುಣಗಳನ್ನು ಹೊಂದಿರಲೇಬೇಕು. ದೇಹವು "ಒಂದು ಸಾಧನ ಮತ್ತು ಛಾಯೆ ಮಾತ್ರ" ಎಂದು ಬರೆಯುವಾಗ, ಅವರು ಈಗಿರುವ ದೇಹದ ಬಗ್ಗೆ ಮತ್ತು ಮುಂದೆ ದೀರ್ಘ ಸಮಯದ ವರೆಗೆ ಮುಂದುವರೆಯಬಹುದಾದ ದೇಹದ ಬಗ್ಗೆ ಮಾತನಾಡುತ್ತಿದ್ದಾರೆ. ಅದು ಆತ್ಮನ ಸಾಧನ ಮಾತ್ರ, ಈ ಆತ್ಮನ ಒಂದು ಅಸಮರ್ಪಕವಾದ ಅಭಿವ್ಯಕ್ತಿ, ಮತ್ತು ಒಂದು ಛಾಯೆ – ನಿತ್ಯ ಆತ್ಮನ ಬೆಳಕು ಮತ್ತು ನಿಖರತೆಯೊಂದಿಗೆ ಹೋಲಿಸಿದಾಗ ಅದೊಂದು ಅಸ್ಫುಟ ಹಾಗೂ ಅಸ್ಪಷ್ಟ ಛಾಯೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/28–29**

**ನಮ್ಮಲ್ಲಿಯ ಅವಿನಾಶಿಯ ಇರುವಿಕೆ**

ಬಹುತೇಕ ಜನರು "ನಾನು" ಎಂದು ಹೇಳಿದಾಗ ಅದು ಅವರ ಭಾವನೆಯ, ಅವರ ದೇಹದ, ಅವರ ಆಲೋಚನೆಯ, ನಿಷ್ಪಕ್ಷಪಾತವಾಗಿ, ಮಾತನಾಡುವಂಥ ಒಂದು ಅಂಶ; ಅದು ಯಾವಾಗಲೂ ಬದಲಾಗುವಂಥದ್ದು. ಆದ್ದರಿಂದ, ಅವರ

"ನಾನು" ಅಗಣಿತ, ಅಥವಾ "ನಾನು" ಎನ್ನುವುದು ಯಾವಾಗಲೂ ಬದಲಾಗುವಂಥದ್ದು. ಅಲ್ಲಿರುವ ದೃಢವಾದ ವಸ್ತು ಯಾವುದು?... ಸ್ಪಷ್ಟವಾಗಿ ಅದು ಚೈತ್ಯ ಪುರುಷ. ಒಂದು ನಿರಂತರವಾದ ವಸ್ತುವಾಗಿರಬೇಕಾದರೆ ಮೊದಲಿಗೆ ಅದು ಅವಿನಾಶಿಯಾಗಿರಬೇಕು. ಇಲ್ಲವಾದರೆ ಅದು ನಿರಂತರವಾಗಿರಲಾರದು. ನಂತರ, ಅದು ಹಾದು ಹೋಗುವ ಅನುಭವಗಳಿಂದ ಸ್ವತಂತ್ರವಾಗಿರಲೇಬೇಕು: ಅದು ಸ್ವತಃ ಅನುಭವಗಳೇ ಆಗಿರಬಾರದು. ಆದುದರಿಂದ, ಅದು ನಿಶ್ಚಿತವಾಗಿಯೂ ನದಿಯನ್ನು ರಚಿಸುವ ನದಿತಳವಲ್ಲ; ತಳಪಾಯವು ಒಂದು ವಾಸ್ತವಾಂಶ ಮಾತ್ರ. ಇನ್ನೂ ಹೆಚ್ಚಿನ ಹೋಲಿಕೆಯನ್ನು ಮಾಡಿದರೆ (ಹೋಲಿಕೆಗಳು ಅಮಾನ್ಯ, ಜನರು ಅವುಗಳಲ್ಲಿ ತಮಗೆ ಬೇಕಾದ್ದನ್ನು ಕಂಡುಕೊಳ್ಳುತ್ತಾರೆ), ನದಿಯು ಜೀವನದ ಒಂದು ಒಳ್ಳೆಯ ಸಂಕೇತವೆಂದು ಹೇಳಬಹುದು, ನದಿಯಲ್ಲಿ ಸ್ಥಿರವಾದದ್ದು ಯಾವುದೆಂದರೆ "ನೀರು" ಎಂಬ ವರ್ಗ/ವಿಧ. ಯಾವಾಗಲೂ ಅದು ನೀರಿನ ಅದೇ ಹನಿಯಾಗಿರುವುದಿಲ್ಲ, ಆದರೆ ಅದು ಯಾವಾಗಲೂ ನೀರು – ನೀರಿಲ್ಲದಿದ್ದರೆ ನದಿಯು ಅಲ್ಲಿರುವುದಿಲ್ಲ. ಮನುಷ್ಯನಲ್ಲಿ ತಾಳಿಕೊಳ್ಳುವುದು ಯಾವುದೆಂದರೆ ಅದು "ಪ್ರಜ್ಞೆ"ಯ ವರ್ಗ. ಯಾಕೆಂದರೆ ಅದು ಸಹಿಸಿಕೊಳ್ಳುವ ಪ್ರಜ್ಞೆಯನ್ನು ಹೊಂದಿದೆ. ರೂಪಗಳು ಕೊನೆಯವರೆಗೆ ಬರುವುದಿಲ್ಲ. ಕೊನೆಯವರೆಗೆ ಬರುವುದೆಂದರೆ ಪ್ರಜ್ಞೆ, ಈ ಎಲ್ಲ ರೂಪಗಳನ್ನು ಕಟ್ಟುವ ಸಾಮರ್ಥ್ಯ, ಈ ಎಲ್ಲ ವಸ್ತುಗಳ ಮುಖಾಂತರ ಹಾದು ಹೋಗುವಿಕೆ, ಅವುಗಳನ್ನು ಸ್ಮರಣೆಯಲ್ಲಿ ಇರಿಸಿಕೊಳ್ಳುವುದು ಮಾತ್ರವಲ್ಲ (ಸ್ಮರಣೆಯು ಬಾಹ್ಯವಾದದ್ದು), ಪ್ರಜ್ಞೆಯ ಅದೇ ಕಂಪನಗಳನ್ನು ಸಹ ಇರಿಸಿಕೊಳ್ಳುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 04/173**

ಹೌದು, ಸಮಸ್ತ ವ್ಯವಸ್ಥೆಯ, ಮನುಷ್ಯ ಜೀವದ ಮತ್ತು ಪ್ರಜ್ಞೆಯ ಈ ತ್ರಿವಳಿ ವ್ಯವಸ್ಥೆಯ ಹಿಂದೆ ಚೈತ್ಯನಿದ್ದಾನೆ, ಚೈತ್ಯನು ಹಿಂದುಗಡೆ ಇರುತ್ತಾನೆ ಮತ್ತು ಅದನ್ನು ಅವಿನಾಶಿಯಾದ ತನ್ನ ಪ್ರಜ್ಞೆಯಿಂದ ಬೆಂಬಲಿಸುತ್ತಾನೆ. ನಮಗೆ ನಿರಂತರತೆಯ ಒಂದು ಸ್ಪಷ್ಟ ಅರಿವಿರುವುದು ಈ ಚೈತ್ಯನಿಂದ. ಇಲ್ಲದಿದ್ದರೆ ಸದ್ಯಕ್ಕೆ ನೀವೇನಾಗಿರುವಿರಿ, ಅದನ್ನು ನೀವು ಮೂರು ವರ್ಷದವರಿದ್ದಾಗ ಏನಾಗಿದ್ದಿರಿ ಎನ್ನುವುದಕ್ಕೆ ಹೋಲಿಸಿದರೆ ನಿಸ್ಸಂಶಯವಾಗಿಯು ಯಾವುದೇ ರೀತಿಯಲ್ಲಿ, ಭೌತಿಕವಾಗಿ ಇಲ್ಲವೆ ಪ್ರಾಣಿಕವಾಗಿ ಅಥವಾ ಮಾನಸಿಕವಾಗಿ ನಿಮ್ಮನ್ನು ನೀವು

ಗುರುತಿಸಲಾರಿರಿ. ಅಲ್ಲಿ ಯಾವುದೇ ಪ್ರಕಾರದ ಹೋಲಿಕೆ ಇಲ್ಲ. ಆದರೆ ಪುರುಷನ ಪ್ರಗತಿಯನ್ನು, ಬೆಳವಣಿಗೆಯನ್ನು ಬೆಂಬಲಿಸುವ ಚೈತ್ಯನು ಹಿಂದುಗಡೆ ಇರುತ್ತಾನೆ ಮತ್ತು ಪ್ರಜ್ಞೆಯ ಈ ನಿರಂತರತೆಯನ್ನು ದಯಪಾಲಿಸುತ್ತಾನೆ, ಸಂಪೂರ್ಣವಾಗಿ ಬೇರೆ ಇದ್ದಾಗಲೂ ಸಹ ತಾನು ಅದೇ ಪುರುಷನೆಂದು ಭಾವಿಸುವಂತೆ ಮಾಡುತ್ತಾನೆ. ನಂತರದಲ್ಲಿ ಅವನು ತನ್ನನ್ನೇ ಸಾಕಷ್ಟು ಗಮನಿಸಿದರೆ, ಅವನು ತಿಳಿದುಕೊಂಡ ಮತ್ತು ಆ ಸಮಯದಲ್ಲಿ ಮಾಡಬಹುದಾದ ವಿಷಯಗಳು ಈಗ ಅವನಿಗೆ ಸ್ಪಷ್ಟವಾಗಿ ಕಲ್ಪನಾತೀತವಾಗಿ ತೋರುವ ವಿಷಯಗಳೆಂಬುದನ್ನು ನೋಡಬಹುದು ಮತ್ತು ಅವನು ಅದೇ ತರಹದ ಕೆಲಸವನ್ನು ಎಂದಿಗೂ ಮಾಡಲಾರ ಯಾಕೆಂದರೆ ಅವನು ಎಂದಿಗೂ ಆ ವ್ಯಕ್ತಿಯಾಗಿಯೆ ಇರಲಿಲ್ಲ. ಆಂತರಿಕದಲ್ಲಿ ಅವಿನಾಶಿಯಾದ ಚೈತ್ಯ ಪ್ರಜ್ಞೆ ಇದ್ದುದರಿಂದ ಯಾವಾಗಲೂ ಅಲ್ಲಿರುವಂಥವನು ಮತ್ತು ಹೆಚ್ಚು ಅಥವಾ ಕಡಿಮೆ ಪ್ರಗತಿಯೊಂದಿಗೆ ಮತ್ತು ಹೆಚ್ಚು ಅಥವಾ ಕಡಿಮೆ ಜಾಗೃತ ಬದಲಾವಣೆಗಳೊಂದಿಗೆ ಮುಂದುವರೆಯುವವನು ಅದೇ ಪುರುಷನೇ ಎಂಬ ಭಾವನೆ ಅವನಲ್ಲಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/218–19**

**ಅಮರತ್ವದ ಅಮೃತ (ಮಧು)**

ಪ್ರತಿಯೊಂದು ಧಾರ್ಮಿಕ ಪಂಥವು ದೇವರನ್ನು ಕಾಣುವ ತನ್ನದೇ ಆದ ವಿಧಾನ ಹೊಂದಿದೆ, ಆದುದರಿಂದ ಶ್ರೀ ಅರವಿಂದರು ಅವುಗಳನ್ನು ವಿವಿಧ ಮಡಕೆಗಳಿಗೆ ಹೋಲಿಸುತ್ತಾರೆ. ಆದರೆ ಅವರು ಹೇಳುತ್ತಾರೆ: ನೀವು ಯಾವುದೇ ಮಾರ್ಗ ಅನುಸರಿಸಿದರೂ ಸರಿ ಗುರಿಯು ಮಾತ್ರ ಮುಖ್ಯ, ಮತ್ತು ನೀವು ಯಾವುದಾದರೂ ಮಾರ್ಗ ಅನುಸರಿಸಿ, ಗುರಿಯು ಒಂದೇ. ಮಧುವನ್ನು ನೀವು ಯಾವುದಾದರೂ ಮಡಕೆಯಲ್ಲಿ ಹಾಕಿ ಅದು ಮಧುವಾಗೇ ಇರುತ್ತದೆ.

ಕೆಲವರು ಹೇಳುತ್ತಾರೆ ಮಡಕೆಯ ಪರಿಮಳ, ನೀವು ಅನುಸರಿಸುವ ಮಾರ್ಗ ಮಧುವಿನ ರುಚಿಯನ್ನು ಬದಲಾಯಿಸುತ್ತದೆ ಎಂದು, ಅಂದರೆ, ದಿವ್ಯದೊಡನೆ ನಿಮ್ಮ ಮಿಲನವನ್ನು ಬಾಧಿಸುತ್ತದೆ. ಅದಕ್ಕೆ ಶ್ರೀ ಅರವಿಂದರು ಹೀಗೆ ಉತ್ತರಿಸುತ್ತಾರೆ: ವಿಧಾನ ಬೇರೆಯಾಗಿರಬಹುದು, ಪ್ರತಿಯೊಬ್ಬರೂ ತಾವಿಷ್ಟಪಡುವ ಅಥವಾ ತಮ್ಮ ಅಭಿರುಚಿಗೆ ಹೊಂದುವ ವಿಧಾನವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ, ಆದರೆ

ಮಧು, ದಿವ್ಯದೊಡನೆ ಐಕ್ಯತೆ, ತನ್ನ ಅಮರತ್ವದ ಸಾಮರ್ಥ್ಯವನ್ನು ಯಾವಾಗಲೂ ಇರಿಸಿಕೊಳ್ಳುತ್ತದೆ.

ದಿವ್ಯದೊಂದಿಗೆ ಮಿಲನದಿಂದ ನಾವು ಅಮರತ್ವದ ಪ್ರಜ್ಞೆಯನ್ನು ಪಡೆದುಕೊಳ್ಳುತ್ತೇವೆ ಎಂದು ಹೇಳಿದಾಗ, ನಮ್ಮಲ್ಲಿರುವ ಪ್ರಜ್ಞೆಯು ಅವಿನಾಶಿಯಾದುದರೊಡನೆ ಒಂದಾಗುತ್ತದೆ ಮತ್ತು ತಾನು ಅವಿನಾಶಿಯಾಗಿದ್ದೇನೆ ಎಂದು ಭಾವಿಸುತ್ತದೆ ಎಂದು ಅರ್ಥ. ಅವಿನಾಶಿಯು ಇರುವ ಕ್ಷೇತ್ರದ ಬಗ್ಗೆ ಜಾಗೃತರಾಗುತ್ತೇವೆ. ಆದರೆ ಇದು ನಮ್ಮ ಭೌತಿಕ ವಸ್ತುವು ರೂಪಾಂತರಗೊಳ್ಳುತ್ತದೆ ಮತ್ತು ಅವಿನಾಶಿಯಾಗುತ್ತದೆ ಎನ್ನುವುದನ್ನು ಸೂಚಿಸುವುದಿಲ್ಲ. ಅದಕ್ಕಾಗಿ ನಿಜಕ್ಕೂ ಬೇರೆಯದೇ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಈ ಪ್ರಜ್ಞೆಯನ್ನು ನೀವು ಮಾತ್ರ ಮೊದಲಿಗೆ ಪಡೆದುಕೊಳ್ಳಲೇಬಾರದು, ಆದರೆ ಭೌತಿಕ ಜಗತ್ತಿನಲ್ಲಿ ಅದನ್ನು ಕೆಳಗಡೆ ತರಬೇಕು ಮತ್ತು ಅದನ್ನು ಒಂದು ಮಹತ್ತಾದ ಕಾರ್ಯವಾದ ಭೌತಿಕ ಪ್ರಜ್ಞೆಯ ಮತ್ತು ಭೌತಿಕ ವಸ್ತುವಿನ ರೂಪಾಂತರಣದ ಮೇಲೆ ಕಾರ್ಯ ಮಾಡಲು ಬಿಡಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/83–84**

## ಭೂಮಿಯ ಮೇಲೆ ಅಮರತ್ವದ ಅಭಿವ್ಯಕ್ತಿ

ಮಾನವತೆಯು ಮೊದಲಿಗೆ ಸೃಷ್ಟಿಸಲ್ಪಟ್ಟಾಗ 'ಅಹಂ' ಒಗ್ಗೂಡಿಸುವ ತತ್ವವಾಗಿತ್ತು. 'ಅಹಂ'ನ ಸುತ್ತ ಮುತ್ತ ಜೀವಿಯ ವಿಭಿನ್ನ ಅವಸ್ಥೆಗಳು ವರ್ಗೀಕರಿಸಲ್ಪಟ್ಟಿದ್ದವು; ಆದರೆ ಈಗ ಅತಿಮಾನವತೆಯ ಜನನದ ಸಿದ್ಧತೆಯಾಗುತ್ತಿರುವಾಗ ಅಹಂ ಮಾಯವಾಗಬೇಕು ಮತ್ತು ಮಾನವ ಜೀವಿಯಲ್ಲಿ ದೈವೀ ಮಧ್ಯಸ್ಥಿಕೆಯಿಂದ ನಿಧಾನವಾಗಿ ರೂಪುಗೊಂಡ ಚೈತ್ಯ ಪುರುಷನಿಗೆ ಮಾರ್ಗವನ್ನು ಬಿಟ್ಟು ಕೊಡಬೇಕು.

ಚೈತ್ಯನ ಪ್ರಭಾವದಡಿಯಲ್ಲಿ ದಿವ್ಯತೆಯು ಮನುಷ್ಯನಲ್ಲಿ ಪ್ರಕಟವಾಗುತ್ತದೆ ಮತ್ತು ಅತಿಮಾನವತೆಯ ಬರುವಿಕೆಗೆ ಸಜ್ಜುಗೊಳಿಸುತ್ತದೆ.

ಚೈತ್ಯನು ಅಮರ, ಅವಿನಾಶಿ ಮತ್ತು ಚೈತ್ಯನ ಮುಖಾಂತರ ಭೂಮಿಯ ಮೇಲೆ ಅಮರತ್ವವು ಪ್ರಕಟವಾಗುತ್ತದೆ.

ಈಗ ಪ್ರಮುಖವಾದ ವಿಷಯವೆಂದರೆ ನಮ್ಮ 'ಚೈತ್ಯ'ನನ್ನು ಕಂಡುಹಿಡಿಯುದು, ಅದರ ಜೊತೆ ಒಂದಾಗುವುದು ಮತ್ತು 'ಅಹಂ' ಅನ್ನು ಅದರಿಂದ

ಬದಲಿಸುವುದು, ಇದರಿಂದ ಪರಿವರ್ತನೆ ಹೊಂದಲು ಇಲ್ಲವೆ ಮಾಯವಾಗಲು ಬಲವಂತಗೊಳಿಸಲ್ಪಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/434** **– ಶ್ರೀಮಾತೆ**

ದಿವ್ಯತೆಯು ಚೈತ್ಯನ ಪ್ರಭಾವದಡಿ ಮನುಷ್ಯನಲ್ಲಿ ಪ್ರಕಟಗೊಳ್ಳುತ್ತದೆ, ಮತ್ತು ಹಾಗಾಗುವುದರಿಂದ ಅತಿಮಾನವತೆಯ ಬರುವಿಕೆಗೆ ಸಜ್ಜಾಗುತ್ತದೆ. ಚೈತ್ಯ ಪುರುಷನು ಅವಿನಾಶಿಯಾದುದರಿಂದ ಚೈತ್ಯನು ಅಮರತ್ವದ ಮುಖಾಂತರ ಭೂಮಿಯ ಮೇಲೆ ಪ್ರಕಟಗೊಳ್ಳುತ್ತಾನೆ.

ಆದ್ದರಿಂದ, ಈಗ ಪ್ರಮುಖವಾದ ವಿಷಯವೆಂದರೆ ನಮ್ಮ ಚೈತ್ಯನನ್ನು ಕಂಡುಹಿಡಿಯುದು, ಅದರ ಜೊತೆ ಒಂದಾಗುವುದು ಮತ್ತು 'ಅಹಂ' ಅನ್ನು ಅದರಿಂದ ಬದಲಿಸುವುದು, ಇದರಿಂದ ಪರಿವರ್ತನೆ ಹೊಂದಲು ಇಲ್ಲವೆ ಮಾಯವಾಗಲು ಬಲವಂತಗೊಳಿಸಲ್ಪಡುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 8, 1972**

## ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ನೋಟ

ಅದು ಮಾತ್ರ ಅಭ್ಯಸಿಸಿದ ಭೌತಿಕ ವಿಕಾಸದ ವಾಸ್ತವಾಂಶಗಳಿಂದ ವಾದಿಸುತ್ತ ಮತ್ತು ಈ ಮಿತಿಯಾಚೆಗಿನ ಎಲ್ಲ ಸಾಧ್ಯತೆಗಳನ್ನು ಹೊರತುಪಡಿಸಿ, ಈ ತೀರ್ಮಾನಕ್ಕೆ ಬರುವಲ್ಲಿ ವಿಜ್ಞಾನವು ಸಮರ್ಥಿಸಲ್ಪಟ್ಟಿದೆ, ಮತ್ತು ಒಂದು ತಾರ್ಕಿಕ ಉಪಸಿದ್ಧಾಂತವಾಗಿ, ಆತ್ಮನ ಅಮರತ್ವವನ್ನು ಅಲ್ಲಗಳೆಯುವಲ್ಲಿ ಅದು ಸಮರ್ಥಿಸಲ್ಪಟ್ಟಿದೆ. ಚೈತ್ತಿಕ ಚಟುವಟಿಕೆಗಳು ಭೌತಿಕ ಜೀವನದ ಕೇವಲ ತರುವಾಯದ ಹಾಗೂ ತಾತ್ಕಾಲಿಕ ಕಾರ್ಯವಾದರೆ ಮತ್ತು ತನ್ನ ಸ್ವಂತ ನಿರಂತರತೆಗಾಗಿ ಭೌತಿಕದ ಮೇಲೆ ಅವಲಂಬಿಸಿದರೆ, ಮೃತ್ಯುವಿನ ನಿಗೂಢ ಪ್ರತಿನಿಧಿಯಿಂದ ದೈಹಿಕ ಕಾರ್ಯಗಳ ಬಂಧನದೊಂದಿಗೆ ಭೌತಿಕ ಜೀವನವು ನಿಂತು ಹೋಗುತ್ತದೆ ಎಂದು ಅರ್ಥ, ಚೈತ್ತಿಕ ಚಟುವಟಿಕೆಯಾದ ಮನುಷ್ಯ ವ್ಯಕ್ತಿತ್ವವು ಅಂತ್ಯಕ್ಕೆ ಬರಲೇಬೇಕು. ದೇಹವು ಸಾವಿಗೀಡಾದಾಗ ಪ್ರಾಣವೂ ಸಹ ಹೋಗುತ್ತದೆ; ಹೂವು ಅದು ಬೆಳೆಯುವ ಸಸ್ಯವನ್ನು ಮೀರಿಸುತ್ತದೆ ಅಥವಾ ಒಂದು ಮನೆಯು ತನ್ನ ಅಡಿಪಾಯಗಳ ನಾಶದಿಂದ ಪಾರಗುವದಕ್ಕಿಂತ ಅದು

ದೇಹವನ್ನು ಮೀರಿಸುವುದಿಲ್ಲ. ದೇಹವು ಕಾಂಡ, ಆತ್ಮವು ಹೂವು; ದೇಹವು ಅಡಿಪಾಯ, ಆತ್ಮವು ಒಂದು ಬೆಳಕು ಮತ್ತು ತಾತ್ಕಾಲಿಕ ಮಹತ್ ರಚನೆ. ಇದಕ್ಕೆಲ್ಲಾ ಹಿಂದೂ ಚಿಂತನೆಗಳು ನೇರ ನಿರಾಕರಣೆಯನ್ನು ನೀಡುತ್ತವೆ. ವಿಜ್ಞಾನವು ಭೌತಿಕ ಸ್ವರೂಪವನ್ನು ತನಿಖೆ ಮಾಡುವಷ್ಟು ಭೌತಿಕ ಜೀವನವನ್ನು ತನಿಖೆ ಮಾಡುವ ವಿಧಾನಗಳನ್ನು ಕಂಡುಹಿಡಿದಿದೆ ಎಂದು ಅದು ಹೇಳುತ್ತದೆ ಮತ್ತು ಅದರ ತನಿಖೆಯ ಬೆಳಕಿನಲ್ಲಿ ಅದು ದೇಹಕ್ಕಿಂತ ಮೊದಲು ಅತ್ಮ ಅಸ್ತಿತ್ವದಲ್ಲಿದೆ ಮತ್ತು ಅದನ್ನು ಮೀರಿಸುತ್ತದೆ ಎಂದು ಘೋಷಿಸುತ್ತದೆ. ಇದು ಭೌತಿಕ ಜೀವನವಾಗಿದ್ದು ಅದು ಭೌತಿಕದಿಂದ ವಿಕಸನವಾಗಿದೆ ಮತ್ತು ದೈಹಿಕ ಚಟುವಟಿಕೆಗಳ ನಂತರದ ಮತ್ತು ತಾತ್ಕಾಲಿಕ ಕಾರ್ಯಕ್ಕಿಂತ ಹೆಚ್ಚಿನದಲ್ಲ. ದೇಹವು ಹೂವು, ಆತ್ಮವು ಕಾಂಡ; ಆತ್ಮವು ಅಡಿಪಾಯ, ದೇಹವು ದುರ್ಬಲ ಮತ್ತು ಅಸ್ಥಿರ ಮಹತ್ ರಚನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 17/236–37**

**ನಮ್ಮೊಳಗಡೆ ಇರುವ ಅವಿನಾಶಿ ಆತ್ಮ**

ಆತ್ಮವನ್ನು ಜೀವ ಹಾಗೂ ಜಡವಸ್ತುವಿನಲ್ಲಿ ಇರುವ ದಿವ್ಯ ಚೈತನ್ಯದ ಒಂದು ಕಿಡಿ ಎಂದು ವರ್ಣಿಸಲಾಗುತ್ತದೆ, ಅದೊಂದು ರೂಪ. ಅದನ್ನು ಪ್ರಜ್ಞೆಯ ಕಿಡಿ ಎಂದು ವರ್ಣಿಸಲಾಗಿಲ್ಲ.

ಅಲ್ಲಿ ಚೈತ್ಯನಿಂದ ಬೇರೆಯಾದ ಮಾನಸಿಕ, ಚೈತನ್ಯ, ಭೌತಿಕ ಪ್ರಜ್ಞೆ ಇದೆ. ಚೈತ್ಯ ಪುರುಷ ಮತ್ತು ಪ್ರಜ್ಞೆ ಒಂದೇ ಬಗೆ ಅಲ್ಲ.

ಆತ್ಮ ಅಥವಾ "ದಿವ್ಯ ಚೈತನ್ಯದ ಕಿಡಿ"ಯು ಒಂದು ಚೈತ್ಯ ವೈಯಕ್ತಿಕತೆನ್ನು ಬೆಳೆಸಲು ಪ್ರಾರಂಭ ಮಾಡಿದಾಗ, ಆ ಚೈತ್ಯ ವೈಯಕ್ತಿಕತೆನ್ನು ಚೈತ್ಯ ಪುರುಷ ನೆಂದು ಕರೆಯಲಾಗುತ್ತದೆ.

ಆತ್ಮ ಅಥವಾ ಕಿಡಿ ಪ್ರಾಣದ ಮತ್ತು ಮನಸ್ಸಿನ ಒಂದು ವ್ಯವಸ್ಥಿತವಾದ ವಿಕಸನಕ್ಕಿಂತ ಮೊದಲು ಅಲ್ಲಿತ್ತು. ಆತ್ಮವು ವಿಕಸನದಲ್ಲಿ ದಿವ್ಯ ತತ್ವವಾಗಿ ಕೆಳಗಿಳಿಯುವಂಥ, ಅದರಲ್ಲಿ ವ್ಯಕ್ತಿಯ ವಿಕಸನವನ್ನು ಅಜ್ಞಾನದಿಂದ ಬೆಳಕಿಗೆ ಬೆಂಬಲಿಸುವ ದೈವದ ಒಂದು ಭಾಗ. ಅದು ವಿಕಾಸದ ಮಾರ್ಗದಲ್ಲಿ ವಿಕಸಿಸುವ ಮನಸ್ಸು, ಪ್ರಾಣ ಮತ್ತು ದೇಹವನ್ನು ತಮ್ಮ ಸಾಧನವನ್ನಾಗಿ ಬಳಸುತ್ತ ಜನ್ಮದಿಂದ

ಜನ್ಮಕ್ಕೆ ಬೆಳೆಯುವಂಥ ಒಂದು ಚೈತ್ಯ ವ್ಯಕ್ತಿಯಾಗಿ ಅಥವಾ ವ್ಯಕ್ತಿಗತ ಆತ್ಮವಾಗಿ ಅಭಿವೃದ್ಧಿ ಹೊಂದುತ್ತದೆ. ಉಳಿದೆಲ್ಲವೂ ವಿಘಟಿಸುವ ಸಮಯದಲ್ಲಿ ಶಾಶ್ವತವಾಗಿರುವುದು ಆತ್ಮ; ಅದು ಮೂಲಸ್ವರೂಪದಲ್ಲಿ ತನ್ನ ಅನುಭವಗಳನ್ನು ಮತ್ತು ವ್ಯಕ್ತಿಯ ವಿಕಸನದ ನಿರಂತರತೆಯನ್ನು ಒಯ್ಯುತ್ತ ಜನ್ಮದಿಂದ ಜನ್ಮಕ್ಕೆ ಹಾದು ಹೋಗುತ್ತದೆ.

ಪೂರ್ಣ ಪ್ರಜ್ಞೆ, ಮಾನಸಿಕ, ಚೈತನ್ಯ, ದೈಹಿಕವೂ ಸಹ ಉನ್ನತ ಪ್ರಜ್ಞೆಗೆ ಏರಿಕೆಯಾಗಬೇಕು ಮತ್ತು ಒಮ್ಮೆ ಸೇರಿಕೊಂಡ ನಂತರ ಉನ್ನತವಾದವುಗಳು ಅವುಗಳಲ್ಲಿ ಇಳಿಯಬೇಕಾಗುತ್ತದೆ. ಚೈತ್ಯವು ಎಲ್ಲದರ ಹಿಂದೆ ಇದೆ ಮತ್ತು ಅದನ್ನು ಬೆಂಬಲಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/119–20**

ಅದು ದೇಹದ ಅಮರತ್ವ ಅಲ್ಲ, ಆದರೆ ಅಧಿಮಾನಸದ ಭೌತದಲ್ಲಿ ಅಥವಾ ಭೌತಿಕ ಮನಸ್ಸಿನಲ್ಲಿಯೂ ಸಹ ಇಳಿಯುವಿಕೆಯ ಜೊತೆಗೆ ಅಥವಾ ಭೌತಿಕ ಮಾನಸ ಪ್ರಜ್ಞೆಯ ಮೇಲೆ ಮಾರ್ಪಡಿಸಿದ ಸುಪ್ರಮಾನಸದ ಸ್ಪರ್ಶದೊಂದಿಗೆ ಬರುವ ದೇಹದಲ್ಲಿನ ಅಮರತ್ವದ ಪ್ರಜ್ಞೆ. ಇವುಗಳು ಪ್ರಾರಂಭಿಕ ಅವಕಾಶಗಳು, ಆದರೆ ಅವು ಭೌತಿಕದಲ್ಲಿ ಸುಪ್ರಮಾನಸದ ನೆರವೇರಿಕೆ/ಈಡೇರಿಕೆ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/119–20 – ಶ್ರೀ ಅರವಿಂದರು**

ನಮ್ಮೊಳಗಿನ ದಿವ್ಯತೆಗೆ ಏರುವ ಮೂಲಕ ನಾವು ಸ್ವತಂತ್ರರಾಗುತ್ತೇವೆ, ಪ್ರಪಂಚದ ಬಂಧನದಿಂದ ಮತ್ತು ಸಾವಿನ ಬಲೆಯಿಂದ ಮುಕ್ತರಾಗುತ್ತೇವೆ. ದೇವರು ಮುಕ್ತ, ದೇವರು ಅಮರತ್ವ. ಸಾವನ್ನು ದಾಟಿದ ಮೇಲೆ ನಾವು ಅಮರತ್ವವನ್ನು ಆನಂದಿಸುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 17/304 – ಶ್ರೀ ಅರವಿಂದರು**

# ಪ್ರಾಚೀನ ಧರ್ಮ ಗ್ರಂಥಗಳಲ್ಲಿ ಅಮರತ್ವ

**– ಅನುವಾದ: ಶ್ರೀ ಪುಟ್ಟು ಕುಲಕರ್ಣಿ**

## ಅಮರತ್ವದೆಡೆಗೆ ಪಥ

ಮರಣವೆನ್ನುವದು ಒಂದು ಸಹಜ ಸಂಗತಿಯಾಗಿದೆ ಎಂದುಕೊಂಡೇ ಭೌತಿಕ ಜಗತ್ತು ತನ್ನ ಆಯಾಮ ರೂಪಿಸಿಕೊಂಡಿದೆ ಮತ್ತು ಹೆಚ್ಚಿನಂಶದಲ್ಲಿ ಈ ರೀತಿಯ ಮೃತುವಶವರ್ತಿ ಅಸ್ತಿತ್ವದ ಬಗೆಗೆ 'ಹೆಚ್ಚಿನ ಪ್ರಮಾಣದ ಮಿಥ್ಯಾವಾದದ'ಲ್ಲಿಯೇ ಮನುಷ್ಯನೂ ಜೀವಿಸುತ್ತಿದ್ದಾನೆ. ಈ ಸಾವಿನಾಚೆಯಲ್ಲಿಯೇ 'ಉದಿತ'ಗೊಳ್ಳಲು, ಅಮರತ್ವವನ್ನು ಹೊಂದಿರುವಂತೆ ಪರಿವರ್ತನಗೊಳ್ಳಲು ಅವನು ಮೊದಲು ಈ ಭ್ರಮಾವಾದದ(ಮಿಥ್ಯಾವಾದದ) ಆವರಣದಿಂದ ಹೊರಗೆ ಬರಬೇಕಾಗಿದೆ; ಋತದ ಕಡೆಗೆ ಚಲಿಸಬೇಕಾಗಿದೆ. ಬೆಳಕಿನ ಕಡೆಗೆ ಅವನು ಚಲಿಸುತ್ತಾ, ತಮದ ಶಕ್ತಿಗಳನ್ನು ನಿಯಂತ್ರಿಸುವಲ್ಲಿ ಅವುಗಳೊಡನೆ ಹೋರಾಡಿ ಜಯಿಸುವಲ್ಲಿ ಸಂಗ್ರಾಮ ಮಾಡಬೇಕಾಗಿದೆ. ಇದಕ್ಕಾಗಿ ಅವನು ದಿವ್ಯಶಕ್ತಿಗಳ ಸಂಗಾತಿಯಾಗಿ ಮತ್ತು ಆ ಶಕ್ತಿಗಳಿಂದ ಸಹಾಯ ಪಡೆದುಕೊಂಡು ಸಂಗ್ರಾಮದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕಾಗಿದೆ. ಈ ರೀತಿಯ ದೈವೀ ಸಹಾಯವನ್ನು ಭೂಮಿಗೆ ಅವತರಣಗೊಳಿಸುವ ಮಾರ್ಗವೇ 'ವೇದದ ಅನುಭಾವಗಳಾಗಿವೆ'. ಇಲ್ಲಿ ಮೇಲ್ನೋಟಕ್ಕೆ ತ್ಯಾಗ(ಬಲಿ) ಎಂದು ಸಂಕೇತಿಸಲ್ಪಟ್ಟಿರುವದೆಲ್ಲವೂ – ಇದು ಜಗತ್ತಿನ ಇತರ ಭಾಗಗಳಲ್ಲಿಯೂ ಇದೇ ರೀತಿ ಇದೆ – ಆಂತರ್ಯದಲ್ಲಿ ರಹಸ್ಯಗಳನ್ನು ಒಳಗೊಂಡ ಪ್ರತಿಮೆಗಳಾಗಿವೆ; ಇವುಗಳೆಲ್ಲವೂ ಆ ದೇವನನ್ನು ಈ ಮಾನವ ಜೀವಿಯಲ್ಲಿ ಸಾರೂಪ್ಯಗೊಳಲು, ಅದಕ್ಕಾಗಿ ಆಗಮಿಸಲು ಕೊಡುವ ಕರೆಗಳೇ ಆಗಿವೆ. ಅದು ತ್ಯಾಗದೊಂದಿಗೆ ಸಂಪರ್ಕ ಹೊಂದಿ, ಆಂತರ್ಯದಲ್ಲಿಯೇ ಪರಸ್ಪರ ಪರಿವರ್ತನಗೊಳ್ಳುವ ಮೂಲಕ ಮನನಗೊಳ್ಳುವ, ಆತ್ಮೀಯವಾಗಿರುವ, ಪರಸ್ಪರ ಸಹಾಯಕವಾಗಿರುವ ಮತ್ತು ಒಂದು ಸಂಘಟನಾತ್ಮಕವಾದ ಸಂಗಾತಿತನವಾಗಿರುತ್ತದೆ.

ಈ ದೇವಗಣಗಳ ಶಕ್ತಿಗಳ ಸಂರಚನೆಯೊಂದು ಅಲ್ಲಿ ಸ್ಥಿತವಿದ್ದು, ಅದು ಮಾನವನ ಆಂತರ್ಯದಲ್ಲಿಯೇ ಇರುತ್ತದೆ, ಮತ್ತು ಈ ಮೂಲಕವೇ ಅವನಲ್ಲಿಯೇ ದಿವ್ಯ ಸ್ವಭಾವವನ್ನು ಹೊಂದಿರುವ ವೈಶ್ವಿಕತೆಯನ್ನು(ವಿಶ್ವಾತ್ಮವಾಗುವದನ್ನು) ಧಾರಣ ಮಾಡಿಕೊಳ್ಳುವದಕ್ಕೆ ಇರುತ್ತದೆ. ದೇವತೆಗಳಿಗೂ ಮಾರ್ಗದರ್ಶಕರಂತೆ

ಇರುವ ಹಾಗು ಸತ್ಯವನ್ನು ವಿಸ್ತೃತಗೊಳಿಸುತ್ತ ಋತದ ಸ್ವರೂಪದಲ್ಲಿ ಪರಿವರ್ತಿಸುವತ್ತ, ಅಮರತ್ವವನ್ನು ಹೊಂದಿರುವ ಈ ಶಕ್ತಿಗಳು, ಅನಂತಾನಂತವಾಗಿ ಆದ್ಯಂತರಹಿತವಾಗಿರುವ ಮಾತೆಯ ಪುತ್ರರೇ ಆಗಿದ್ದಾರೆ. **ಅಮರತ್ವದೆಡೆಯ ಪಥ ಎಂದರೆ, ದೇವತೆಗಳ ಆರೋಹಣ ಪಥ**. ಸತ್ಯವು ಊರ್ಧ್ವಗಾಮಿಯಾಗಿ ಚಲಿಸುತ್ತಿರುವ ಪಥ. ಇದೊಂದು ಪ್ರಯಾಣವಾಗಿದೆ. ಇದೊಂದು ಅಧಿರೋಹಣವಾಗಿದ್ದು, ಇದು ಪ್ರಗತಿಯಾದಂತೆ ವಿಶ್ವ ನಿಯಮ ಅಂದರೆ ಋತದ ಶಾಸನ ಅಥವಾ ನಿಯತಿಯ ನಿರ್ಮಾಣವಾಗುತ್ತದೆ.ಇದನ್ನೇ **"ಋತಸ್ಯ ಪಂಥಾಃ"** ಎನ್ನುವದು. ಭೌತಿಕದ ಅಡಚಣೆಗಳನ್ನು ಮತ್ತು ಸೀಮಿತತನವನ್ನು ಮೀರಿ ಮಾನವನು ಊರ್ಧ್ವಗಾಮಿಯಾಗಿ, ಕೇವಲ ತನ್ನ ಭೌತಿಕ ಅಸ್ತಿತ್ವನ್ನಷ್ಟೇ ಅಲ್ಲದೇ, ಅವನ ಮಾನಸಿಕ ವಿಕಾಸವೂ ಸಹಿತ ಅಷ್ಟೇ ಸಹಜವಾಗಿ ಲಭ್ಯವಾಗುವಂತೆ ಇರುತ್ತದೆ.

ಶಾರೀರಿಕ ಅಸ್ತಿತ್ವವನ್ನು ಮೀರಿಕೊಂಡು ಆರೋಹಣ ಮಾಡಿದಲ್ಲಿ–ಅದೂ ಆ ಊರ್ಧ್ವಾತಿಊರ್ಧ್ವದಲ್ಲಿರುವ ಸ್ತರಕ್ಕೆ ಹಾಗು ಆ ಪರಮೋಚ್ಚವಾಗಿರುವ ಪರಮ ಪರಿಶುದ್ಧವಾಗಿರುವ ಪರಾಕಾಶದ ಸದಾ ತರಲತೆಯಲ್ಲಿರುವ ದೇದೀಪ್ಯಮಾನ–ವಾಗಿರುವ – ಸ್ತರಕ್ಕೆ ಅಂದರೆ ಋತದ ನೆಲೆಯನ್ನು ತಲುಪುತ್ತಾನೆ. **ಇಲ್ಲಿಯೇ ಅಮರತ್ವದ ಮೂಲ ಸೆಲೆ ಇರುತ್ತದೆ**. ಇದು ಜೊತೆಜೊತೆಗೆ ತ್ರಿಪುಟಿಯಾಗಿರುವ ಅನಂತತೆಯ ಮೂಲಪೀಠವೂ ಇದೇ ಆಗಿದೆ. ಈ ಚಿಂತನಗಳ ಆಧಾರದ ಮೇಲೆಯೇ ವೇದಕಾಲದ ಋಷಿ–ಮುನಿಗಳು ಪರಿಪೂರ್ಣ ಮನಶ್ಶಾಸ್ತ್ರದ ಹಾಗೂ ಪ್ರಾಣಿಕ ವ್ಯವಸ್ಥೆಯ ತನ್ನದೇ ವ್ಯಾಪ್ತಿಯನ್ನು ಮೀರಿ ಪರಮೋಚ್ಚ ಆಧ್ಯಾತ್ಮಿಕತೆಯ ಹಂತವನ್ನು ಸೃಷ್ಟಿಸಿದ್ದಾರೆ. ಇದೇ ಮುಂದೆ ಭಾರತದ ಯೋಗ ಪರಂಪರೆಗೆ ಮೂಲಭೂತ ಅಂಶಗಳಾಗಿ ಮಾನ್ಯಗೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹೀಗಾಗಿ, ನಾವು ಈಗ ಆ ವಿಷಯಗಳ ಮೂಲಬಿಂದು(ಬೀಜ) ಎಲ್ಲಿದೆ ಎನ್ನುವದನ್ನು ಅರಿತುಕೊಂಡು, ಅವು ಇನ್ನೂ ಸಂಪೂರ್ಣವಾಗಿ ವ್ಯಾಪ್ತಗೊಳಿಸಲ್ಪಡದೇ ಇದ್ದರೂ ಸಹಿತ, ಇವೇ ಇಂದಿಗೂ ಎಂದಿಗೂ ಭಾರತೀಯ ಆಧ್ಯಾತ್ಮಿಕತೆಯ ಪ್ರಮುಖ ಗುಣಗಳಾಗಿವೆ ಎನ್ನುವದನ್ನು ಮನನ ಮಾಡಿಕೊಳ್ಳಬೇಕಾಗಿದೆ.

ಅಲ್ಲಿರುವದು ಕೇವಲ **"ಏಕತ್ವ"** ಮಾತ್ರ. ಅದು **"ಏಕ ಸತ್ತೆಯಾಗಿದೆ"**. ಇದು ವೈಯಕ್ತಿಕ ಹಾಗೂ ವೈಶ್ವಿಕ ಆಯಾಮಕ್ಕಿಂತ ಆಚೆ ಆಚೆ ಇರುವ ಪರಾಕಾಶ (Paracosmic)ವೇ ಆಗಿದೆ. ಅಲ್ಲಿರುವದೆ ಒಬ್ಬನೇ ದೇವರು. ಅವನೇ ನಮಗೆ

ಹಲವು ವಿಧದಲ್ಲಿ, ರೂಪಗಳಲ್ಲಿ ತನ್ನನ್ನು ತಾನೇ ಪ್ರಕಟಿಸಿಕೊಳ್ಳುತ್ತಾನೆ. ಹಲವು ನಾಮಗಳಲ್ಲಿ, ಹಲವು ವ್ಯಕ್ತಿತ್ವಗಳಲ್ಲಿ ಅಂದರೆ ಆ ಪರಮಪುರುಷನ ಅಂಶಗಳಾಗಿ ಪ್ರಕಟಿಸಿಕೊಳ್ಳುತ್ತಾನೆ.

ಜ್ಞಾನಕ್ಕೂ ಮತ್ತು ಅಜ್ಞಾನಕ್ಕೂ ಮಧ್ಯದಲ್ಲಿ ಒಂದು ಅಂತರವಿದೆ. ಅಮೃತತ್ವದ ಜೀವನದ ಪರಮ–ಸತ್ಯವು ಯಾವಾಗಲೂ ಮಿಥ್ಯೆಯ ಬಾಹುಳ್ಯವನ್ನು ಎದುರಿಸಿಯೇ ಮತ್ತು ಮರ್ತ್ಯ ಜೀವನದ ಅಸ್ತಿತ್ವದಲ್ಲಿಯೇ ಪ್ರಗತಿಯನ್ನು ಸಾಧಿಸುವ ವಿಧಾನವಾಗಿದೆ. ಇದು ಮಾನವನನ್ನು ಭೌತಿಕದ ಹಂತದಿಂದ ಆಧ್ಯಾತ್ಮಿಕ ಅಸ್ತಿತ್ವವಾಗಿರುವ ಚೈತ್ಯದಲ್ಲಿ ಪ್ರಗತಿಯಾಗುವತ್ತ ಇರುವ ಹಂತವಾಗಿದೆ. ಇಲ್ಲಿ ಮೃತ್ಯುವಿನ ಮೇಲೆ ವಿಜಯ ಸಾಧಿಸುವ ಹಂತವಾಗಿದೆ. ಇದು ಅಮರತ್ವದ ರಹಸ್ಯವೂ ಹೌದು. ಇದೇ ಮಾನವನ ಶಕ್ತಿಯು(ಸಾಮರ್ಥ್ಯವು) ಸಾಕ್ಷಾತ್ಕರಿಸಿ–ಕೊಳ್ಳಬಹುದಾದ ದಿವ್ಯತ್ವದ ಅನುಭೂತಿಯೂ ಆಗಿದೆ. ನಮ್ಮ ಬಾಹ್ಯ–ಜ್ಞಾನದ ಡಾಂಭಿಕತೆಯಲ್ಲಿಯೇ ಇದ್ದ ಅವಧಿಯಲ್ಲಿ ನಾವು ಮಾನವೀಯತೆಯ ಪ್ರಾರಂಭಿಕ (ಬಾಲ್ಯಾವಸ್ಥೆಯ) ಹಂತಗಳನ್ನು ಪುನರಾವಲೋಕನದಲ್ಲಿ ಕಾಣಲು ಹೊಂದಿಕೊಳ್ಳುತ್ತಿದ್ದೇವೆ. ಅಭ್ಯಾಸ ಮಾಡಿಕೊಂಡಿದ್ದೇವೆ. ಇಲ್ಲವೇ ಬರ್ಬರತೆಯೇ ಪ್ರಧಾನವಾಗಿ ಪ್ರದರ್ಶನಗೊಳ್ಳುತ್ತಿದ್ದ ಅವಧಿಯಲ್ಲಿಯೇ ಉತ್ತಮವಾದ, ಆಶಾದಾಯಕವಾದ ಅವಧಿ ಇದಾಗಿದೆ ಎನ್ನುವದನ್ನೂ ಕಂಡುಕೊಂಡಿದ್ದೇವೆ. ಇದಕ್ಕೇ ಪ್ರಾಚೀನ ಕಾಲದ ಮಾನವಕುಲವು ಪ್ರಭಾವಿತವಾಗಿದ್ದು ಮತ್ತು ಪ್ರಜ್ಞಾಪೂರ್ಣ ಚೈತ್ಯದ ಹಾಗೂ ಆಧ್ಯಾತ್ಮಿಕ ಬೋಧನೆಗಳನ್ನಾಗಿಸಿಕೊಂಡಿದ್ದರು ಎಂದು ಕಾಣಿಸುತ್ತದೆ. ಇದನ್ನೇ **"ಪೂರ್ವೇ ಪಿತರೌ ಮನ್ಯು"** ಎನ್ನುವದು. ಇವರೇ ಭಾರತದ ಮಹತ್ತರವಾಗಿರುವ ಹಾಗೂ ಸದೃಢವಾಗಿರುವ ನಾಗರಿಕತೆಗಳನ್ನು ಬುನಾದಿಗೊಳಿಸಿದ್ದಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/202–03**

**ಅಮರತ್ವವನ್ನು ಪಡೆಯಲು ಯಾರು ಅರ್ಹತೆಯನ್ನು ಹೊಂದಿದ್ದಾರೆ?**

ಇದು ಖಚಿತವಾಗಿಯೂ ಯಾವ ವಿಷಯವನ್ನು ಹೇಳುತ್ತಿದೆ? ಇದೇ ಪರಮೋಚ್ಚ ಗಮ್ಯವೇ? ಮಾನವನ ಜೀವನದ ಈ ವ್ಯವಸ್ಥೆಯಲ್ಲಿ ಜನನ–ಮರಣಗಳ ಆವರ್ತನಾ ಸರಣಿಗಳ ಪುನರಾವರ್ತನೆಯಲ್ಲಿ ಅದೂ ಕಲ್ಪ ಕಲ್ಪಗಳಲ್ಲಿ

ಅವಿರತವಾಗಿಯೇ ಜಗತ್ತಿನಲ್ಲಿ, ಇದೇ ಆವರ್ತನಾಶೀಲ ವ್ಯವಸ್ಥೆಯಾಗಿ ಜೊತೆಗೆ ಸುದೀರ್ಘವಾಗಿಯೂ ಇದೆ. ಈ ಸುದೀರ್ಘವಾಗಿರುವ ಹಂತದಲ್ಲಿಯೇ ಮಾನವನು ಪ್ರಗತಿಯನ್ನು ಸಾಧಿಸುವ ಮೂಲಕವೇ, ಸಿದ್ಧಿಗೊಳ್ಳುತ್ತ ಮತ್ತು ಕ್ರಮೇಣ ಕ್ರಮೇಣವಾಗಿ ಅಮರತ್ವವನ್ನು ತನ್ನಷ್ಟಕ್ಕೆ ತಾನೇ ಸಾಧಿಸಿಕೊಳ್ಳುವ ಹಂತಕ್ಕೆ ತಲುಪುತ್ತಾನೆ. ಹಾಗಾದರೆ ಈ ಸಿದ್ಧತೆಯೆಲ್ಲ ಅವನಲ್ಲಿಯೇ ಘಟಿಸುವಂತೆ, ಅವನು ಅದಕ್ಕೆ ತನ್ನನ್ನು ತಾನೆ ಹೇಗೆ ಸಿದ್ಧಗೊಳಿಸಿಕೊಳ್ಳಬೇಕು? ಮಾನವರಲ್ಲಿ ಯಾರು ಯಾರು ಇದಕ್ಕೆ ಅರ್ಹರು? ಎಂದರೆ, ಯಾವ ಮಾನವನು ತನ್ನನ್ನೇ ಮಿಡಿದ ಪರಿಕಲ್ಪನೆಯನ್ನು ಮೀರಿ ಆಚೆ ಆಚೆ ತನ್ನನ್ನು ತಾನೇ ವಿಕಸಿಸಿಕೊಳ್ಳುತ್ತಾನೆಯೊ – ಅಂದರೆ, ಜೀವನ ಮತ್ತು ಶರೀರ ಸೀಮಿತ ಹಂತದಿಂದ ಮೇಲೇರುತ್ತಾನೆಯೋ, ಯಾರು ಈ ಲೌಕಿಕ ಜಗತ್ತಿನ ಸಂವೇದನಾತ್ಮಕವಾಗಿರುವ ಸ್ಪರ್ಶಗಳನ್ನೂ ಯಾವಾಗಲೂ ದೂರವಿರಿಸಿಕೊಳ್ಳಲು ಸಮರ್ಥನಾಗುತ್ತಾನೆಯೋ, ಜೊತೆಜೊತೆಗೆ ಆ ಸಂವೇದನಾತ್ಮಕವಾಗಿರುವ ಸ್ಪರ್ಶಗಳಿಗೂ ಅವುಗಳದೇ ಆದ ನಿಗದಿತ ಮೌಲ್ಯಗಳನ್ನು ಗೌರವಿಸುತ್ತಲೇ ದೂರವಿಟ್ಟುಕೊಳ್ಳುತ್ತಾನೆಯೋ, ಅಥವಾ, ಅವು ಭೌತಿಕ–ವಲಯದಲ್ಲಿ ಮಾನವನು ಎಷ್ಟು ಪ್ರಮಾಣದಲ್ಲಿ ಇವುಗಳೊಡನೆ ಸಂಪರ್ಕವನ್ನು ಹೊಂದಿರಬೇಕೋ ಅಷ್ಟನ್ನು ಮಾತ್ರವೇ ಹೊಂದಿರುತ್ತಾನೆಯೋ, ಮತ್ತೆ ಮುಖ್ಯವಾಗಿ ತನ್ನನ್ನು ತಾನೇ ತಿಳಿದುಕೊಂಡಿರುತ್ತಾನೆಯೋ, ಹಾಗೂ ಎಲ್ಲ ಆತ್ಮಸ್ವರೂಪಗಳನ್ನು ಅರಿತುಕೊಂಡಿರುತ್ತಾನೆಯೋ, ಇವುಗಳ ಸಂಗಡವೇ ಅವನದೇ ಆತ್ಮವೂ ನೆಲೆ ಹೊಂದಿರುವದನ್ನು ಕಲಿಯುವ ಮೂಲಕ ಯಾರು ದೇಹ ಭಾವದಲ್ಲಿ ಮಾತ್ರ ಇರದೇ, ಇತರರೊಡನೆ ವ್ಯವಹರಿಸುವಾಗಲೂ ಸಹಿತ ಅವರೆಲ್ಲರೂ ಈ ಭೌತಿಕದ ಜೀವಿಗಳಾಗಿರದೇ ಅವರೂ ಸಹಿತ ತನ್ನಂತೆಯೇ ಆತ್ಮಸ್ವರೂಪಿಗಳು ಎಂದು ತಿಳಿದುಕೊಂಡಿರುತ್ತಾನೆಯೋ ಅಂತಹ ವ್ಯಕ್ತಿಗಳಿಗೆ ಈ ಅಮರತ್ವದ ಪಥವು ಸುಲಭ ಸಾಧ್ಯವಾಗುತ್ತದೆ. ಅಮರತ್ವ ಅಥವಾ **ಅಮೃತತತ್ವ** ಎಂದರೆ ಕೇವಲ **"ಸಾವಿನಿಂದ ತಪ್ಪಿಸಿಕೊಳ್ಳುವದು"** ಎಂದರ್ಥವಲ್ಲ. ಏಕೆಂದರೆ ಇದು ಪ್ರತಿಯೊಂದು ಜೀವಿಗೂ ಜನ್ಮಜಾತವಾಗಿಯೇ ರೂಪುಗೊಂಡಿರುತ್ತದೆ. ಆದರೆ ಇದು ಜನನ–ಮರಣಗಳ ಆಚೆ ತುರೀಯಾತೀತವಾಗಿರುವ ವಿಶ್ವಾತೀತತೆಯಾಗಿದೆ.

ಇದರ ಅರ್ಥವೆಂದರೆ, ಮಾನವನು ಮನೋನಿರ್ದೇಶಿತ ಶರೀರದ ಬಂಧನದಲ್ಲಿರುವ ಹಂತದಿಂದ, ಆರೋಹಣದ ಮೂಲಕವೇ ಊರ್ಧ್ವ–ನೆಲೆಯತ್ತ

ಸಾಗಿ, ಅಂತಿಮದಲ್ಲಿ **ಪ್ರಾಣದ ಭಾವಶಕ್ತಿಯಾಗಿ (spirit of Spirit)** ಹಾಗೂ **ಆತ್ಮವೇ** ಆಗಿ ವಾಸಿಸುವ ಹಂತವಾಗಿದೆ. ಯಾರೆ ಆಗಲಿ ದುಃಖ–ದುಗುಡಗಳಲ್ಲಿ ಸಿಲುಕಿಕೊಂಡಲ್ಲಿ, ರಾಗಗಳಿಗೆ ಹಾಗೂ ಸಂವೇದನೆಗಳಿಗೆ ದಾಸರಾಗಿದ್ದಲ್ಲಿ, ಮತ್ತು ಕ್ಷಣಿಕ ಸುಖದ ಸ್ಪರ್ಶವನ್ನು ನೀಡುವ ವಿಷಯಗಳಿಗೆ ಬಂಧಿತರಾಗಿರುವ ಸಂದರ್ಭವಿರುವಲ್ಲಿ, ಅಲ್ಲಿ ಈ ಅಮರತ್ವವು ಯಾವ ಕಾರಣಕ್ಕೂ ಪ್ರಾಪ್ತವಾಗುವದಿಲ್ಲ. ಎಲ್ಲಿಯವರೆಗೂ ಈ ವಸ್ತು–ವಿಷಯಗಳ ಮೇಲೆ ವಿಜಯ ಸಾಧ್ಯವಾಗುವದಿಲ್ಲವೋ ಅಲ್ಲಿಯವರೆಗೂ ಅವು ಈ ರೀತಿ ಹುಟ್ಟುತ್ತಲೇ ಇರುತ್ತವೆ. ಆದರೆ ಓರ್ವ ಮುಕ್ತಾತ್ಮನಿಗೆ ಮಾತ್ರ ಇವು ಯಾವ ರೀತಿಯಿಂದಲೂ ಯಾತನೆ ನೀಡಲು ಸಾಧ್ಯವಿಲ್ಲ. ಎಲ್ಲಿಯವರೆಗೂ ಈ ಜಗತ್ತಿನ ಲೌಕಿಕ ಘಟನೆಗಳು – ಅವು ಯಾವುದೇ ರೀತಿಯಲ್ಲಿ ಇದ್ದರೂ, ಬಂದರೂ ಅಂದರೆ ಅವು ಸಂತೋಷದಾಯಕವಾಗಿಯೋ ಅಥವಾ ದುಃಖಪೂರಿತವಾದವುಗಳೋ ಆಗಿದ್ದರೂ ಸಹಿತ, ಅವುಗಳನ್ನು ಸಮಚಿತ್ತದಿಂದಲೇ ಸ್ವೀಕರಿಸುತ್ತಿರುವವರೆಗೂ ಯಾವ ತೊಂದರೆಯೂ ಉದ್ಭವಿಸುವದಿಲ್ಲ. ಅಂದರೆ ನಮ್ಮಂತರಂಗದಲ್ಲಿಯೇ ಇರುವ ಪ್ರಶಾಂತಮಯವಾದ ಶಾಶ್ವತವಾಗಿರುವ ಆತ್ಮದ ರಹಸ್ಯವು ಇವುಗಳನ್ನು ಎಲ್ಲಿಯವರೆಗೂ ಈ ಹಂತದಲ್ಲಿ ಸ್ವೀಕರಿಸುತ್ತಿರುವದೋ, ಅಲ್ಲಿಯವರೆಗೂ ಯಾವುದೇ ತೊಂದರೆ ಬರಲು ಸಾಧ್ಯವಿಲ್ಲ.

ಅರ್ಜುನನು ಹೇಗೆ ದುಃಖ ಹಾಗೂ ಭಯದಿಂದ ಅಸ್ತವ್ಯಸ್ತಗೊಂಡಂತೆ ಇದ್ದನೋ, ಪಯಣಿಸಬೇಕಾದ ಪಥದಿಂದ ವಿಚಲಿತಗೊಳ್ಳುವ ಹಾಗೆ ಸ್ವಯಂಕರುಣೆ(ಸ್ವಾತ್ಮಾನುತಾಪ) ಹಾಗೂ ದುಃಖದ ಮೂಲದಿಂದ ಹುಟ್ಟಿರುವ ಅಸಹನೆಗಳಿಂದ ಮುಕ್ತಗೊಂಡು ಹೊರಗೆ ಬರುವದಿಲ್ಲವೋ, ಜೊತೆಗೆ ಅನಿವಾರ್ಯತೆಗಳ ಬಲದಿಂದಲೂ ಹೊರಗೆ ಬರುವದಿಲ್ಲವೋ, ದೇಹದ ಸಾವಿನಂತಹ (ದೇಹತ್ಯಾಗ) ಸಂದರ್ಭಗಳ ಕ್ಷುಲ್ಲಕ ಸಂಗತಿಗಳಿಂದ ಬಿಡುಗಡೆ–ಗೊಳ್ಳುವದಿಲ್ಲವೋ, ಅಲ್ಲಿಯವರೆಗೂ ಇವೆಲ್ಲವೂ ಒಟ್ಟಿನಲ್ಲಿ ಅನಿವಾರ್ಯವಾಗಿಯೇ ಅಸ್ತಿತ್ವದಲಿರುವ ಹಾಗೆ ಅಜ್ಞಾನದ ಸ್ವರೂಪವಾಗಿವೆ. ಇಂತಹ ಸಂದರ್ಭದಲ್ಲಿರುವ ಜೀವನವು, – ಆ ಅಮೃತತ್ವದ ಕುರಿತ ಚಿಂತನವು ಆರ್ಯ ವಿಧಾನದ (ಪರಿಷ್ಕೃತ ಹಾಗೂ ಪರಿಪೂರ್ಣ ವಿಧಾನದ) ಆರೋಹಣದ ಮೂಲಕ ಅದೇ ಕ್ರಮದಲ್ಲಿಯೇ – ಅಮೃತತ್ವ ನೆಲೆಯ ಜೀವನವನ್ನು ಸಾಧಿಸುವ ಕಡೆಗೆ ಪ್ರಶಾಂತಪೂರ್ಣವಾಗಿರುವ ಸಾಮರ್ಥ್ಯವನ್ನು ಪಡೆದುಕೊಳ್ಳುವದಿಲ್ಲ.

**ಅವಿನಾಶಿಯಾದ "ಸ್ವತ್ವ"**

ಸಾವು ಎನ್ನುವದು ಒಂದು ವಿಷಯ ಅಲ್ಲವೇ ಅಲ್ಲ. ಏಕೆಂದರೆ ಅದು ಅಸ್ತಿತ್ವದಲ್ಲಿ ಇಲ್ಲವೇ ಇಲ್ಲ. ಆದರೆ ಈ ಸಾವಿನ ಹಂತವೆನ್ನುವದು ಕೇವಲ ದೇಹಕ್ಕೆ ಮಾತ್ರ. ಹೀಗಾಗಿ ದೇಹ ಮಾತ್ರ ಸಾಯುತ್ತದೆ(ಕಣ್ಮರೆಯಾಗುತ್ತದೆ). ಆದರೆ ಮಾನವನೂ ಅಲ್ಲ ಮತ್ತು ಅವನಾತ್ಮವಂತೂ ಅಲ್ಲವೇ ಅಲ್ಲ. ಆದ್ದರಿಂದ ಯಾವುದು ನಿಜವಾಗಿಯೂ ಇದೆಯೋ ಅದು ಅಸ್ತಿತ್ವವನ್ನು ಎಂದಿಗೂ ಕಳೆದುಕೊಳ್ಳುವದಿಲ್ಲ. ಅದು ಆಯಾ ರೂಪಗಳಲ್ಲಿ ಅಭಿವ್ಯಕ್ತಗೊಳ್ಳುತ್ತಿದ್ದು, ಪರಿವರ್ತನದ ಸ್ವರೂಪದಲ್ಲಿ ಅವಿರತವಾಗಿಯೇ ಘಟಿಸುತ್ತಿರುತ್ತದೆ. ಹೀಗಾಗಿ ಯಾವುದಕ್ಕೆ ಅಸ್ತಿತ್ವವೇ ಇಲ್ಲವೋ ಅದು ಎಂದಿಗೂ "ಜೀವಿ"ಯಾಗಿ ರೂಪು ಪಡೆಯುವದಿಲ್ಲ.

ಆತ್ಮವು 'ಸ್ವಯಂಭೂ' ಆಗಿದೆ. ಹೀಗಾಗಿ 'ಅದು ಇದೆ'. ಅದನ್ನು ಯಾರೂ ಬಂಧಿಸಲು ಸಾಧ್ಯವಿಲ್ಲ. ಹೀಗಾಗಿ ಈ 'ಇದೇ"ಅಂದರೆ ಸತ್ ಎನ್ನುವದು ಯಾವಾಗಲೂ 'ಇಲ್ಲ' ಎನ್ನುವದರ ವಿರುದ್ಧವಾಗಿಯೇ ಇರುತ್ತದೆ. ಈ ಶುದ್ಧ ಸನ್ಮಾತ್ರವು(ಸತ್ತೆಯು) ಮತ್ತು ಭಾವನಾ–ರೂಪ(ಭಾವ–ಸ್ವರೂಪ– Being and Becoming)ಗಳೆರಡರ ಸಮನ್ವಯತೆಯು, ಮನಸ್ಸು ಹೊಂದಿರುವ ಅಸ್ತಿತ್ವದ ದೃಷ್ಟಿಕೋನವಾಗಿರುತ್ತದೆ. ಆತ್ಮಸಾಕ್ಷಾತ್ಕಾರದ ಹಂತದಲ್ಲಿ ಇದರ ಅಂತಿಮ ಸ್ವರೂಪವನ್ನು ಕಂಡು, ಅದು ಅವಿನಾಶಿಯಾಗಿರುವ "ಸ್ವಯಂ" ಆಗಿದ್ದು, ಅದರ ಮೂಲಕವೇ ವಿಶ್ವವು ವ್ಯಾಪ್ತಗೊಳ್ಳುತ್ತದೆ ಎನ್ನುವದು ಅರಿವಾಗುತ್ತದೆ.

ಸಾಂತ–ರೂಪಗಳು (ನಿರ್ದಿಷ್ಟ ಆಕಾರ ಹೊಂದಿದ ರಚನೆಗಳು–ದೇಹಗಳು) ಒಂದು ಅಂತಿಮ ಘಟ್ಟವನ್ನು ಹೊಂದಿರುತ್ತವೆ. ಆದರೆ ಯಾವುದು ಈ ಸಂರಚನೆಯನ್ನು (ದೇಹಧಾರಣೆ ಅಥವಾ ರೂಪಧಾರಣೆಯನ್ನು) ಧಾರಣ ಮಡಿಕೊಳ್ಳುತ್ತಿದೆಯೋ ಹಾಗೂ ಈ ಸಂರಚನೆಯನ್ನು ಬಳಸಿಕೊಳ್ಳುತ್ತಿದೆಯೋ, "ಅದು" ಮಾತ್ರ ಯಾವಾಗಲೂ ಅನಂತಾನಂತವಾಗಿಯೇ ಇರುತ್ತದೆ. ಸೀಮಾತೀತವಾಗಿರುತ್ತದೆ. ಶಾಶ್ವತವಾಗಿರುತ್ತದೆ. ಯಾವ ರೀತಿಯಿಂದಲೂ ಘಾಸಿಗೆ ಒಳಪಡುವದಿಲ್ಲ. ಇದು ಹಳೇಯದನ್ನೆ ಮತ್ತೆ ಎರಕ ಹೊಯ್ದು ಹೊಸರೂಪ ಕೊಟ್ಟಂತೆ ಇರುತ್ತದೆ. ಅಂದರೆ ಮಾನವನು ತಮ್ಮ ಹಳೆಯ ವಸ್ತ್ರಗಳನ್ನು ಬಿಸುಟು ಹೊಸವಸ್ತ್ರಗಳನ್ನು ಧರಿಸುವಂತೆಯೇ ಇದೂ ಸಹಿತ ಹೊಸ ಶರೀರಿವನ್ನು ಧಾರಣೆ

ಮಾಡಿಕೊಳ್ಳುತ್ತದೆ. ಹೀಗಾಗಿ ಇಲ್ಲಿ ಶೋಕಿಸುವದಕ್ಕಾಗಲೀ, ಅಂತಿಮ ಹಂತದಲ್ಲಿ ಹಿಮ್ಮೆಟ್ಟುವಿಕೆಯಂತಃ ಸಂದರ್ಭಗಳನ್ನು ಎದುರಿಸುವದಾಗಲೀ ಹಾಗೂ ಸಂಕುಚಿತಗೊಳ್ಳುವಂತಾಗಲೀ ಇರುವ ಯಾವ ಅಂಶಗಳೂ ಇಲ್ಲಿ ಇಲ್ಲ.

ಹಾಗೆಂದು ಇದು ಮರುಜನ್ಮವಲ್ಲ. ಅಲ್ಲದೇ ಇದಕ್ಕೆ ಸಾವೆನ್ನುವದೂ ಇಲ್ಲ. ಅದೂ ಅಲ್ಲದೇ ಒಂದು ಜೀವಯ ಸ್ವರೂಪದಲ್ಲಿಯೇ ಒಮ್ಮೆ ಆಗಮಿಸಿ, ಮತ್ತೆ ಅಲ್ಲಿಂದ ನಿರ್ಗಮಿಸಿ ಹಾಗೂ ಮತ್ತೆಂದೂ ಅದೇ ಜೀವಿಯಾಗಿಯೇ ಮರಳಿ ಬರುವ ವಿಷಯವೂ ಇದಲ್ಲ. ಇದಕ್ಕೆ ಹುಟ್ಟೂ ಇಲ್ಲ; ಆದಿಮೂಲವಾಗಿದ್ದು ಇದೇ ಚಿರಂತನವೂ ಆಗಿರುತ್ತದೆ. ಇದು 'ದೇಹದೊಂದಿಗೆ' ಸಾಯುವ ವಸ್ತುವೂ ಅಲ್ಲ. ಅಮರವಾಗಿರುವ ಆತ್ಮವನ್ನು ಯಾರು ತಾನೆ ಸಾವಿಗೆ ಗುರಿಪಡಿಸಬಲ್ಲರೂ? ಯಾವ ಶಸ್ತ್ರಗಳೂ ಇದನ್ನು ಘಾತಿಸಲಾರವು. ಇದನ್ನು ಯಾವ ಜ್ವಾಲೆಗಳೂ ದಹಿಸಲು ಸಾಧ್ಯವಿಲ್ಲ. ಯಾವ ಜಲವೂ ಇದನ್ನು ಮುಳುಗಿಸಲು ಸಾಧ್ಯವಿಲ್ಲ. ಯಾವ ಪವನವೂ ಸಹಿತ ಇದನ್ನು ಶುಷ್ಕಗೊಳಿಸಲು ಸಾಧ್ಯವಿಲ್ಲ. ಶಾಶ್ವತವಾಗಿಯೇ ಸ್ಥಿರವಾಗಿರುವ, ಹೀಗಾಗಿ ಸುಸ್ಥಿರವೇ ಆಗಿರುವ, ಅವಕಾಶದಲ್ಲಿ ಎಲ್ಲೆಡೆಗೂ ವ್ಯಾಪಿಸಿರುವ ಇದು, ಶಾಶ್ವತತೆಯ ಸಲುವಾಗಿಯೇ ಇರುತ್ತದೆ. ಇದೇ ಶಾಶ್ವತೆಯೇ ಆಗಿದೆ. ಇದು ದೇಹದ(ರೂಪದಲ್ಲಿ)ಲ್ಲಿ ಅಭಿವ್ಯಕ್ತಗೊಳ್ಳುವದಿಲ್ಲ. ಆದರೆ ಇದು ಎಲ್ಲ ಅಭಿವ್ಯಕ್ತಿಗಳಿಗಿಂತಲೂ ಮಹೋನ್ನತವಾಗಿದ್ದು, ಇದನ್ನು ಯಾವುದೇ ಚಿಂತನಗಳಿಂದಲೂ ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಿಲ್ಲ. ಆದರೆ ಎಲ್ಲ ಮನೋಮಯ ವಲಯಕ್ಕಿಂತ ಮಹತ್ತಾಗಿದ್ದು, ಯಾವ ರೀತಿಯಿಂದಲೂ ಪರಿವರ್ತನೆಗೊಳ್ಳದಂತಿರುತ್ತದೆ. ಈ ಜೀವನ ಮತ್ತು ಇದರ ಅಂಶಗಳಿಂದಲೂ ಪರಿವರ್ತಗೊಳಿಸಲು ಸಾಧ್ಯವಿಲ್ಲ. ಅದರ ಉದ್ದೇಶಗಳಿಂದ ವಿಚಲಿತಗೊಳಿಸಲು ಸಾಧ್ಯವಿಲ್ಲ. ಆದರೆ ಇದು ಮನಕ್ಕಾತೀತ ಮತ್ತು ದೇಹಾತೀತ ಪರಿವರ್ತನಗಳಿಂದ ತದುತ್ತರದಲ್ಲಿಯೇ ಇರುತ್ತದೆ. ಇದೇ ವಾಸ್ತವವೇ ಈ ರೀತಿಯ ಶ್ರಮ–ಸ್ವರೂಪ ವ್ಯವಸ್ಥೆಯಲ್ಲಿ ರೂಪಧಾರಣೆ ಮಾಡುತ್ತಿರುವ ಘಟನೆಯಾಗಿರುತ್ತದೆ.

**ಜನನ ಮರಣಗಳು ಮೈಲುಗಲ್ಲುಗಳು**

ನಮ್ಮ (ಜೈವಿಕ) ಸತ್ತೆಯ ಆ ಸತ್ಯವು ಅಲ್ಪ ಪ್ರಮಾಣದ ಭವ್ಯತೆಯನ್ನು (ಉದಾತ್ತತೆಯನ್ನು) ಹೊಂದಿರುವ ವಸ್ತುವೇ ಆಗಿದ್ದರೂ, ಜನನ–ಮರಣಗಳ

ಹಂತಕ್ಕೆ ಅಮೂರ್ತವಾಗಿದ್ದರೂ, ಅಥವಾ ಒಂದು ವೇಳೆ ಈ ಜನನ–ಮರಣಗಳ ವಿಷಯಕ್ಕೆ ಚಿರಂತನವಾಗಿಯೇ ಈ ನಮ್ಮ ಸತ್ತೆಯೂ ಸಂಬಂಧಪಟ್ಟಿದ್ದರೆ, ಆಗಲೂ ಸಹಿತ, ಈ ಮರಣ ಎನ್ನುವದು ದುಃಖಕ್ಕೆ ಕಾರಣ ಎಂದು ಪರಿಭಾವಿಸಲು ಬರುವದಿಲ್ಲ. ಇದು ಆತ್ಮದ ಸ್ವಯಂ–ಅಭಿವ್ಯಕ್ತಿಗೊಳ್ಳುವಿಕೆಯಲ್ಲಿ (ಆತ್ಮೋನ್ಮೀಲನ) ಅನಿವಾರ್ಯವಾಗಿರುವ ಸಂದರ್ಭವಾಗಿದೆ. ಇದರ ಹುಟ್ಟು(ಜನ್ಮವೂ)ಸಹಿತ ನಿಗದಿತವಾಗಿರುವ ಕೆಲವು ಹಂತಗಳಿಂದ(ಸ್ತರಗಳಿಂದ) ಅಂದರೆ ಅಲ್ಲಿ ಯಾವುದು ಅಸ್ತಿತ್ವದಲ್ಲಿ ಇಲ್ಲವಾಗಿತ್ತೋ ಆದರೆ ಅದು ನಮ್ಮ ಮರ್ತ್ಯ ಸಂವೇದನೆಗಳಿಗೆ ಅಭಿವ್ಯಕ್ತಗೊಂಡಿರುವದಿಲ್ಲ. ಇದರ ಸಾವೂ ಸಹಿತ ಇದೇ ರೂಪವನ್ನು ತ್ಯಜಿಸುವ (ವಿಭಜಿತಗೊಳ್ಳುವ) ಜಗತ್ತಿಗೆ ಮರಳಿ ಪಯಣಿಸುವ ಪ್ರಕ್ರಿಯೆಯಾಗಿದೆ. ಅಥವಾ ಆ ಸ್ಥಿತಿಯಲ್ಲಿ ಇದ್ದು, ಜೊತೆಗೆ ಮತ್ತೆ ಇದು ಭೌತಿಕ ರೂಪಾಂತರಣಗಳಲ್ಲಿ ಕಾಣಿಸಿಕೊಳ್ಳುತ್ತದೆ. ಈ ಆಗು–ಹೋಗುಗಳೆಲ್ಲವೂ ಸಾವಿನ ಕುರಿತು ಭೌತಿಕ ಮನಸ್ಸಿನಲ್ಲಿ ಮತ್ತು ಸಂವೇದನೆಗಳಲ್ಲಿರುವ ವಿಷಯವಾಗಿದೆ. ಅದರಲ್ಲೂ ಸಾವಿನ ಭಯಾನಕತೆಯ ಬಗೆಗೆ, ಆ ವ್ಯಕ್ತಿಯು ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ ಹಂತದಲ್ಲೋ ಅಥವಾ ರಣಾಂಗಣದಲ್ಲಿಯೋ, ಒಟ್ಟಿನಲ್ಲಿ ಅವೆಲ್ಲವೂ ಬಹುತೇಕವಾಗಿ ಅಜ್ಞಾನದಿಂದ ಕೂಡಿರುವ ಮಾನಸಿಕ ಕೋಲಾಹಲದ ಅವಸ್ಥೆಯಲ್ಲಿಯೇ ಇರುತ್ತವೆ. ಓರ್ವ ವ್ಯಕ್ತಿಯ ಸಾವಿನ ಬಗೆಗಿನ ನಮ್ಮ ದುಃಖವು ಅಜ್ಞಾನದಿಂದ ಕೂಡಿರುವ ದುಃಖವಾಗಿದೆ. ಆದರೆ ಯಾರು ಈ ವಿಷಯವಾಗಿ ದುಃಖಿಸುತ್ತಿದ್ದಾರೆಯೋ, ಅವರು ನಿಜವಾಗಿಯೂ ಆ ರೀತಿಯಲ್ಲಿ ದುಃಖಿಸುವ ಸಂಭವವೇ ಇರುವದಿಲ್ಲ. ಏಕೆಂದರೆ, ಯಾರು ಸಾವಿಗೆ ಒಳಗಾಗಿದ್ದಾರೆ ಎಂದು ಭಾವಿಸಲಾಗುತ್ತದೆಯೋ ಅವರು ಖಂಡಿತವಾಗಿಯೂ ಅಸ್ತಿತ್ವದಿಂದ ದೂರವಾಗಿ ಸಾವಿಗೆ ಸಿಲುಕಿರುವದಿಲ್ಲ. ಅವರು ಯಾವುದೇ ಯಾತನಾಪೂರಿತ ಘಟನೆಗಳಿಂದ ತೊಂದರೆಗೆ ಒಳಗಾಗುವದಿಲ್ಲ ಅಥವಾ ಭಯಾನಕತೆಯಿಂದ ತತ್ತರಿಸುವ ಹಂತಕ್ಕೂ ಸಾಗಿರುವದಿಲ್ಲ. ಆದರೆ, ಅವರು ಸಾವಿನಾಚೆಯ ಹಂತದಲ್ಲಿದ್ದು, ಜೀವನದ ಹಂತದಲ್ಲಿದ್ದಾಗ ಇರುವದಕ್ಕಿಂತಲೂ ಹೆಚ್ಚು ಅಸಂತೋಷವಲ್ಲದ ಸ್ಥಿತಿಯಲ್ಲಿರುತ್ತಾರೆ ಹಾಗೂ ಜೀವನದ ಹಂತದಲ್ಲಿರುವದಕ್ಕಿಂತ ಕಡಿಮೆ ಇರದ ಹಂತದ 'ಜೀವನ–ಸ್ವರೂಪ'ದಲ್ಲಿ ಇರುತ್ತಾರೆ.

ಆದರೆ ವಾಸ್ತವದಲ್ಲಿ, ಆ ಪರಮಸತ್ಯವೇ ನಿಜವಾದ ಸತ್ಯವಾಗಿದೆ. ಅಲ್ಲಿರುವವರೆಲ್ಲ ಆ ಪರಮಾತ್ಮನೇ ಆಗಿದ್ದು, ಆ ಏಕವೇ ಆಗಿರುತ್ತದೆ. ಆ

ದಿವ್ಯತ್ವವನ್ನು ನಾವು ಕಾಣಬಹುದಾಗಿದೆ. ಅದರೊಡನೆ ಸಂಭಾಷಿಸಬಹುದಾಗಿದೆ. ಆಲಿಸಬಹುದಾಗಿದೆ. ನಮ್ಮ ಗ್ರಹಿಕೆಗೂ ಮೀರಿರುವ ಅದ್ಭುತವು ಇದಾಗಿದೆ. ಅದರಲ್ಲೂ ನಮ್ಮೆಲ್ಲರ ಬದುಕಿನ ಬಯಕೆಗಳಾಗಲಿ, ಕಾಣುತ್ತಿರುವದಾಗಲಿ, ಮತ್ತು ಜ್ಞಾನದ ಮೂಲಕ ಘೋಷಿಸುತ್ತಿರುವಾಗಲೂ ಹಾಗು ಇದರ ಕುರಿತು ಕಲಿಯುತ್ತಿರುವದಾಗಲಿ, ಎಲ್ಲವನ್ನೂ ಯಾರು ಹೊಂದಿದ್ದಾರೆಯೋ ಅವರಿಂದ ಕಲಿಯುತ್ತಿರುವ ಸಂದರ್ಭದಲ್ಲಿ, ಮಾನವನ ಮನಸ್ಸು 'ನಿರ್ವಿಶೇಷ'ದಿಂದ ಕಲಿಯುತ್ತಿದ್ದೇವೆ ಎನ್ನುವದನ್ನು ಪೂರ್ತಿಯಾಗಿ ಗ್ರಹಿಸಿರುವದಿಲ್ಲ. ಹೀಗಾಗಿ ಗವಸಿನೊಳಗಡೆ ಇರುವ ಜಗತ್ತನ್ನು ನಾವು ಕಾಣುತ್ತಿದ್ದೇವೆ. ಈ ಜಗತ್ತಿನ ಒಡೆಯ ಆ ಗವಸಿನ ಒಳಗಡೆಯೇ ಇರುತ್ತಾನೆ. ನಮ್ಮ ಜೀವನವೇ ಅದರ ಛಾಯೆಯಾಗಿರುತ್ತದೆ. ಈ ರೀತಿಯಲ್ಲಿ ಭೌತಿಕ ರೂಪದಲ್ಲಿ ಆತ್ಮವು ಆಗಮಿಸಿ – ಜೀವಿಸಿ ಮತ್ತೆ ಇಲ್ಲಿಂದ ತನ್ನ ಮೂಲ ನೆಲೆಗೆ 'ಸಾವಿನ ಮೂಲಕವೇ' ಸಾಗಿ ಹೋಗುವದೆಲ್ಲವೂ ಅದರ ಅತ್ಯಂತ ಸಣ್ಣ ಸಂಗತಿಗಳಾಗಿವೆ. ಯಾವಾಗ ಇದನ್ನು ನಮ್ಮಲ್ಲಿಯೇ ನಾವು ಅರಿತುಕೊಳ್ಳುತ್ತೇವೆಯೋ, ಆಗ ನಾವು ನಮ್ಮನ್ನೇ ಘಾತಕಕ್ಕೆ ಒಳಪಡಿಸಿಕೊಳ್ಳುವದಾಗಲಿ ಅತವಾ ಘಾತಿಗೊಳಿಸುವದೆಂದು ಕರೆದುಕೊಳ್ಳುತ್ತೇವೆ. ಈ ರೀತಿಯಲ್ಲಿ ಪರಿಭಾವಿಸುವದೂ ಒಂದು ಅಸಂಬದ್ಧತೆಯೇ ಆಗಿದೆ. ಏಕೈಕವಾಗಿ ಇರುವ ಆ ಪರಮಸತ್ಯದಲ್ಲಿಯೇ ನಾವೆಲ್ಲ ಜೀವಿಸಬೇಕಾಗಿದೆ. ಆ ಶಾಶ್ವತವಾಗಿರುವ ಹಾಗೂ ತನ್ನಷ್ಟಕ್ಕೆ ತಾನೇ ಸ್ವಯಂ ಅಭಿವ್ಯಕ್ತಿಗೊಳ್ಳಲು ಮಾನವನ ಆತ್ಮದ ಸ್ವರೂಪದಲ್ಲಿ– ಯಾತ್ರೆಗೆ ಆಗಮಿಸುವ ಪಯಣಿಗನಂತೆ– ಆಗಮಿಸಿರುವ ಈ ಚಕ್ರದ–ಸುತ್ತಿನ ನಿರಂತರತೆಯಲ್ಲಿ, ಜನನ–ಮರಣಗಳ ಮೂಲಕ ಇರುವ ಈ ನಿರಂತರ ಸುತ್ತುವಿಕೆಯಲ್ಲಿ ಇರುವ ಮೈಲುಗಲ್ಲಾಗಳಾಗಿವೆ. ವಿಶ್ರಾಂತಿ ತಾಣಗಳ ಹಾಗೆ ಆಚೆ ಆಚೆ ಇರುವ ಲೋಕಗಳ ಜೊತೆಗೆ ಜೀವನದುದ್ದಕ್ಕೂ ನಾವು ಅನುಭವಿಸುವ ಸುಖ ಮತ್ತು ದುಃಖದ ಘಟನೆಗಳ ಮೂಲಕವೇ ನಮ್ಮ ಪ್ರಗತಿಯ ಹಾದಿಯೂ ರೂಪಿತವಾಗುತ್ತ ಇರುತ್ತದೆ. ಜೀವನದ ಸಂಗ್ರಾಮದಲ್ಲಿ ಹೋರಾಡುವ ಮೂಲಕ ವಿಜಯವನ್ನು ಪಡೆದುಕೊಂಡು, ಆ ಮೂಲಕ ಆತ್ಮಗಳು ಪಯಣಿಸುವ ಮೂಲಕ ಆ ಅಮರತ್ವವು ಅವುಗಳ ಮೂಲ ನೆಲೆಯಾಗಿರುವದನ್ನು ಪಡೆದುಕೊಳ್ಳಲು ಇರುವ ಪ್ರಯಾಣವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/61–64**

## ಅಮರತ್ವದ ಅಂತರಾರ್ಥ

ಪ್ರಾಚೀನ ಅಧ್ಯಾತ್ಮಿಕ ಬೋಧೆಗಳಲ್ಲಿ ಎಲ್ಲಿಯೂ ಈ ಅಮರತ್ವವನ್ನು ಪಡೆದು ಅಮರರಾಗಿಯೇ ಉಳಿಯುವ ಘಟನೆ ಘಟಿಸಿಲ್ಲ. ಅದರಲ್ಲು ದೇಹದ ಅವಸಾನದ ಮೂಲಕ ತಪ್ಪಿಸಿಕೊಂಡ ವ್ಯಕ್ತಿಯಾಗಿಯೇ ಉಳಿಯುವಂತಹ ಯಾವ ಘಟನೆಯೂ ಇಲ್ಲಿ ರೂಪಿತವಾಗಿಲ್ಲ. ಹಾಗೆ ನೋಡಿದರೆ, ಎಲ್ಲ ಜೀವಿಗಳೂ ಅಮರತ್ವವನ್ನು ಹೊಂದಿಯೇ ಜೀವಿಸುತ್ತಾರೆ. ಆದರೆ ಅವುಗಳ ಬಾಹ್ಯ ಸ್ವರೂಪವು ಮಾತ್ರ ಕರಗಿ ಹೋಗಿರುತ್ತದೆ. ಕಣ್ಮರೆಯಾಗಿರುತ್ತದೆ. ಯಾವ ಆತ್ಮಗಳು ಮುಕ್ತಿಯ ಹಂತಕ್ಕೆ ತಲುಪುವದಿಲ್ಲವೋ, ಅವು ಪುನಃ ಪುನಃ ಆವರ್ತಗೊಳ್ಳುವ ಕಲ್ಪಗಳ ಮೂಲಕ ಮರಳಿ ಬರುತ್ತ ಮತ್ತೆ ಮರಳಿ ಹೋಗುತ್ತ ಇರುತ್ತವೆ. ಅಸ್ತಿತ್ವದಲ್ಲಿ ಇರುವದೆಲ್ಲವೂ ಇಲ್ಲಿ ಭಾಗಿಯಾಗಿ(ಅಂಶಾಂಶವಾಗಿಯೇ) ಇರುತ್ತದೆ. ಇಲ್ಲವೇ ರೂಪಾಂತರಗೊಂಡಿರುವ ಲೋಕಗಳು ಬ್ರಹ್ಮನಲ್ಲಿಯೇ ವಿಭಜಿತಗೊಳ್ಳುತ್ತಿರುವಾಗ ಹಾಗೂ ಮತ್ತೆ ಜನ್ಮ ತಳೆದು ದೃಶ್ಯಗೊಳ್ಳುತ್ತಿರುವ ಮೂಲಕ ಹೊಸ ಯುಗಕ್ಕೆ ಕಾರಣವಾಗುತ್ತವೆ. ಪ್ರಳಯ ಎನ್ನುವದು ಕಲ್ಪ–ಕಲ್ಪಗಳ ಚಕ್ರದ ಆವರ್ತನೆಯಲ್ಲಿ ಒಂದು ನಿಗದಿತವಾಗಿರುವ ಅಂತಿಮ ಬಿಂದುವಾಗಿದೆ. ಈ ವಿಘಟನೆಯೂ ಸಹಿತ ಅಸ್ತಿತ್ವದಲ್ಲಿರುವ ವಿಶ್ವದ ರೂಪಗಳ ತಾತ್ಕಾಲಿಕ ವಿಘಟನಾತ್ಮಕ ರೂಪಾಂತರವೇ ಆಗಿರುತ್ತದೆ. ಜೊತೆಜೊತೆಗೆ ಪ್ರತಿಯೊಂದೂ ವಸ್ತು–ವ್ಯಕ್ತಿಗಳ ರೂಪ–ಸ್ವರೂಪಗಳು ಈ ಆವರ್ತನದಲ್ಲಿ ಒಳಗೊಂಡಿರುತ್ತವೆ. ಆದರೆ ಇದು ಕ್ಷಣಕಾಲ ವಿರಮಿಸಿದಂತೆ ಕಾಣುತ್ತದೆ. ಈ ಕ್ಷಣಕಾಲದ ವಿರಾಮವು ಮುಂದೆ ಘಟಿಸಲಿರುವ ಮಹಾಸ್ಫೋಟದ ಮೂಲಕ ಆಗಮಿಸಲಿರುವ ನೂತನ ಸೃಷ್ಟಿ ಮತ್ತು ಜೀವನ ವ್ಯವಸ್ಥೆಯ ಮುಂದುವರಿಕೆಯಾಗಿರುತ್ತದೆ. ಇದರ ಸಲುವಾಗಿಯೇ ಇಲ್ಲಿ (ಈ ಕ್ಷಣಕಾಲದ ಮೌನದ ಮಧ್ಯಂತರವು ರೂಪಿತವಾಗಿರುತ್ತದೆ) ಪುನರ್–ಸಂಘಟನೆಗೊಳ್ಳುವ ಮೂಲಕ ಮುಂದುವರೆಯುತ್ತದೆ. ಈ ರೀತಿ ಮುಂದುವರೆಯುತ್ತಲೇ ಮತ್ತೆ ಏಕಾತ್ಮವಾಗುವ ಹಾಗೂ ಪುನರ–ಸಂರಚನೆಗೊಳ್ಳುವ ಹಂತದ ಮೂಲಕ ಅಲ್ಲಿ ಮತ್ತೆ ಪ್ರತ್ಯಕ್ಷವಾಗಿ ಹಾಗೂ ಅವುಗಳ ಪ್ರಗತಿಯನ್ನು ಪ್ರೇರಣೆಗೆ ಒಳಪಡಿಸುವಂತೆ ಮರಳಿ ಪಡೆದುಕೊಳ್ಳುವ ಸಲುವಾಗಿ ಇರುವ ಮೌನ–ಮಧ್ಯಂತರದ ವಿರಾಮದ ಹಂತವಾಗಿರುತ್ತದೆ.

ನಮ್ಮ ದೇಹದ ಸಾವೂ ಸಹಿತ ಇದೇ ರೀತಿಯಲ್ಲಿಯೇ ಇರುವ ಪ್ರಳಯದ ಹಾಗೆ ಇರುತ್ತದೆ. ಭಗವದ್ಗೀತೆಯು ಈ 'ಸಾವಿನ' ಕುರಿತು 'ಪ್ರಲಯಾವ್ಯೈದೇಹಾಭಿರ್'

ಎಂದೇ ಹೇಳಿದೆ. ಅಂದರೆ ಯಾವ ಆತ್ಮವು ದೇಹದಲ್ಲಿ ಬಂಧನದಲ್ಲಿ ಇರುತ್ತದೆಯೋ ಆ ದೇಹಕ್ಕೆ ಪ್ರಳಯವಿರುತ್ತದೆ. ಅಂದರೆ ಈ ರೂಪವು ವಿಘಟನೆಗೊಳ್ಳುತ್ತದೆ. ಜಡದಿಂದ ಕೂಡಿ ಅಜ್ಞಾನದಲ್ಲಿಯೇ ಗುರುತಿಸಲ್ಪಡುವ ಅದನ್ನೇ ಅಸ್ಮಿತೆ ಎಂದು ಪರಿಗಣಿಸಿದ ಹಂತದಿಂದ ವಿಘಟನೆಗೊಳ್ಳುತ್ತದೆ. ಈ ಮೂಲಕ ಅದು ಮತ್ತೆ ನೈಸರ್ಗಿಕವಾಗಿರುವ ಪಂಚಭೂತಗಳ ಸ್ವರೂಪದಲ್ಲಿ ತನ್ನನ್ನು ಸ್ಥಿತಗೊಳಿಸಿಕೊಳ್ಳುತ್ತದೆ.

ಆದರೆ ಇಲ್ಲಿ ಆತ್ಮವು ಮಾತ್ರ ತನ್ನ ನಿಯತಿಯಂತೆಯೇ ಸುಸ್ಥಿರತೆಯಲ್ಲಿಯೇ ಇರುತ್ತದೆ. ಯಾವಾಗ ಈ ಅಲ್ಪವಿರಾಮವು ಲಭಿಸುವದೋ, ಅಂತಹ ಅಲ್ಪ ವಿರಾಮದ ನಂತರದಲ್ಲಿ, ಮತ್ತೆ ಅದೇ ಪಂಚಭೂತಗಳಿಂದ ಸಂರಚನೆಗೊಳ್ಳುವ ನೂತನ ದೇಹಕ್ಕೆ (ರೂಪಕ್ಕೆ) – ಅದೂ ಜನನ–ಮರಣಗಳ ಚಕ್ರೀಯ ಗತಿಯಲ್ಲಿ – ಮತ್ತೆ ಪ್ರವೇಶ ಪಡೆದುಕೊಳ್ಳುತ್ತದೆ. ಈ ರೀತಿಯಲ್ಲಿ ಅಲ್ಪವಿರಾಮದ ಕ್ಷಣದ ನಿಲುಗಡೆಯ ಮೂಲಕ ವಿಶ್ವಾತ್ಮವು ತನ್ನ ನಿರಂತರ ಆವರ್ತನಗಳಲ್ಲಿ – ಕಲ್ಪ ಕಲ್ಪಗಳ ಸರಣಿಯಲ್ಲಿ ಪ್ರಾರಂಭಗೊಳ್ಳುತ್ತದೆ. ಕಾಲಚಕ್ರದ ಈ ಆವರ್ತನಗಳಲ್ಲಿ ಎಲ್ಲ ಸಾಕಾರ ರೂಪಿಯಾಗಿರುವ ಆತ್ಮಗಳಿಗೆಲ್ಲಕ್ಕೂ ಈ ಅಮರತ್ವವು ಇದ್ದೇ ಇರುತ್ತದೆ. ಅಮರತ್ವವಾಗಿರುವ ವಿಷಯದ ಅಚಿತರಾರ್ಥವೆಂದರೆ, ಸಾವಿನಿಂದ ದೂರವಾಗಿ ಹಾಗೂ ಈ ಜನನ–ಮರಣಗಳ ಆವರ್ತನಗಳು ಇರದೇ ಸುಸ್ಥಿರವಾಗಿರುವ ಎನ್ನುವ ಅರ್ಥಕ್ಕಿಂತ ಸಂಪೂರ್ಣವಾಗಿ ವಿಭಿನ್ನ ಸ್ವರೂಪದಲ್ಲಿದೆ. ಅಮರತ್ವವೆನ್ನುವದು ಆತ್ಮವು ಸ್ವಯಂಜ್ಞಾನವನ್ನು ಹೊಂದಿದ್ದು ಅದು ಯಾವಾಗಲು ಆ ಪರಮೋಚ್ಚ ಹಂತದಲ್ಲಿಯೇ ಇದ್ದು, ಈ ಜನನ–ಮರಣಗಳ ಆವರ್ತನಕ್ಕಿಂತ ಅಧಿಕಾಧಿಕವಾಗಿಯೇ ಊರ್ಧ್ವದಲ್ಲಿರುವ, ಉನ್ನತವಾಗಿರುವ ಹಾಗೂ ಶಾಶ್ವತದ ತಾಣದಲ್ಲಿ ಇರುತ್ತದೆ. ಇದು ಅದರದೇ ರೂಪಾಚಿತರಣದಲ್ಲಿ ಪರಿವರ್ತನಗೊಳ್ಳುವ ಸ್ವಭಾವಕ್ಕೆ ಬಂಧಿತವಾಗಿರುವದಿಲ್ಲ. ಹೀಗಾಗಿ ಇದು ಅನಚಿತವಾಗಿರುತ್ತದೆ. ಅಕ್ಷಯಾವಾಗಿರುತ್ತದೆ. ನಿಶ್ಶಬ್ದಘನದ ಮೌನದ ಶಾಶ್ವತತೆಯಾಗಿರುತ್ತದೆ. ಅಮರವಾಗಿರುತ್ತದೆ. ಏಕೆಂದರೆ, ಅದು ಎಂದಿಗೂ ಜನಿಸುವದೂ ಇಲ್ಲ, ಹೀಗಾಗಿ ಸಾಯುವದೂ ಇಲ್ಲ. ಈ ಪರಮ ದಿವ್ಯ ಪುರುಷೋತ್ತಮನೇ ಈ ಬ್ರಹ್ಮಾಂಡದ ಒಡೆಯನೂ ಆಗಿದ್ದು, ಅವನೇ ಪರಬ್ರಹ್ಮನೂ ಆಗಿದ್ದಾನೆ. ಈ ಮೂಲಕ ಅಮರತ್ವದ ಶಾಶ್ವತತೆಯನ್ನು ತನ್ನಲ್ಲಿಯೇ ಅಂತರ್ಗತಗೊಳಿಸಿಕೊಂಡಿದ್ದಾನೆ. ಹೀಗಾಗಿ, ಇದು ದೇಹದ ಸ್ವರೂಪವನ್ನು

ಪಡೆದುಕೊಳ್ಳುವ ಮೂಲಕ ಭಾಸಿಗೊಳ್ಳುವದಿಲ್ಲ, ಅಥವಾ ಈ ವೈಶ್ವಿಕ ರೂಪಗಳು ಹಾಗೂ ಶಕ್ತಿಗಳು ಅವಿರತವಾಗಿರುವ ಅವನ ಊಹೆಯ ಮೂಲಕವೂ ಭಾಸಿಗೊಳ್ಳುವದಿಲ್ಲ. ಏಕೆಂದರೆ ಅವನು ಸ್ವಯಂ–ಸರ್ವಜ್ಞನಾಗಿದ್ದಾನೆ. ನಿರಂತರವಾಗಿಯೇ ಸ್ಥಿತಗೊಂಡಿರುತ್ತಾನೆ. ಅವನ ಪ್ರಮುಖ ಲಕ್ಷಣವೆಂದರೆ, ಅವನದೇ ನಿತ್ಯ ನಿರಂತರತೆಯ ಶಾಶ್ವತತೆಯ ಬಗೆಗೆ ಪರಿವರ್ತನಗೊಳ್ಳದ ಪ್ರಜ್ಞೆಯನ್ನು ಹೊಂದಿದ್ದಾನೆ. ಅವನು ಸ್ವಯಂ ಜಾಗ್ರತಿಯನ್ನು ಹೊಂದಿರುವದರಿಂದ ಆದಿ ಮತ್ತು ಅಂತ್ಯಗಳು ಇಲ್ಲಿ ಇರುವದಿಲ್ಲ. ಅವನು ಇಲ್ಲಿ (ಭೌತಿಕ ವಿಶ್ವದಲ್ಲಿ) ಇರುವ ಎಲ್ಲ ಕಾರ್ಯಗಳಲ್ಲಿಯೂ ನೆಲೆಸಿರುವ ನಿವಾಸಿಯಾಗಿದ್ದಾನೆ. ಆದರೆ ಅವನು ಈ ದೇಹದಲ್ಲಿ ಜನಿಸುವ ಮೂಲಕ ಬಂದಿರುವದಿಲ್ಲ. ಹೀಗಾಗಿ ಈ ನಿಗದಿತವಾಗಿರುವ ರೂಪಾಂತರದ ಕಾಯಸ್ವರೂಪಕ್ಕೆ ತನ್ನನ್ನು ತಾನು ಸೀಮಿತಗೊಳಿಸಿಕೊಂಡಿರುವದಿಲ್ಲ. ಈ ಭೌತಿಕ ರೂಪದ ಮೂಲಕವೇ ಅವನು ಕಲ್ಪಿಸಿದ ಸ್ವಭಾವದಲ್ಲಿಯೂ ಗುರುತಿಸಿಕೊಳ್ಳುವದಿಲ್ಲ. ಈ ತಾತ್ಕಾಲಿಕ ರೂಪಧಾರಣೆಯ ಮೂಲಕ ಅಂಶಾಂಶವಾಗಿ ಅಸ್ತಿತ್ವಗೊಳ್ಳುವದು ಮತ್ತು ಈ ಲೋಕದ ಚಟುವಟಿಕೆಗಳಲ್ಲಿ ಭಾಗಿಯಾಗುವದು ಕೇವಲ ಕ್ಷಣಿಕ ಅವಧಿಯ ಸಂದರ್ಭಗಳಾಗಿರುತ್ತವೆ. ಹೀಗಾಗಿ ಮುಕ್ತತ್ವ, ಅಮರತ್ವದಲ್ಲಿ ಪರಿವರ್ತನಾರಹಿತವಾಗಿರುವ ಸಂಪ್ರಜ್ಞೆಯಲ್ಲಿ (ಚೈತನ್ಯದಲ್ಲಿ) ಶಾಶ್ವತವಾಗಿ ಜೀವಿಸುವದು ಆ ಪುರುಷೋತ್ತಮನೆನಿಸಿಕೊಳ್ಳುತ್ತದೆ. ಆದರೆ ಇಲ್ಲಿಗೆ ಆಗಮಿಸುವ, ಅದೂ ಈ ಮಹತ್ತರವಾದ ಆಧ್ಯಾತ್ಮಿಕ ಅಮರತ್ವವು ಈ ರೀತಿಯಲ್ಲಿ ದೇಹಧಾರಣೆ ಮಾಡಿಕೊಂಡ ಆತ್ಮವು, ವಿಶ್ವನಿಯಮದ ಕೆಳಗಿನ–ಸ್ತರದ ರೀತಿ–ನೀತಿಗಳಂತೆ ಇರುತ್ತದೆ, ಬದುಕುವದಕ್ಕೆ ನಿರ್ಬಂಧಗೊಳಿಸಲ್ಪಟ್ಟಿರುತ್ತದೆ. ಆದರೂ ಅಸಿತತ್ವದಲ್ಲಿರುವ ಆ ಪರಮದಿವ್ಯತ್ವದ ಪರಮೋಚ್ಚ ಪಥದ ನಿಯಮದಂತೆ ಇರಿಸಲ್ಪಟ್ಟಿದ್ದು, ಅದು ನಿಜವಾಗಿಯೂ (ವಾಸ್ತವದಲ್ಲಿ) ಅದರದೇ ಶಾಶ್ವತದ ಸಾರದ ನೈಜ ನಿಯಮವಾಗಿರುತ್ತದೆ. ರೂಪಾಂತರಗೊಳ್ಳುವ ವಿಕಾಸವಾದದ ಆಧ್ಯಾತ್ಮಿಕ ಸ್ತರದಲ್ಲಿ, ಅದು ತನ್ನದೇ ಮೂಲಸ್ವರೂಪದ ರಹಸ್ಯಕ್ಕೆ ಕಿಂಚಿತ್ ಕೂಡಾ ಕಡಿಮೆ ಇರದ ಹಾಗಿ ಇದ್ದು, ಅದು ಕ್ರಮೇಣ ಕ್ರಮೇಣ ಆ ದಿವ್ಯತ್ವದ ಸ್ವರೂಪದಲ್ಲಿಯೇ ಲೀನಗೊಳ್ಳುವವರೆಗೂ ಪ್ರಗತಿ ಪಡೆಯುವ ಪ್ರಕ್ರಿಯೆಯಲ್ಲಿ ಇರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/421–23**

**ಮಹತ್ತರ ಸಾಧ್ಯತೆ**

ಮನೋಮಯ ಅಸ್ತಿತ್ವಕ್ಕಿಂತ ಮಿಗಿಲಾಗಿರುವ, ನೈಜ ವಾಸ್ತವದ ಪ್ರಾಬಲ್ಯದಲ್ಲಿಯೇ ಇರುವ ಅಸ್ತಿತ್ವವೊಂದು ಅಲ್ಲಿ ಇದೆ. ಅದು ಭೌತಿಕ ಜೀವ(ನ)ಕ್ಕಿಂತ ಮಹತ್ತರವಾಗಿರುವ ಜೀವ(ನ)ವಾಗಿದ್ದು, ಅದು ತನ್ನ ರೂಪಗಳಲ್ಲಿ ಅಂತರ್ಗತಗೊಂಡು ಈ ಕೆಳ–ಸ್ತರದ ಅಂದರೆ–ಭೂ–ಬದುಕಿನ ಜೀವನವನ್ನು ಅನುಸರಿಸುತ್ತದೆ. ಇಲ್ಲಿ ವಾಸಿಸುವ ಮಾನವರೆಲ್ಲರೂ ಸಾಮಾನ್ಯವಾಗಿ ಆರಾಧಿಸುವ ಹಾಗೂ ಅನುಸರಿಸುತ್ತಿರುವ ಎಲ್ಲ ಮನೋರಂಜಕಗಳನ್ನೂ ಸಹಿತ ಅನುಭವಿಸುತ್ತದೆ. ಆದರೆ ಈ ಅನುಭವವು ಜಾಗ್ರತವಾಗಿರುವ ಆತ್ಮವಾಗಿ ಪರಿವರ್ತನಗೊಳ್ಳುವದನ್ನು ವಿಳಂಬ ಮಾಡಿಕೊಳ್ಳದ ಹಾಗೆ ಇರುವ ಇಚ್ಛೆಯನ್ನು ಹೊಂದಿರುತ್ತದೆ. ಇಲ್ಲಿ ತದುತ್ತರವನ್ನು ಹೊಂದುವ ಕುರಿತು ಅಭೀಪ್ಸೆ ಇರುತ್ತದೆ. ಈ ಲೋಕದ ಸಾವಿನಿಂದ ಕೂಡಿರುವ ಜಗತ್ತಿನಿಂದ ತನ್ನನ್ನೇ ತಾನು ದೂರವಿರಿಸಿಕೊಳ್ಳುವ (ಮುಕ್ತವಾಗಿರುವ) ಹಾಗೂ ತನ್ನದೇ ಈ ವ್ಯವಸ್ಥೆಯ ಮಧ್ಯದಲ್ಲಿಯೇ ಅಮರತ್ವವನ್ನು ಪಡೆದುಕೊಳ್ಳುವ ವಿದ್ಯಮಾನದ ರೂಪದಲ್ಲಿ ಇರುತ್ತದೆ. ಏಕಾಂಗಿಯಾಗಿಯೇ ನೈಜತೆಯಲ್ಲಿ ಅಸ್ತಿತ್ವದಲ್ಲಿದ್ದು, ಅದೂ ಈ ಮರ್ತ್ಯ ಜೀವನದ ಸ್ತರದಲ್ಲಿ ಇದ್ದು, ಅಲ್ಲಿಂದ ತನ್ನಷ್ಟಕ್ಕೆ ತಾನೇ ಈ ಮರ್ತ್ಯಪ್ರಜ್ಞೆಯಿಂದ ಹೊರಬಂದು ಆ ಶಾಶ್ವತವಾಗಿರುವ ಹಾಗೂ ಅಮರತ್ವದ ಕಡೆಗೆ ಮುಕ್ತಗೊಳ್ಳುತ್ತದೆ. ಇಲ್ಲವಾದಲ್ಲಿ ತನ್ನಲ್ಲಿಯೇ ತಾನು ಪತನವನ್ನು ಅನುಭವಿಸುತ್ತಿದ್ದೇನೆಂದು ಪರಿಭಾವಿಸಿಕೊಳ್ಳುವ ಹಂತವಾಗುತ್ತದೆ. ಮತ್ತು ಮೋಕ್ಷದ ಪರಮ ನೈಜತೆಯಿಂದ ಪತನಗೊಂಡಿರುವ ಹಂತವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 18/16–17**

ನಮ್ಮತನ ಏನೆನ್ನುವದನ್ನು ಅರಿತುಕೊಳ್ಳಲು ನಾವು ನಮ್ಮನ್ನೇ ತ್ಯಾಗಕ್ಕೆ ಒಳಪಡಿಸಿಕೊಳ್ಳಬೇಕಾಗಿದೆ. ಮಾನಸಿಕ ಸ್ತರದ ಜೀವನ ವಿಧಾನದಲ್ಲಿ ಕೇವಲ ಅಲ್ಲಿ ಬೇಡಿಕೆಗಳೇ ಆಧಿಕವಾಗಿರುತ್ತವೆ. ಎಲ್ಲಿಯವರೆಗೂ ಮನಸ್ಸು ಈ ಹಂತದಿಂದ ಮುಕ್ತವಾಗಿ ಊರ್ಧ್ವಗಾಮಿಯಾಗುವದಿಲ್ಲವೋ ಅಲ್ಲಿಯವರೆಗೂ ಅಂತಿಮ ಪರಿಣಾಮ ಅಥವಾ ಅನುಸಂಧಾನ ಇರುವದಿಲ್ಲ. ಆದ್ದರಿಂದ ನಮ್ಮ ಎಲ್ಲ ಮಾನಸಿಕ ಗ್ರಹಿಕೆಗಳಿಂದ ಆಚೆ – ಅದರ ಹಿಂದೆ – ನಮ್ಮದೇ ಸ್ವಂತಿಕೆಯ

ಪರಿಪೂರ್ಣತೆಯು ಇದ್ದು, ಅದು ನಾವಿರುವದಕ್ಕಿಂತಲೂ ನಮಗೆ ವಿರೋಧಾಭಾವದಂತೆ ಹಾಗೂ ವಿಷಮಸ್ವರೂಪದಲ್ಲಿಯೇ ಕಾಣುತ್ತದೆ. ಹೀಗಾಗಿ ನಾವು ಇಲ್ಲಿ ಸದಾ ಸುಸ್ಥಿರ ಸ್ವರೂಪದಲ್ಲಿಯೇ ಇರುತ್ತೇವೆ. ಇಲ್ಲಿಯೇ ನಾವು ಆ ಶಾಶ್ವತವಾಗಿರುವದ (ಜೀವನ)ವನ್ನು ಪಡೆದುಕೊಳ್ಳುತ್ತೇವೆ. ಇಲ್ಲಿಯೇ ನಾವು ಈ ಪ್ರಗತಿಗೊಂಡ ಪರಿವರ್ತನಾಶೀಲ ಚೇತನವನ್ನು – ಅಲ್ಲಿ ಸದಾ ಅಡೆತಡೆಗಳ ಮೂಲಕವೂ – ಯಶಸ್ವಿಯಾಗಿ ಸಾಗಿ, ಪ್ರಗತಿಗೊಳ್ಳುತ್ತಿರುವ ಕಾಲದ ಚಾಲಕತ್ವದದಲ್ಲಿ ಯಶಸ್ವಿಯಾಗಿ ಧಾರಣ ಮಾಡಿಕೊಳ್ಳುತ್ತೇವೆ. ಅಲ್ಲಿ ನಾವು ಕಾಲದ ಪ್ರಭಾವವಿಲ್ಲದ ಆದರೆ ಸೃಷ್ಟಿಸಲ್ಪಡುವ ಹಾಗೂ ವೀಕ್ಷಿಸಿಲ್ಪಡುವ ಎಲ್ಲ ವಿಷಯಗಳನ್ನೂ ಒಂದು ಉಪಕರಣದಂತೆ ಪರಿಭಾವಿಸಿಕೊಂಡು ಅಲ್ಲಿರುವ ನಿರ್ಮಾಯ ಘನದ ಚೇತನದಲ್ಲಿ ಇರುತ್ತೇವೆ. ನಾವು ಇಲ್ಲಿ ಮರ್ತ್ಯ ಚೇತನದ ಸಂಘಟನಾತ್ಮಕ ಸ್ಥಿತಿಯಲ್ಲಿ – ಯಾವುದು ಅಸ್ಥಿರವಾಗಿರುವ ಜಗತ್ತಿನಿಂದಲೇ ಸ್ವೀಕರಿಸಲ್ಪಡುತ್ತೇವೆ. ನಾವು ಇಲ್ಲಿ ಅನಂತತೆಯ ಸ್ವಯಂ–ದರ್ಶನದ ಸುನಮ್ಯತೆಗಳಲ್ಲಿ ಮುಕ್ತರಾಗುತ್ತೇವೆ. ಏಕೆಂದರೆ, ಇದು ಎಲ್ಲ ಲೋಕಗಳೂ (ಜಗತ್ತೂ) ಶಾಶ್ವತವಾಗಿರುವ ಹಾಗೂ ಅಮರತ್ವವನ್ನು ಹೊಂದಿರುವ ಪ್ರಕಾಶದಲ್ಲಿದೆ ಎನ್ನುವದನ್ನು ತಿಳಿಸುತ್ತದೆ. ಆ ತದುತ್ತರವೇ ನಮ್ಮ ನೈಜತೆಯಾಗಿರುತ್ತದೆ. ಅದೇ ನಮ್ಮ ಸಂಪೂರ್ಣತೆಯೂ ಆಗಿದೆ. ಇದೇ ನಮ್ಮ ಸ್ವಯಂ–ಅಸ್ತಿತ್ವದ ನಿರ್ವಿಶೇಷ–ಸಂತೃಪ್ತಿಯಾಗಿರುತ್ತದೆ. ಇದೆ ಅಮರತ್ವವೂ ಆಗಿದೆ ಮತ್ತು ಆ 'ಪರಮಾನಂದ'ವೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 18/22–23**

## ಬ್ರಹ್ಮತ್ವ ಪ್ರಾಪ್ತಿ

ಬ್ರಹ್ಮತ್ವವನ್ನು ಪಡೆದುಕೊಳ್ಳುವದು ಎಂದರೆ ನಮ್ಮನ್ನೇ ನಾವು ಮರ್ತ್ಯ ಹಂತದಿಂದ ಅಮರತ್ವದ ಹಂತದಲ್ಲಿ ಲೀನಗೊಳಿಸುವ ಪ್ರಕ್ರಿಯೆಯಾಗಿದೆ. ಈ ಮೂಲಕ ಸಾವಿನಿಂದ ತಪ್ಪಿಸಿಕೊಳ್ಳುವದಲ್ಲ ಎನ್ನುವದೂ ಸಹಿತ ಅರಿವಿಗೆ ಬರುತ್ತದೆ. ಆದರೆ ಇದು ನಮ್ಮ 'ಸ್ವ'ತ್ವವನ್ನೇ ಪರಿಶೋಧಿಸುವ ಮೂಲಕ ದೃಷ್ಟಿಗೊಳಿಸಿಕೊಳ್ಳುವ ಹಂತವಾಗಿದೆ. ಏಕೆಂದರೆ ಇದು ಈ ಶಾಶ್ವತ–ಅಸ್ತಿತ್ವವಾಗಿರುತ್ತದೆ. ಜನನ–ಮರಣಗಳ ಈ ದ್ವಂದ್ವ–ಸಂಕೇತಗಳ ಆಚೆ ಇರುವ ಪರಮಾನಂದವಿದಾಗಿದೆ. ಈ ಮೂಲಕ – ಅಮರತ್ವ ಎಂದರೆ ಆತ್ಮದ ನಿರ್ವಿಶೇಷ ಜಿವನ ಸ್ವರೂಪವಾಗಿದೆ. ಇದು ಕ್ಷಣಿಕವಾಗಿರುವದನ್ನು ಹಾಗೂ ಶರೀರದ

ಮೂಲಕ ಪರಿವರ್ತನಾಶೀಲತೆಯನ್ನು ಹೊಂದಿರುವ ಮೂಲಕ ಜೀವನ ಮತ್ತು ಮರಣಗಳ ಹಾಗೂ ಪುನರ್–ಜನ್ಮಗಳ ವಿರೋಧ ಸ್ವರೂಪದಲ್ಲಿ ಇರುತ್ತದೆ. ಕೇವಲ ಮನೋಮಯ ಹಂತದ ಜೀವಿಯಾಗಿ ಕೆಳಸ್ತರದಲ್ಲಿಯೇ ವಾಸಿಸುವ ಹಂತಕ್ಕಿಂತ, ಅಂದರೆ, ಈ ಜನನ–ಮರಣಗಳ ಶಾಸನದ ಅಡಿಯಲ್ಲಿ ಅಸಹಾಯರಾಗಿ ಸಿಲುಕಿಕೊಳ್ಳುವದಕ್ಕಿಂತ, ಬಂಧಿತರಾಗುವದಕ್ಕಿಂತ ಮತ್ತು ಅಜ್ಞಾನದಲ್ಲಿಯೇ ಈ ಹಂತಕ್ಕೇ ಅಂಟಿಕೊಂಡಿರುವದಕ್ಕಿಂತ ವಿಭಿನ್ನ ಸ್ವರೂಪವಾಗಿರುತ್ತದೆ. ಇದರ ನೈಜ ಸ್ವಭಾವವನ್ನು ಅರಿತುಕೊಳ್ಳಲು ಹಾಗೂ ಮುಕ್ತತೆಯನ್ನು ಆ ಆತ್ಮದ ರೂಪಾಂತರಣಗಳಲ್ಲಿಯೇ ದೇಹಧಾರಣೆ ಮಾಡಿಕೊಳ್ಳುವಲ್ಲಿ, ತನ್ನದೇ ಆದ ಪ್ರಭುತ್ವವನ್ನು ಹೊಂದುವದರಲ್ಲಿ ಅಮರತ್ವವನ್ನು ಹೊಂದುವಲ್ಲಿ, ಹಾಗೂ ಇದನ್ನು ಅರಿತುಕೊಳ್ಳುವಲ್ಲಿ ಮತ್ತು ಧಾರಣ ಮಾಡಿಕೊಳ್ಳುವಲ್ಲಿ ಈ ಬ್ರಹ್ಮನನ್ನು ಅರಿತುಕೊಂಡು ಧಾರಣ ಮಾಡಿಕೊಂಡಂತೆಯೇ ಇರುತ್ತದೆ.

ಇದು ಮರ್ತ್ಯ ಜೀವನದಿಂದ ಅಮೃತತ್ವದ ಹಂತಕ್ಕೆ ಆರೋಹಣದಲ್ಲಿ ಉದಿತಗೊಳ್ಳುವ ಕ್ರಮವೂ ಆಗಿರುತ್ತದೆ. ಬಂಧನಗಳಿಂದ ಬಂಧಿತರಾಗಿರುವ ಜಗತ್ತನ್ನು ತೊರೆದು ವ್ಯಾಪ್ತತ್ವದ ಪರಮವಾಗಿರುವ ಲೋಕವನ್ನು ಪಡೆಯುವದಾಗಿದೆ. ಅಂದರೆ ಸೀಮಿತ ಬಂಧನದ ಜಗತ್ತಿನಿಂದ ಹೊರಬಂದು ಬೃಹತ್ ವಿಸ್ತಾರದ ಮುಕ್ತ ಲೋಕಕ್ಕೆ ಪ್ರವೇಶಿಸುವದಾಗಿರುತ್ತದೆ. ಸಾಂತ ಜಗತ್ತಿನಿಂದ ಅನಂತತೆಯತ್ತ ಸಾಗುವದಾಗಿದೆ. ಇದು ನಮ್ಮ ಮೃಣ್ಮಯದ ತೋಷ ಹಾಗೂ ದುಃಖಗಳನ್ನು ಸಹಿತ ಆರೋಹಣ ಕ್ರಮದಲ್ಲಿ ಮೀರಿ, ಪರಮಾನಂದ ಪ್ರಾಪ್ತಿಯ ವಿಶ್ವೋತ್ತೀರ್ಣ ಹಂತಕ್ಕೆ ತಲುಪುವದಾಗಿರುತ್ತದೆ. ಇದನ್ನು ನಾವು ಈ ಮರ್ತ್ಯಲೋಕದ ವಸ್ತು–ವಿಷಯಗಳ ಸಾಕಾರ ರೂಪಕ್ಕೆ ಅಂಟಿಕೊಳ್ಳುವ ನಮ್ಮ ಮಮಕಾರಗಳನ್ನು ಸಂಪೂರ್ಣವಾಗಿ ಕಡ್ಡಾಯವಾಗಿ ಪರಿತ್ಯಾಗ ಮಾಡಬೇಕಾಗಿದೆ. ಒಂದು ವೇಳೆ ಏಕತ್ವ ಹಾಗೂ ಅಮೃತತ್ವದ ಕುರಿತು ನಮ್ಮ ದಿಶಾನಿರ್ದೇಶಗಳನ್ನು ಸೂಕ್ತವಾಗಿ ಪಥಗೊಳಿಸಿಕೊಂಡಲ್ಲಿ, ಆಗ ನಮ್ಮನ್ನು ನಾವು 'ದಿವ್ಯ' ಹಾಗೂ ದ್ವಂದ್ವಗಳಿಂದಲೂ ದೂರವೇ ಇರಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಈ ಭವದ ವಸ್ತುಗಳು ಅವುಗಳು ಅವುಗಳಿಗೇ ನಿಗದಿತವಾಗಿರುವ ಸ್ತರದಲ್ಲಿ ಸೂಕ್ತವೇ ಆಗಿದ್ದರೂ ಸಹಿತ, ನಾವು ಅವುಗಳಿಗೆ ಹಿಂದಿನಂತೆಯೇ ನಿರ್ಬಂಧಿಸಿ–ಕೊಳ್ಳಬೇಕಾಗುತ್ತದೆ. ನಾವು ಈ ಎಲ್ಲವನ್ನೂ ಮೀರಿಯೇ ಆ ಪರಮೋಚ್ಚ

ಪರಿಶುದ್ಧತೆಯ ಕಡೆಗೆ ಸಾಗಬೇಕಾಗಿದೆ. ಪರಮ ಸತ್ಯದ ಕಡೆಗೆ, ಶಾಶ್ವತವಾಗಿರುವ ಪ್ರಕಾಶದ ಎಡೆಗೆ ಮತ್ತು ಸೌಂದರ್ಯದ ನೆಲೆಗೆ(ಸಚ್ಚಿದಾನಂದ ಸೌಂದರ್ಯ) ಸಾಗಬೇಕಾಗಿದೆ. ಇದಕ್ಕೆ ವಿರುದ್ಧವಾಗಿ ಯಾವುದನ್ನು ನಾವು 'ದುಷ್ಟ' ಅಥವಾ ಕೆಟ್ಟ ಎಂದು ಕರೆಯುತ್ತೇವೆಯೋ ಆ ಎಲ್ಲ ವಿರೋಧ–ಸ್ವರೂಪಗಳೂ ಮರೆಯಾಗುತ್ತವೆ. ಆದರೂ ಸಹಿತ, ಈ ಜಗತ್ತಿನಲ್ಲಿ ಜೀವಿಯಾಗಿರುವದರಿಂದ, ಈ ಜಗತ್ತಿನಲ್ಲಿಯೇ ಇರುವ ಹಾಗೂ ಅದರದೇ ಆಗಿರುವ ವಿಶೇಷದ ಮೂಲಕವೇ ನಾವು ಅದನ್ನು ವಿವರ್ಜಿತಗೊಳಿಸಿಕೊಳ್ಳಬೇಕಾಗಿದೆ. ಇದಕ್ಕಿರುವ ಆಕಾರಗಳ ಮೂಲಕವೇ ನಾವು ಕಡ್ಡಾಯವಾಗಿ ಆ ನಿರ್ವಿಶೇಷವನ್ನು (ನಿರಾಕಾರವನ್ನು) ಅರಸಬೇಕಿದೆ. ಆದ್ದರಿಂದ, ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಮೂಲಕ, ಇದೆಲ್ಲವು ಮನಸ್ಸಿನ, ಜೀವನದ ಹಾಗೂ ಸಂವೇದನೆಗಳಿಂದ ಆಕಾರಗೊಂಡಿರುವ ವಿಷಯವನ್ನು ಮೊದಲಿಗೇ ಅರಿತುಕೊಳ್ಳಬೇಕಾಗಿದೆ. ಈ ಎಲ್ಲ ಆಕೃತಿಗಳೂ ಸಹಿತ, ಇವು ಅಪರಿಪೂರ್ಣವಾಗಿರುವ ಸಲಹೆಗಳನ್ನೇ ಕೊಡುತ್ತಿರುವದರಿಂದ, ಮತ್ತೆ ಮೇಲಾಗಿ ಇವುಗಳ ಹಿನ್ನೆಲೆಯಲ್ಲಿಯೇ ಆ ವೈಶ್ವಿಕ ತತ್ತ್ವಗಳೂ ಇದ್ದು, ಆ ಮೂಲಕ ಆ ಏಕಾತ್ಮದ ಕರ್ಮಗಳಂ(ಲೀಲೆಗಳ)ತೆ ಪ್ರಕಟಗೊಳ್ಳುತ್ತವೆ. ಈ ವೈಶ್ವಿಕ ತತ್ತ್ವಗಳನ್ನೇ ನಾವು ಅನುಸರಿಸಿ ಮುಂದೆ ಸಾಗಬೇಕಾಗಿದೆ. ಜೊತೆಗೆ ಅವುಗಳನ್ನು ಕೇವಲ ಸಾಮಾನ್ಯ(ಭೌತಿಕ) ಸ್ವರೂಪಕ್ಕಿಂತ ಅಥವಾ ಅವು ಹೊಂದಿರುವ ಸಾಮಾನ್ಯ ಗುರಿಯಿಂದ ಪರಿವರ್ತಿಸಿ, ಈ ಜಗತ್ತಿನಲ್ಲಿ ಅವುಗಳದೇ ಆದ ಪರಮೋಚ್ಚವಾಗಿರುವ ಗಮ್ಯದ ಕಡೆಗೆ ಹಾಗೂ ನಿರ್ವಿಶೇಷದ ಎಡೆಗೆ, ಆ ಪರಮದೇವನ ನೆಲೆಗೆ ಪರಿಚಾಲನಗೊಳಿಸಬೇಕಾಗಿದೆ.

ಈ ಪರಮದೇವವನೇ ಒಡೆಯನಾಗಿದ್ದು, ಬ್ರಹ್ಮನೂ ಆಗಿದ್ದಾನೆ. ಸಾಮಾನ್ಯ ಸ್ತರದ ಮನೋನಿರ್ಮಿತ ಕಾರ್ಯ ಚಟುವಟಿಕೆಗಳನ್ನು ತ್ಯಜಿಸಿ ಆ ಅತಿಚೇತನದ ಚಿತ್ತಿನ ಕಡೆಗೆ ಸೆಳೆಯಬೇಕಾಗಿದೆ. ಅದಕ್ಕಾಗಿ ಸಾಮಾನ್ಯ ಸ್ತರದ ಶಬ್ದಗಳ ಅಭಿವ್ಯಕ್ತಿತ್ವದಿಂದ ಹೊರಬಂದು ಆ 'ವೈಶ್ವಿಕ ನಾದ'ದಲ್ಲಿ, ಹಾಗೂ ಭೌತಿಕ ಸಂವೇದನೆಗಳಿಂದ ಮುಕ್ತರಾಗಿ ವೈಶ್ವಿಕ ಅನುಭೂತಿಗೊಳ್ಳುವ ಕಡೆಗೆ ಸಾಗಬೇಕಾಗಿದೆ. ಪ್ರಾಪಂಚಿಕ ಜೀವನದ ಕಾರ್ಯಗಳಿಂದಲೇ ಅವುಗಳಿಗೆ ಅಂಟಿಕೊಂಡಿರುವದಕ್ಕಿಂತ, ಅಲ್ಲಿಂದ ಮುಕ್ತರಾಗಿ ಮತ್ತೆ ಆ ಆದ್ಯ ಅಮರತ್ವದ ಜೀವನ ಸ್ವರೂಪಕ್ಕೆ ಪರಿವರ್ತನಗೊಳ್ಳುವದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 18/93–94**

ನನ್ನನ್ನು ನೀನು ಭೇದಿಸಲಾರೆ, ನಾನು ಮರಣಾತೀತನಾಗಿದ್ದೇನೆ. ನಾನು ಘಾಸಿಗೊಳ್ಳುವದಿಲ್ಲ, ವಿಭಜನೆಯಾಗುವದಿಲ್ಲ. ದಹನಕ್ಕೂ ಸಿಕ್ಕುವದಿಲ್ಲ. ಸುಸ್ಥಿರವಾಗಿಯೇ ಇರುವೆ. ನಾನು ಧರಿಸಿರುವ ಈ ವಸ್ತ್ರವನ್ನು ನೀನು ಹರಿಯಲಾರೆ. ನಾನು ಧರಿಸಿರುವ ಗುಣಿತ ಗೊಳ್ಳುತ್ತಿರುವ ಜೀವದ್ರವ್ಯವನ್ನಾಗಲೀ ಅಥವಾ ಅದರ ಮೂಲಕ ನಿರ್ಮಿತವಾಗುವ ಬದುಕಪಥವನ್ನಾಗಲೀ ನೀನು ಕತ್ತರಿಸಲಾರೆ. ನಾನು ಆದಿಯಲ್ಲಿ ಹೇಗಿದ್ದೆನೋ ಈಗಲೂ ಅದೇ ಸ್ವರೂಪದಲ್ಲಿ ಇರುವೆ.

ಆದರೂ ನಾನು ನಿನ್ನ ಮೇಲೆ ಎಂದಿಗೂ ಕೋಪಿಸಿಕೊಳ್ಳುವದಿಲ್ಲ. ಏನೇ ಆಗಲಿ, ಎಷ್ಟೇ ತೊಂದರೆ ಕೊಟ್ಟರೂ ಸಹಿತ, ತನ್ನ ಮಗುವಿನ ಮೇಲೆ ಕೋಪವನ್ನು ತಾಳುವದಿಲ್ಲ. ಏಕೆಂದರೆ ಆ ಮಗುವು ತನ್ನ ಆಟದಲ್ಲಿ ಅಥವಾ ಬಾಲಿಶ ಹಟಮಾರಿತನದಲ್ಲಿ ವಸ್ತ್ರವನ್ನು ಹರಿದರೂ ಸಹಿತ ಕೋಪಿಸಿ–ಕೊಳ್ಳುತ್ತಾರೆಯೇ? ಆದಾಗ್ಯೂ ನಾನು ಆ ವಸ್ತ್ರದ ಮೌಲ್ಯವನ್ನು ಬಲ್ಲೆ, ಹೀಗಾಗಿ ಅದನ್ನು ಭಾಗವಾಗಿ ಹೋಗಲು ಬಿಡುವದಿಲ್ಲ. ಅದನ್ನೂ ಸಹಿತ ರಕ್ಷಿಸಿಕೊಳ್ಳಲು ಯತ್ನಿಸುತ್ತೇನೆ. ಒಂದು ವೇಳೆ, ಸಾಧ್ಯವಾದಲ್ಲಿ, ನಾನು ನಿನಗೆ ಶಿಕ್ಷೆ ಕೊಡುವದಾದರು ಸಹಿತ ಕೋಪದಿಂದ ಅಲ್ಲವೇ ಅಲ್ಲ. ಏಕೆಂದರೆ ನೀನು ಮತ್ತೂ ಸಿಟ್ಟಿನಿಂದ ಮತ್ತೆ ಮತ್ತೆ ಈ ರೀತಿಯಲ್ಲಿ ವಸ್ತ್ರವನ್ನು ಹರಿಯುವ ಛಿದ್ರಗೊಳಿಸುವ ಮಾಡದಿರಲೆಂದು ಮಾತ್ರ ಶಿಕ್ಷೆ ಕೊಡುವದಾಗಿದೆ.

ಆದರೆ ನಾನು ಈ ರೀತಿ ಮಾಡದಿದ್ದರೆ – ಒಳ್ಳೆಯದು, ಅದು ಕೇವಲ ವಸ್ತ್ರ ಮಾತ್ರವೇ ಆಗಿದ್ದರೆ, ಅದು ಹರಿದಾಗ, ವ್ಯಾಪಾರಸ್ಥನಿಂದ ಮತ್ತೊಂದನ್ನು ತಕ್ಷಣವೇ ಪಡೆದುಕೊಳ್ಳಬಹುದು. ಅದೂ ಅಲ್ಲದೇ ನಾನು ಈಗಾಗಲೇ ಈ ವಸ್ತ್ರದ ಖರೀದಿ ಮೌಲ್ಯವನ್ನೂ ನೀಡಿದ್ದೇನಲ್ಲವೇ?

ಓ ನನ್ನ ನಿರ್ಣಾಯಕ ದೇವರೇ, ನಾನು ಶಾಸನವನ್ನು ಮುರಿದಿದ್ದೇನೆಂದು, ನೀನು ಅಲ್ಲಿ ಪೀಠಸ್ಥನಾಗಿದ್ದುಕೊಂಡು ನನ್ನನ್ನು ಸಾಯುವವರೆಗೂ ಕುತ್ತಿಗೆಗೆ ನೇಣು ಬಿಗಿದು ಶಿಕ್ಷಿಸಬೇಕೆಂದು ಉದ್ಘೋಷಿಸಿದಲ್ಲಿ, ನಾನು ಹಸಿವಿನಿಂದ ಬಳಲುತ್ತಿರುವ ನನ್ನ ದೇಶದ ಸಾವಿರಾರು ಜನರಿಗೆ ಆಹಾರ ಒದಗಿಸುವ ಸಲುವಾಗಿ ನಿನ್ನ ಶಾಸನಗಳನ್ನು ಮೀರಿದ್ದೇನೆ–ಮುರಿದಿದ್ದೇನೆ. ಏಕೆಂದರೆ ಇಲ್ಲಿ ಅವರೆಲ್ಲರನ್ನೂ ಗುಲಾಮರಾಗಿಸಲಾಗಿತ್ತು. ಅದೂ ಯಾರೋ ಒಬ್ಬರ ಸಂತೋಷಕ್ಕಾಗಿ. ಹೀಗಿದ್ದಾಗ, ನೀನು ನನಗೆ ಘಾಸಿ ಶಿಕ್ಷೆ ಕೊಡಲು

ಇಚ್ಛಿಸುತ್ತೀಯಾ? ನಿನಗೆ ಆ ಸ್ವರ್ಗದಲ್ಲಿರುವ ತುರೀಯದಲ್ಲಿರುವ ಸೂರ್ಯನನ್ನೂ ಅಲುಗಾಡಿಸಲು ಸಾಧ್ಯವಿಲ್ಲ. ಒಡವೆಗಳನ್ನು ಕೂಡಿಡುವಂತೆ ಇಡೀ ಆಕಾಶವನ್ನು ಸುರುಳಿ ಸುತ್ತಿ ಇಡಲಾರೆ. ಅದು ಹೇಗೆ ತಾನೇ ನನ್ನನ್ನು ನೇಣಿಗೇರಿಸುವ ಶಿಕ್ಷೆ ವಿಧಿಸುವ ಹಕ್ಕು ಪಡೆದಿರುವೆ? ಈ ರೀತಿಯಾಗಿ ನೇಣಿಗೇರಿಸುವ ಮೂಲಕ ಏನು ಸಾಯಿಸಲ್ಪಡುತ್ತದೆ ಎಂದು ನೀನು ಪರಿಗಣಿಸಿಕೊಂಡಿದ್ದೀಯಾ? ಸಾಯುತ್ತಿರುವದು ಈ ಪಂಚಭೂತಗಳಿಂದ ಕೂಡಿರವ ಈ ಪ್ರಾಣಿಕ ಸ್ವರೂಪದ ಸಂಗ್ರಹದ ಮೊತ್ತವನ್ನು ಮಾತ್ರ. ಅದಕ್ಕಿಂತ ಹೆಚ್ಚಿನದೇನನ್ನೂ ನೀನು ಗಲ್ಲಿಗೇರಿಸಲಾರೆ.

ಇದು ಕೇವಲ ಹೊರಾವರಣ ಮಾತ್ರವಾಗಿದೆ. ಅದು ನಿನ್ನದೂ ಆಗಿರಬಹುದು ಮತ್ತು ನನ್ನದೂ ಆಗಿರಬಹುದು, ಇದು ಕೇವಲ ಕವಚ ಮಾತ್ರ. ಈ ಕವಚದ ಹಿಂದೆ ಆ 'ಏಕತ್ವ'ವಿದೆ. ಅದನ್ನು ನೀನು ಕತ್ತರಿಸಲು ಸಾಧ್ಯವಿಲ್ಲ, ಕೊಲ್ಲಲೂ ಸಾಧ್ಯವಿಲ್ಲ. ಈ ಕವಚಕ್ಕೆ ನ್ಯಾಯಾಧೀಶನಾಗಿರುವವನ ಪ್ರಕಾರವೇ, ನಿನ್ನ ಪಾತ್ರವನ್ನು ನೀನು ಲೀಲೆಗೊಳಿಸಿಕೊಳ್ಳು ಎಂದು ತಿಳಿಸಿದಂತೆಯೇ ಪಾತ್ರ ನಿರ್ವಹಿಸದ್ದೇನೆ. ನಾನು ನನ್ನ ಪಾತ್ರವನ್ನು ಪೂರೈಸಿದ್ದೇನೆ.

ಓ ಪ್ರಾಚೀನ ಯೋಗದ ಸುಪುತ್ರನೇ, ಸರ್ವ ವಸ್ತುಗಳಲ್ಲಿಯೂ ನಿನ್ನನ್ನೇ ನೀನು ಮೊದಲು ಕಂಡುಕೋ; ಯಾವ ವಿಷಯಕ್ಕೂ ಅಂಜಿಕೆ ಬೇಡ; ಏನನ್ನೂ ಜುಗುಪ್ಸೆಯಿಂದ ಕಾಣಬೇಡ. ಯಾವುದಕ್ಕೂ ಹೆದರಬೇಡ. ಯಾರನ್ನೂ ದ್ವೇಷಿಸಬೇಡ. ಆದರೆ ನಿನ್ನ ಪಾತ್ರವನ್ನು ಮಾತ್ರ ಧೈರ್ಯದಿಂದ ಹಾಗೂ ಸಾಮರ್ಥ್ಯದಿಂದ ನಿಭಾಯಿಸು. ನೀನು ನಿಜವಾಗಿಯೂ ಯಾವ ಕಲಾ ಸಾಮರ್ಥ್ಯವನ್ನು ಹೊಂದಿದ್ದೀಯೋ ಅದರ ಪ್ರಕಾರವಾಗಿಯೇ ವರ್ತಿಸು, ದೇವರು ಖಂಡಿತವಾಗಿಯೂ ನಿನ್ನ ವಿಜಯದಲ್ಲಿ ಇದ್ದಾನೆ, ನಿನ್ನ ಸೋಲಿನಲ್ಲಿಯೂ ಅವನಿರುತ್ತಾನೆ. ದೇವನು ಪ್ರತಿಯೊಂದು ಯಾತನೆ ಹಾಗೂ ಸಾವಿನಲ್ಲಿಯೂ ಇದ್ದಾನೆ. ದೇವರೆಂದರೆ ಯಾರು? ಯಾರನ್ನು ಎಂದಿಗೂ ಸೋಲಿಸಲು ಸಾಧ್ಯವಿಲ್ಲವೋ ಮತ್ತು ಯಾರಿಗೆ ಸಾವು ಎನ್ನುವದಿಲ್ಲವೋ ಅವನೇ ದೇವರಾಗಿದ್ದಾನೆ. ದೇವರು ಯಾವುದಕ್ಕಾದರೂ ಅಂಜುತ್ತಾನೇನು? ಅವನು ಎಂದಾದರೂ ನಿರಾಶೆಗೊಂಡಿದ್ದಾನೆಯೇ? ಅವನೇನಾದರೂ ಭಯದಿಂದ ಕಂಪಿಸಿದ್ದಾನೆಯೇ? ನಡುಗಿದ್ದಾನೆಯೇ? ಇಲ್ಲವೇ ಇಲ್ಲ! ಯಾವುದೇ ಘಟನೆಗಳ ಮೂಲಕವೂ, ನಿನ್ನಿಂದ ರೂಪುಗೊಳ್ಳುವ ಅಥವಾ ನಿನ್ನ ಮೆದುಳಿನಿಂದ ಉದ್ಭವಗೊಳ್ಳುವ ಯಾವ ಕ್ಷೀಣ ವಿಚಾರಗಳೂ ಸಹಿತ ಘಾಸಿಗೊಳ್ಳುವದಿಲ್ಲ.

ಅವನು ಅಂತರಂಗದಲ್ಲಿಯೇ ಇದ್ದು, ತನ್ನ ಪ್ರಶಾಂತವಾದ ದೃಷ್ಟಿಯಿಂದ ಸರ್ವಸ್ವವನ್ನೂ – ಆ ಯಾತನೆ ಹಾಗೂ ಭಯಾನಕತೆಗಳನ್ನೂ– ಗಮನಿಸುತ್ತಿದ್ದಾನೆ. ಅವನಿಗೆ ಇದೆಲ್ಲವೂ ಕೇವಲ ಛಾಯೆಯಾಗಿದೆ. ವಾಸ್ತವವು ತನ್ನಲ್ಲಿಯೇ ಕಂಡುಕೊಂಡ ಕನಸಿನಂತೆಯೇ ಇರುತ್ತದೆ.

ಸರ್ವ ಪ್ರಾಣಿಗಳಲ್ಲಿಯೂ ಆತ್ಮವಿದೆ ಎನ್ನುವದನ್ನು ಮೊದಲು ಅರಿತುಕೋ. ಈ ಎಲ್ಲ ಪ್ರಾಣಿಗಳೂ ಆ ಆತ್ಮವೇ ಆಗಿವೆ ಎನ್ನುವದನ್ನೂ ಮನನ ಮಾಡಿಕೋ. ಆಗ ಈ ಭಯಾನಕತೆಯು ನಿನ್ನಿಂದ ಭಯಪಟ್ಟುಕೊಂಡೇ ಓಡಿಹೋಗುತ್ತದೆ. ಯಾತನೆಯು ನಿನ್ನನ್ನು ಸ್ಪರ್ಶಿಸಲು ಸಾಧ್ಯವಿಲ್ಲ. ಅದು ತನ್ನನ್ನೆ ತಾನು ಸ್ಪರ್ಶಿಸಿಕೊಳ್ಳುವ ಮೂಲಕ ತಾನೆ ಯಾತನೆಗೊಳಗಾಗುತ್ತದೆ. ಸಾವು ಎಂದಿಗೂ ಯಾರೋ ತನ್ನನ್ನು ಕತ್ತರಿಸುತ್ತಾರೆ ಎಂದು ಎಂದಿಗೂ ಅಂಜುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 17/144–45 – ಶ್ರೀ ಅರವಿಂದರು**

ಎಲ್ಲಿಯವರೆಗೂ ಈ ದೇಹದ ಕುರಿತು ಮಮಕಾರವಿರುತ್ತದೆಯೋ ಅಲ್ಲಿಯವರೆಗೂ ಈ ಅಮರತ್ವವೆನ್ನುವದು ಸಾಧ್ಯವಾಗುವದಿಲ್ಲ. ಹೀಗಾಗಿ ದೇಹದ ಸಂಪರ್ಕದಲ್ಲಿ ಅಮರತ್ವದ ಜೀವನವನ್ನು ಬದುಕುವದು ಎನ್ನುವ ಸಂಗತಿಯಲ್ಲಿ, ಇದು ದೇಹದಲ್ಲಿದ್ದರೂ ಗುರುತಿಸಲು ಸಾಧ್ಯವಗದ ಹಂತದಲ್ಲಿ ಇರುತ್ತದೆ. ಅದು ತನ್ನ ಜೀವನವನ್ನು ಅವತರಣಗೊಳಿಸಿಕೊಂಡು ಮತ್ತು ಅದನ್ನು ಕೋಶಗಳಲೆಲ್ಲ ತುಂಬಿಕೊಂಡು ಬಲವನ್ನಾಗಿ ಪರಿವರ್ತಿಸಿಕೊಳ್ಳುವ ಮೂಲಕ ಆಗಮಿಸುತ್ತದೆ. ಅಂದರೆ ನಾನು ಇಲ್ಲಿ ಉಲ್ಲೇಖಿಸುತ್ತಿರುವದು ಯೋಗದ ಮಾರ್ಗಗಳನ್ನು. ಇತ್ತೀಚೆಗೆ ವಿಜ್ಞಾನಿಗಳೂ ಸಹಿತ ಇದನ್ನು (ವೈಚಾರಿಕ ಹಂತದಲ್ಲಾದರೂ) ಒಪ್ಪಿಕೊಳ್ಳುತ್ತಿದ್ದಾರೆ. ಇದರ ಮೂಲಕವೇ ಸಾವಿನ ಹಂತದಿಂದ ಹೇಗೆ ಹೊರಗೆ ಬರಬಹುದು ಎನ್ನುವದನ್ನೂ ಸಂಶೋಧಿಸುತ್ತಿದ್ದಾರೆ. ಆದರೆ ಅದು ಕೇವಲ ವರ್ತಮಾನದ ಚೇತನವನ್ನು ಮಾತ್ರ ದೀರ್ಘಗೊಳಿಸುವ ಅದೂ ಪ್ರಚಲಿತದಲ್ಲಿರುವ ದೇಹದಲ್ಲಿಯೇ ಕಾಣುವ ಹಂತದಲ್ಲಿದೆ. ಹೀಗಾಗಿ ಎಲ್ಲಿಯವರೆಗೂ ಚೇತನದ ಪರಿವರ್ತನೆ ಹಾಗೂ ಕಾರ್ಯನುಷ್ಠಾನದ ಪರಿವರ್ತನೆಗಳ ವಿಷಯದಲ್ಲಿ ಅದಿನ್ನೂ ಕೇವಲ ಅಲ್ಪ ಪ್ರಮಾಣದ ಫಲಿತವನ್ನು ಕಂಡಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/314 – ಶ್ರೀ ಅರವಿಂದರು**

# ಅಮರತ್ವದ ದಿವ್ಯ ದೇಹಪ್ರಾಪ್ತಿಯ ಸಾಧ್ಯತೆಗಳು
## ಅಮರ ಆತ್ಮ



ಆಗಿಹುದು ಎಲ್ಲಮುಂ ಒಂದು ವಿರುದ್ಧಾತ್ಮಕರಹಸ್ಯಮಿಲ್ಲಿ;
ಸ್ವಯಂ–ನಿಗೂಢ ಜ್ಯೋತಿಯ ಮಾಯಿಕಮ್ ಅಂಧಕಾರಂ,
ಕ್ಲೇಷಮದು ಗುಹ್ಯಾನಂದದ ದುಃಖರೂಪಿ ಛದ್ಮಭೂಷಂ
ಮೇಣ್ ಮೃತ್ಯು ಸತತ ನಿರಂತರ ಜೀವನದೊಂದು ಸಾಧನಂ.
ಚಲಿಸುತಿರ್ದರು ಎಮ್ಮ ಬಳಿಯೊಳೆ 'ಮೃತ್ಯು' ಜೀವನ ಪಥದೋಳ್,
ಅವ್ಯಕ್ತ ಪ್ರೇಕ್ಷಕನದು ದೇಹದ ಕಾರ್ಯಾರಂಭದೋಳ್
ಮೇಣ್ ನರನ ನಿಷ್ಫಲ ಕಾರ್ಯಗಳಿಗಂತಿಮ ನಿರ್ಣಯಮಂ ವಲಂ,
ಅದರ ಸಂದಿಗ್ಧಾನಂದದ ಪೊಗಟದು ಬೇರೆಯೆ ಕಾಣ್ ನಿತಂ;
ಮೃತ್ಯುವೊಂದು ಸೋಪಾನಂ, ದ್ವಾರಂ ಜೋಲ್ವ ದಾಟು ನಡೆ ಕೇಳ್
ದಾಂಟಬೇಕಾತ್ಮಮದು ಜನ್ಮದಿಂ ಜನ್ಮಕದರ ಮೂಲಕಂ,
ಧೂಸರ ಪರಾಜಯಮಿದೊಂದು ಸಮಂತು ವಿಜಯ ಗರ್ಭಿತಂ,
ಪೊಡೆವ ಪ್ರತೋದಮಿದು ಚೋದಿಸುತಲಮರ್ತ್ಯ ಗತಿಯತ್ತಲ್
ಅಚಿತ್–ಸಾಮ್ರಾಜ್ಯಮೆಲ್ಲಮಾತ್ಮದ ಸ್ವ–ನಿರ್ಮಿತಾವಾಸಂ,
ಮೇನ್ ಸನಾತನ 'ರಾತ್ರಿ'ಯದಾಗಿಹುದು ಶಾಶ್ವತ 'ದಿನ'ದ ನೆರಳ್.
ರಜನಿಯಲ್ತೆ ಎಮ್ಮಾದಿ ಮೂಲಂ ಮೇಣಲ್ತೆಮ್ಮಾಂತಮುಂ;
ಕರಿ"ಮಾಯಿ"ಯಿವಳ್ ಸಲೆಯಿರ್ಪವದಾರ  ಗರ್ಭದಲಡಗಿ ನಾವ್
ಸುರಕ್ಷಿತಂ ಜಗ–ವೇದನೆಯ ಮಿಗೆ ಕಟ್ಟೆಚ್ಚರದತ್ತಣಿಂ.
ಬಂದಿಹೆವಾವ ಅವಳೋಳಂದು ಪರಮ'ಪ್ರಕಾಶ'ದತ್ತಣಿಂ,
'ಪ್ರಕಾಶದಿಂ' ಜೀವಿಪೆವಾವ್ ಮೇಣ್ ಪೋಪೆವಾವ್ 'ಪ್ರಕಾಶ'ದತ್ತಂ.

**– ಅನುವಾದ: ಮಂದರ್ಕೆ ಮಾಧವ ಪೈ**

ಶ್ರೀ ಅರವಿಂದರ ಸಾವಿತ್ರಿ; ಪುಟ 600–01

# ಸಾವು; ಒಂದು ವೈಜ್ಞಾನಿಕ ವಿಶ್ಲೇಷಣೆ

(ಸಾವಿನ ವಿಜ್ಞಾನ)*

ಇಂಗ್ಲೀಷ: **ಸರ್ ಜಾನ್ ವುಡ್ರೋಫ್** ಕನ್ನಡ: **ಶ್ರೀ ಪುಟ್ಟು ಕುಲಕರ್ಣಿ**

"Strive after the good before, thou art in danger,
before pain masters thee and thy mind loses its keenness."

– ಕುಲಾರ್ಣವ ತಂತ್ರ 1–97

ಸಾವಿನ ಬಗೆಗಿನ ಜಿಜ್ಞಾಸೆ ಎರಡು ಪ್ರಮುಖ ಪ್ರಶ್ನೆಗಳನ್ನು ಇಡುತ್ತದೆ. ಮೊದಲ ಪ್ರಶ್ನೆ ಎಂದರೆ, ಇಚ್ಛಾಮರಣಿಯಾದವನಿಗೆ ಸಾವು ಸಹಜ ಸಂಗತಿಯಾಗಿದ್ದರೂ ಸಹಿತ ಅದರಿಂದ ತಪ್ಪಿಸಿಕೊಳ್ಳುವದು ಅವನಿಗೆ ಹೇಗೆ ಸಾಧ್ಯವಾಗುತ್ತದೆ? ಈ ರೀತಿಯಲ್ಲಿ ಸಾವಿನಿಂದ ಇಚ್ಛಿಸಿದಷ್ಟು ದೂರವಿರುವ ಅವಕಾಶವನ್ನು ಮತ್ತು ವಾಸ್ತವದ ರಕ್ತ–ಮಾಂಸಗಳ ಬದುಕಿನ ಜೊತೆಗೇ ಇರುವದನ್ನು ಅವನು ಹೇಗೆ ಹಠಯೋಗದ ಮೂಲಕ ಸಿದ್ಧಿಸಿಕೊಳ್ಳುತ್ತಾನೆ.?

ಇದಕ್ಕಿಂತ ಮುಖ್ಯವಾಗಿ ಪಾಶ್ಚಿಮಾತ್ಯ ವೈಚಾರಿಕತೆಯಲ್ಲಿ, ಜೀವನಕ್ಕೆ ಸದಾ ಸಂಪೂರ್ಣ ಶರಣಾಗತಿಯಾಗಿ (Yessaying), ಬದುಕುವದಾಗಿದೆ. ಆದರೆ, ಇದು ತಾತ್ಕಾಲಿಕವಾಗಿ ಜೀವನದ ಒಂದು ನಿಗದಿತ ವಿಧಾನದ ರೀತಿಯಲ್ಲಿ ಒಪ್ಪಂದದಂತೆ ಬದುಕುವದಾಗಿದೆ. ಇಲ್ಲಿ ಈವಾನ್ಸ ಮೆಂಟಿಂಝ್ (ಲೇಖಕರು: ದ ಬುಕ್ ಆಫ್ ಡೆಥ್) ಹೇಳುತ್ತಿರುವದೇನೆಂದರೆ, ಟಿಬೇಟಿನ ಜನಪ್ರೀಯ ನಂಬುಗೆಗಳ ಪ್ರಕಾರವಾಗಿ ಯಾವುದೇ ಸಾವು ನೈಸರ್ಗಿಕವಲ್ಲ. ಇದು ಸಾರ್ವತ್ರಿಕ ಅಭಿಪ್ರಾಯವಿರದೇ ಹೋದರೂ, ಪುರಾತನರಲ್ಲಿ ಇಂತಹ ಅಭಿಪ್ರಾಯಗಳು ಅವರ ಅವರ ಅನುಭವಗಳನ್ನು ಆಧರಿಸಿಕೊಂಡು ರೂಪಿತವಾಗಿವೆ. ಅದಕ್ಕಿಂತ ಹೆಚ್ಚಾಗಿ, ದೇಹಶಾಸ್ತ್ರವೂ ಸಹಿತ – ನಿಜವಾಗಿಯೂ "ನೈಸರ್ಗಿಕ ಸಾವು" ಎನ್ನುವದು ಇದೆಯೇ? ಎಂದು ಅದ್ಭುತವಾದ ಪ್ರಶ್ನೆ ಕೇಳುತ್ತಿದೆ. ಅಂದರೆ ಯಾವುದೇ ಸಾವಿಗೂ ಕಾರಣವಾಗಿರುವ ವ್ರಣ/ಹುಣ್ಣು ಅಥವಾ ಗಂಭೀರವಾದ ವ್ಯಾಧಿಯ ಮೂಲಕ ಕ್ಷಯಿಸಿ ಹೋಗಬಹುದಾದ ದೇಹದ ಘಟನೆಯನ್ನು ಹೊರತು ಪಡಿಸಿದರೆ, "ಸಹಜ ಸಾವು" ಎನ್ನುವದು ಇದೆಯೇ?

ಮಾಂಸ–ಖಂಡಗಳಿಂದ ಕೂಡಿದ ದೇಹದಲ್ಲಿರುವ "ಜೀವ(ನ)ವು" ಈ ಜಗತ್ತಿನಾದ್ಯಂತವೂ ಕಾಣುತ್ತಿದೆ, ಮತ್ತು ಎಲ್ಲರಿಗೂ ತಿಳಿಸಲ್ಪಡುತ್ತಿರುವ

ವಿಷಯವೆಂದರೆ, ಪರಮ ಪವಿತ್ರವಾದ ಜೀವನ ಶೈಲಿಯ ವ್ಯಕ್ತಿಗೂ ಸಾವು ಸಂಭವಿಸುತ್ತದೆ, ಹೀಗಾಗಿ ಸಾವು ಎನ್ನುವದು ಒಂದು ನೈಸರ್ಗಿಕ ಕ್ರಿಯೆಯಾಗಿದೆ. ಅಂದರೆ ಈ ಮಾನವ ಸಂತತಿಯು ಈ ಭವ(ಪ್ರಪಂಚ)ದಲ್ಲಿ ಯಾವುದೇ ಅಡೆ–ತಡೆಯಿಲ್ಲದ ಸ್ವಚ್ಛಂದವಾದ ವಿಹರಣದಲ್ಲಿ, ಅದೂ ಅನಂತಕಾಲದಲ್ಲಿ ವಿಹರಿಸಲು ಸಾಧ್ಯವೇ ಇಲ್ಲ. ಅದಕ್ಕಾಗಿ ಅವರು ದೇವಮಾತೆಯ ಕೃಪೆಯನ್ನು ಪಡೆದುಕೊಂಡು ಅದರ ಮೂಲಕ ಸುಖಕರ ಜೀವನವನ್ನೂ ಮತ್ತು ಯಾವುದೇ ಭಯಾನಕ ಅನುಭವಗಳು ಬಾರದ ತೆರದಲ್ಲಿ ಮತ್ತು ನೋವಿನಿಂದ ಕೂಡಿರದ ಹಂತದಲ್ಲಿ ಸಾವು ಸಂಭವಿಸಲಿ ಎಂದು ಪ್ರಾರ್ಥಿಸಿಕೊಳ್ಳಬೇಕು. [ವಿನಾ ದೈನ್ಯೇನ ಜೀವಿತಂ ಅನಾಯಾಸೇನ ಮರಣಂ]. ಈ ಹುಟ್ಟುಸಾವಿನ ಮೂಲಕವೇ ಮುಕ್ತತ್ವದ (ಬುದ್ಧತ್ವದ) ಹಂತವನ್ನು ಪಡೆಯಲು ಈ ವಿಶ್ವಮಾತೆಯ ಕೃಪೆ ಪಡೆಯಬೇಕು.

ಇನ್ನು ಎರಡನೇ ಪ್ರಶ್ನೆ ಎಂದರೆ, “ಸಾವನ್ನು ಹೇಗೆ ಆಹ್ವಾನಿಸುವದು ಮತ್ತು ಮರಣ ಹೊಂದುವದು?” ಈ ಎರಡನೇ ಪ್ರಶ್ನೆಯ ವಿಷಯವನ್ನು ಪರಿಹರಿಸಲು, ಈ “ದ ಟಿಬೇಟಿಯನ್ ಬುಕ್ ಆಫ್ ಡೆಥ್” ಪುಸ್ತಕವು ವಿವರಣೆಗಳ ಮೂಲಕ ವಿವೇಚಿಸುತ್ತಿದೆ. ಇಲ್ಲಿ “ಸಾವಿನ ತಂತ್ರಗಳು” ಸಾವನ್ನು ಒಂದು ಉದಾತ್ತ, ಉತ್ತಮ ಭವಿಷ್ಯದ ಜೀವನಕ್ಕೆ ಇರುವ ಪ್ರವೇಶ”ವೆಂದು ವಿವರಿಸುತ್ತಿದೆ. ಈ ಜನನ–ಮರಣಗಳ ಮೂಲಕ ಮಾಂಸ–ಖಂಡಗಳಲ್ಲಿನ ಜೀವನದ ವ್ಯವಸ್ಥೆಯಲ್ಲಿಯೇ ನಿರ್ವಾಣತ್ವವನ್ನು ತಲುಪುವದು ಹೇಗೆ ಎನ್ನವುದನ್ನು ವಿವರಿಸುತ್ತಿದೆ.

ಈ “ಸಾವಿನ ಪುಸ್ತಕವು” ವಿಶೇಷವಾಗಿ ಅತ್ಯಾಸಕ್ತಿಯಿಂದಲೇ ಒಂದು ಆಧಾರಗ್ರಂಥವಾಗಿ ಪಠ್ಯವನ್ನೂ ಮತ್ತು ಈ ಸಾವಿನ ಬಗೆಗೆ ಕೂಲಂಕಷವಾದ ಪರಿಚಯವನ್ನೂ ನೀಡುತ್ತಿದೆ. ಸಾವಿನ ನಂತರದಲ್ಲಿ ಸಂಭವಿಸಬಹುದಾದ ಪುನರ್ಜನ್ಮ ಅಥವಾ ಸಾವಿನ ಸಮಯವನ್ನು ಆಧರಿಸಿಕೊಂಡು ರೂಪಣೆಗೊಳ್ಳುವ – ದೀರ್ಘಕಾಲೀನ ಅಥವಾ ಅಲ್ಪಕಾಲೀನ ಸಮಯದ ವರೆಗೆ ಇರಬಹುದಾದ – ಆತ್ಮರೂಪಿ ವ್ಯವಸ್ಥೆಯನ್ನು ಕುರಿತು ವಿಶ್ಲೇಷಿಸುತ್ತದೆ. ಬೌದ್ಧ ವೈಚಾರಿಕತೆಯಲ್ಲಿ ಜೀವನವೆನ್ನುವದು ಮಾನವ–ಚಿತ್ತಿನ (ಚೈತನ್ಯದ–Consciousness) ಯಶಸ್ವೀ ಹಂತಗಳ ಸರಮಾಲೆಯನ್ನು ಒಳಗೊಂಡ ವ್ಯವಸ್ಥೆಯಾಗಿದೆ.

ಚಿತ್ತಿನ ಪ್ರಥಮ ಅವಸ್ಥೆಯಾದ ಜನನದಿಂದ ಪ್ರಾರಂಭಗೊಂಡು ಅದರ ಮತ್ತೊಂದು ಹಂತದ ಅಂದರೆ ಸಾವಿನ ಸಂದರ್ಭದಲ್ಲಿ ಇರುವ ಚಿತ್ತಿನ ಅವಸ್ಥೆ ಮತ್ತು ಈ ಎರಡೂ ಹಂತಗಳ ಮಧ್ಯಂತರದ ಅವಧಿಯಲ್ಲಿನ ಗತಿ–ಸ್ಥಿತಿಯನ್ನು

ಜೀವಿಯೊಬ್ಬನು ಅನುಭವಿಸಲೇಬೇಕಾಗುತ್ತದೆ. ಈ ಎರಡೂ ಹಂತಗಳನ್ನು ಅರಿತುಕೊಳ್ಳುವದನ್ನು "ಸಾವಿನ ಪ್ರಜ್ಞೆ" ಎಂದು ಕರೆಯಬಹುದು. ಈ ಮಧ್ಯಂತರದ ಅವಧಿಯನ್ನು ಅಂತರಾಭಾವ (ಇದನ್ನು ಬೌದ್ಧ ಧರ್ಮದಲ್ಲಿ ಬಾರ್ಡೋ ಅಥವಾ ಮಧ್ಯಂತರ ಹಂತವೆಂದು) ಕರೆಯುತ್ತಾರೆ. ಅದರಲ್ಲೂ ಮತ್ತೆ ಮೂರು ಭಾಗಗಳನ್ನಾಗಿಸಿ ಚಿಕ್ಕಾಯಿ, ಚೌನಿಡ್ ಮತ್ತು ಸಿಡ್ ಪಾ ಅಥವಾ ಸಿರ್ ಪಾ (Sidpa) ಬಾರ್ಡೋಗಳೆಂದು ವಿಂಗಡಿಸುತ್ತಾರೆ.

ಈ ವಿಧಾನವು, ಹಲವು ರೂಪಗಳಲ್ಲಿ ಟಿಬೇಟಿನಾದ್ಯಂತವೂ ಪ್ರಚಲಿತದಲ್ಲಿದೆ. ಅವುಗಳ ಪೈಕಿ ಒಂದು ವಿಧಾನದ ಕುರಿತು, ಡಾ॥ ಇವಾನ್ ಮೆಂಟಿಂಝ್ಸ ಇದರ ಅಧ್ಯಯನದ ಜೊತೆಗೆ ಈಜಿಪ್ತ ದೇಶದ "ಸಾವಿನ ಗ್ರಂಥ" [The Egyptian Book of Death] ಮತ್ತು "ಕಾ" ಗ್ರಂಥ (ಡಬಲ್ ಹೆಸರಿನಿಂದ ಪ್ರಚಲಿತದಲ್ಲಿರುವ ಗ್ರಂಥ), ಅದೇ ರೀತಿಯಲ್ಲಿ De Arte Moriculi ಗ್ರಂಥ ಮತ್ತು ಇದೇ ವಿಷಯವನ್ನು ಚರ್ಚಿಸುತ್ತಿರುವ ಮಧ್ಯಯುಗದ ಸಮಯದಲ್ಲಿ ಪ್ರಚಲಿತವಿದ್ದ "ಸಾವಿನ ರಹಸ್ಯದ ಕಲೆ"ಯ ಬಗೆಗೆ ಪ್ರಚಲಿತವಿದ್ದದ ಭಾಗಗಳನ್ನು, ಜೊತೆಗೆ ಭಾರತೀಯ ಪರಂಪರೆಯಲ್ಲಿ ಇದ್ದ ಗರುಡ ಪುರಾಣದ ಪ್ರೇತಖಂಡವನ್ನೂ ಸಹಿತ ಇಲ್ಲಿ ಚರ್ಚಿಸಿದ್ದಾರೆ. ಬಹು ಮುಖ್ಯವಾಗಿ ಓರ್ಫಿಕ್ ಮ್ಯಾನುವಲ್‌ನ [The Descent into Hades] (**ಅವನು ನರಕಕ್ಕೆ ಇಳಿದನು** - He Descended into Hell.) ಈ ವಿಷಯಗಳನ್ನು ವಿವರಿಸಿದ್ದಾರೆ. ಅದೇ ರೀತಿಯಲ್ಲಿ ಇಂತಹ ಎಲ್ಲ ವಿಷಯಗಳಿಗೂ ಮಾರ್ಗದರ್ಶಿ ಸೂತ್ರಗಳಂತಿದ್ದ ಹಿಂದೂ ಸಂಪ್ರದಾಯದ "ಪ್ರೇತಖಂಡದ" ವಿವರಗಳನ್ನೂ ಸಹಿತ ಇಲ್ಲಿ ವಿಶ್ಲೇಷಿಸಲಾಗಿದೆ. ಇವುಗಳ ಜೊತೆಗೆ ಸ್ವಿಡನ್ ಬೋರ್ಗನ "De Colo et de Inferno", ರೂಸಿಕಾ ಬರೆದಿರುವ Infereno! ಹಾಗೂ 'ಮರಣ–ಸ್ವರ್ಗ–ನರಕ–ದೈವ–ಶಿಕ್ಷೆಗಳ ತತ್ತ್ವ ಶಾಸ್ತ್ರದ (Eschalogical) ಪ್ರಾಚೀನ ಹಾಗೂ ಅರ್ವಾಚೀನ ವಿಷಯಗಳ ವಿವರವಾದ ವಿಶ್ಲೇಷಣೆ ಈ ಪುಸ್ತಕದಲ್ಲಿದೆ.

ಗರುಡ ಪುರಾಣವು ಸಾವಿನ ಸಂದರ್ಭದಲ್ಲಿ ಆಚರಿಸಬೇಕಾಗಿರುವ ಆಚರಣೆಗಳನ್ನು, ಸಾವಿನ ಕ್ಷಣಗಳನ್ನು, ಸಾವಿನ ನಂತರದ ದಹನ/ದಫನದ ವಿಧಿವಿಧಾನಗಳನ್ನು, ಅದರ ಸಂರಚನೆಯೊಂದಿಗೆ ನಿರೂಪಿಸಲ್ಪಟ್ಟಿದೆ. ಅದೂ ಪ್ರೇತಾಧಿಕಾರದ ರಿವಾಜಿನ ಹಿನ್ನೆಲೆಯಲ್ಲಿ ಆಚರಣೆ, ಮತ್ತು ಪ್ರೇತಕ್ಕೆ (ಇನ್ನೂ ಮುಕ್ತಾಯ ಹಂತಕ್ಕೆ ಹೋಗಿರದ ಆತ್ಮದ ಸ್ಥಿತಿ) ದೊರಕಬಹುದಾದ ನೂತನ

ಶರೀರ, ಅದರಲ್ಲೂ ಚಿತೆಯಲ್ಲಿ ದಹನಗೊಂಡಿದ್ದ ದೇಹದಲ್ಲಿದ್ದ ಆತ್ಮಕ್ಕೆ ಸಿಗಬಹುದಾದ ಮುಂದಿನ ರೂಪ, ಹಾಗೂ ಅಂತಿಮ ನಿರ್ಣಯಗಳು, ಮತ್ತೆ ಪುನರ್ಜನ್ಮ ಪಡೆದು ಮತ್ತೊಂದು ದೇಹಧಾರಣೆ ಮಾಡಿಕೊಂಡು ಬರುವದರ ಬಗೆಗೆ ಸವಿವರವಾದ ವಿಚಾರಗಳು ಈ ಪುಸ್ತಕದಲ್ಲಿ ಇವೆ. ಇಲ್ಲಿ ಸಾವಿನ ಗ್ರಂಥದ ಮೂಲ ವಿಷಯಗಳು ಮತ್ತು ಇವಾನ್ ಮೆಂಟಿಂರ್ಝ್‌ನ ಪರಿಚಯಾತ್ಮಕ ವಿಶ್ಲೇಷಣೆಗಳು, ಈ ಸಾವಿನ ವಿಜ್ಞಾನದ ಪಥದಲ್ಲಿ ಒಂದು ಮೌಲ್ಯದಾಯಕ ಕೊಡುಗೆಯಾಗಿದೆ. ಅದರಲ್ಲೂ ಬೌದ್ಧ ಧರ್ಮದ ಮಹಾಯಾನ ಪರಂಪರೆಯಲ್ಲಿ - ಟಿಬೇಟಿನಲ್ಲಿ ಅನುಷ್ಠಾನದಲ್ಲಿರುವ ತಾಂತ್ರಿಕ ಪದ್ಧತಿಯ ವಿವರಣೆಗಳಂತೂ ಈ ವಿಷಯದಲ್ಲಿ ಅಪ್ರತಿಮ ಕೊಡುಗೆಗಳಾಗಿವೆ. ಹಾಗೆಂದು ಈ ಪುಸ್ತಕ ಕೇವಲ ಸಾವಿನ ಕುರಿತೇ ವಿವರಣೆಗಳನ್ನು ಕೊಡುತ್ತಿಲ್ಲ. ಒಂದು ಅಪರೂಪದ ವಿಷಯದ ಬಗೆಗೆ ಅಪರೂಪದ ಘಟನೆಗಳ ಮೂಲಕ ಒದಗಿಸಲಾಗಿರುವ ಈ ಸಂಗತಿಗಳನ್ನು ಕೇವಲ ಸ್ವಾಗತಿಸುವದಷ್ಟೇ ಅಲ್ಲ, ಜೊತೆಗೆ ಯಾವುದೇ ಧರ್ಮದಲ್ಲಿ, ಮತದಲ್ಲಿ ಆಚರಣೆಯಲ್ಲಿರುವ ಧಾರ್ಮಿಕ ವಿಧಿ–ವಿಧಾನಗಳ ವಿಚಾರವಾಗಿ ಮತ್ತು ಅದರ ತತ್ತ್ವಜ್ಞಾನ, ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿಯೂ ಸಹಿತ ಅನುಷ್ಠಾನಗೊಂಡಿರುವ ವಿವರಗಳನ್ನು ಇಲ್ಲಿ ಕಾಣಬಹುದು.

ಈ ಪುಸ್ತಕವು ಮೂಲತಃ ಮೂರು ವಿಶೇಷ ಗುಣಗಳನ್ನು ಹೊಂದಿದೆ. ಮೊದಲನೇಯದಾಗಿ–

1) ಸಾವಿನ ಕಲೆ (The Art of Dying)

ಸಾವಾಗಲೀ ಅಥವಾ ಜೀವನವೇ ಆಗಲಿ ಇವೆರಡೂ ಪರಿಪೂರ್ಣ ಕಲೆಯ ಆಯಾಮಗಳಾಗಿವೆ. ಇವೆರಡೂ, ಸದಾ ಕಾಲದಲ್ಲೂ ದಿಗ್ಭ್ರಮೆಗೊಳಿಸುತ್ತಿದ್ದರೂ ಸಹಿತ, ಇವುಗಳ ಮಧ್ಯದಲ್ಲಿಯೇ ಜೀವನವು ಸಾಗುತ್ತಿರುವದೂ ಒಂದು ಕಲೆಯಾಗಿಯೇ ಇರುವದೂ ಒಂದು ಆಶ್ಚರ್ಯದ ವಿಷಯವೇ ಆಗಿದೆ. ಇದನ್ನು ಅತ್ಯಂತ ಸೂಕ್ತವಾಗಿ ಹೇಳುತ್ತಿರುವ ಬಂಗಾಳೀ ಭಾಷೆಯಲ್ಲಿ ಒಂದು ಮಾತಿದೆ "ಯಾವ ರೀತಿಯಲ್ಲಿ ಸಾವು ಬರುತ್ತದೆ ಎನ್ನುವದನ್ನು ಅರಿತುಕೊಳ್ಳದಿದ್ದರೆ, ಜಪ ಮತ್ತು ತಪಗಳಿಂದ ಯಾವ ಪ್ರಯೋಜನವಿದೆ?"

2) ಸಾವಿನ ಅಂತಿಮ ಘಳಿಗೆಯ ದಾಖಲಾತಿ

ಇದು ಜೀವಿಯೋರ್ವನ ಅಂತಿಮ ಘಳಿಗೆಯ ಧಾರ್ಮಿಕ ವಿಧಾನದ ಭೇಷಜಶಾಸ್ತ್ರ(Therapecitic)ವಾಗಿದೆ. ಮತ್ತೆ ಸಾವಿನ ಘಳಿಗೆಯಲ್ಲಿ

ಇದ್ದಾಗ, ಭೂತೋಚ್ಚಾಟನೆ (Psychiargy Exorcising), ಬೋಧನೆ (Instructing), ಸಂತೈಸುವಿಕೆ ಮತ್ತು ಸುಭದ್ರಗೊಳಿಸುವ (Fortifying) ಕ್ರಿಯೆಗಳ ಮೂಲಕ, ಸಾವಿನ ಹಂತದಲ್ಲಿದ್ದ ವ್ಯಕ್ತಿಯು "ಈ ಹಂತದಿಂದ" ಮುಂದೆ ಯಾವ "ಹಂತದೆಡೆಗೆ" ಸಾಗುತ್ತಿದ್ದಾನೆ ಎನ್ನುವದನ್ನು ದಾಖಲಿಸುವ ವಿವರಗಳನ್ನು ನೀಡುತ್ತಿದೆ.

3) ಮೃತನ ಆತ್ಮದ ಸಂಚಾರದ ಸೂತ್ರಗಳು

ಮೃತನ ಆತ್ಮವು, ಈ ಮಧ್ಯಂತರದ ಹಂತದಲ್ಲಿ ಅನುಭವಿಸುವ ಅನುಭವಗಳನ್ನು ವಿವರಿಸುತ್ತದೆ. ಜೊತೆಗೆ ಈ ವಿಷಯದ ಬಗೆಗಿನ ಸೂತ್ರಗಳನ್ನು ಒಳಗೊಂಡಿದೆ.

ಹೀಗಾಗಿ ಈ ಪುಸ್ತಕವು, ಆತ್ಮರೂಪದಲ್ಲಿ ಪರಲೋಕಕ್ಕೆ (ಅನ್ಯಲೋಕಕ್ಕೆ) ತೆರಳುವವರಿಗೆ ಒಂದು ಮಾರ್ಗದರ್ಶೀ ಪಠ್ಯವಾಗಿದೆ. ಅವತಾರ ಅಥವಾ ಪುನರ್ಜನ್ಮದ ಸಿದ್ಧಾಂತ (ತತ್ವ) ಒಂದು ಕಡೆ ಮತ್ತು ಪುನರುತ್ಥಾನದ ಸಿದ್ಧಾಂತ ಇನ್ನೊಂದು ಕಡೆ ಹೀಗೆ ಎರಡು ವಿಭಾಗಗಳು ಜಗತ್ತಿನಾದ್ಯಂತ ಪ್ರಚಲಿತದಲ್ಲಿವೆ. ಅದರಲ್ಲೂ ಪ್ರಚಲಿತದಲ್ಲಿರುವ ಭಾರತೀಯ ಸಿದ್ಧಾಂತದ ಹಿನ್ನೆಲೆಯಲ್ಲಿ ಕರೆಯಲ್ಪಡುವ ಬ್ರಾಹ್ಮಣ ಪಂಥ (ಹಿಂದೂ ಧರ್ಮ), ಬೌದ್ಧ ಮತ, ಕ್ರಿಶ್ಚಿಯನ್ ಮತ ಮತ್ತು ಇಸ್ಲಾಂ ಮತಗಳಲ್ಲೆಲ್ಲ, ಅಲ್ಪ–ಸ್ವಲ್ಪ ವ್ಯತ್ಯಾಸದೊಂದಿಗೆ ಚರ್ಚಿಸಲ್ಪಡುತ್ತಿರುವ ವಿಷಯಗಳಾಗಿವೆ.

ಕ್ರಿಶ್ಚಿಯನ್ ಮತವು, ತನ್ನ ಪೂರ್ವ ಪರಂಪರೆಯ ಕರ್ಮಠತನದ ಹಂತದಲ್ಲಿದ್ದಾಗ ಮತ್ತು ಅತ್ಯಂತ ಪ್ರಾಚೀನವಾದ ಮತ್ತು ಸರ್ವಗ್ರಾಹ್ಯವಾಗಿ ಒಪ್ಪಿಕೊಳ್ಳಲ್ಪಟ್ಟ "ವಿಶ್ವಾಸವಾದದ ಸಂಸಾರ (Kuklos genesison)" ಅಥವಾ ಪುನರ್ಜನ್ಮವನ್ನು ತಿರಸ್ಕರಿಸುವ ವಿಚಾರಧಾರೆಯಲ್ಲಿದ್ದಾಗ, ಮತ್ತು "ಒಂದೇ ವಿಶ್ವ ಒಂದೇ ಜನ್ಮ" ಎನ್ನುವ ಸಿದ್ಧಾಂತವನ್ನು ಒಪ್ಪಿಕೊಂಡಿತ್ತು. ಜನನ ಮತ್ತು ಮರಣ ಇವೆರಡನ್ನೂ "ಪ್ರಥಮ ಹಾಗೂ ಅಂತಿಮ ಹಂತದ ಸಿದ್ಧಾಂತ"ವನ್ನು ಒಪ್ಪಿಕೊಳ್ಳುತ್ತದೆ. ಇವೆರಡರಲ್ಲಿ ಒಂದು ನೈಸರ್ಗಿಕ ದೇಹದಲ್ಲಿ ಇದ್ದು, ಪುನರುತ್ಥಾನದ ಮೂಲಕ ಮತ್ತೆ ಇನ್ನೊಂದು ದೇಹದಲ್ಲಿ ಬದುಕು ಮುಂದುವರೆಸುವ ಹಂತದಲ್ಲಿ ಬರುವ ಸಿದ್ಧಾಂತವನ್ನೂ ಒಪ್ಪಿಕೊಂಡಿತ್ತು.

ಇದನ್ನು ಸಂಕ್ಷಿಪ್ತವಾಗಿ ಹೇಳುವದಾದಲ್ಲಿ, ಅದೇ "ಆತ್ಮದ ಪರಕಾಯ ಪ್ರವೇಶ (Metempsychosis)"ವಾಗಿದೆ. ಅಂದರೆ ಮೊದಲಿದ್ದ ದೇಹವೇ

ಪುನರುತ್ಥಾನದ ಮೂಲಕ ಮತ್ತೂ ಅಧಿಕ ಅವಧಿಯವರೆಗೆ, ನಿಗದಿಗೊಳಿಸಲಾಗಿದ್ದ ಜೀವನಾವಧಿಗಿಂತ ಮತ್ತೆ ಹೆಚ್ಚಿನ ಸಮಯ "ಜೀವನ"ಕ್ಕಾಗಿ ಉಳಿದು ಸೇವೆ ಮಾಡುವ ಕ್ರಿಯೆಯಾಗಿದೆ. ಆದರೆ ತದನಂತರದಲ್ಲಿ ರೂಪಣೆಗೊಂಡ ಧಾರ್ಮಿಕ ನಿಯಮಗಳು, ಈ ರೀತಿಯ ಜೀವನಗಳನ್ನು ಕೇವಲ ಎರಡೇ ಎರಡು ಹಂತಕ್ಕೆ ಸೀಮಿತಗೊಳಿಸಿದವು. ಅದರಲ್ಲೂ ಪ್ರಥಮ ಅಥವಾ ವರ್ತಮಾನದ ಸ್ಥಿತಿಯ ಅವನ ಗುಣಗಳು, ಮುಂದೆ ಕಾಲಾತೀತವಾಗುವ ಹಂತದಲ್ಲಿ ಅಥವಾ ಭವಿಷ್ಯದಲ್ಲಿ ಜರುಗುವ ಎರಡನೇ ಹಂತದ ಘಟನೆಗಳಲ್ಲಿ ಇರುವ ವಿಧಾನವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎನ್ನುವ ನಿಬಂಧನೆಗಳು ರೂಪಿಸಲ್ಪಟ್ಟವು.

ಆದರೆ ಅದೇ ಸಮಯಕ್ಕೆ ಬ್ರಾಹ್ಮಣ ಸಿದ್ಧಾಂತದ (ಭಾರತೀಯ ವ್ಯವಸ್ಥೆಯಲ್ಲಿ) ಮತ್ತು ಬೌದ್ಧ ಮತಗಳಲ್ಲಿ ಇವುಗಳನ್ನು ಒಪ್ಪಿಕೊಂಡು "ವೃಕ್ಷವೊಂದು ಉರುಳಿ ಬೀಳುವಂತೆ ಮತ್ತು ಮಲಗುವಂತೆ" ಎನ್ನುವ ಸಿದ್ಧಾಂತದಲ್ಲಿ ಒಪ್ಪಿಕೊಂಡು ಅನುಷ್ಠಾನಕ್ಕೆ ತೊಡಗಿದವು. ಈಗಲೂ ಇದೇ ನಿಬಂಧನೆ ಮುಂದುವರೆದಿದೆ. ಆದರೆ ಉರುಳಿ ಬಿದ್ದ ವೃಕ್ಷವು, ಅದೇ ಸ್ಥಳದಲ್ಲಿ ಅದೇ ರೂಪದಲ್ಲಿ ಬಹುಕಾಲ ಇರಲು ಸಾಧ್ಯವಿಲ್ಲ ಎನ್ನುವ ನಂಬುಗೆಯೂ ಇದೆ. ಈ ತೆರನಾದ "ಆಪ್ತ ವಿಶ್ವಾಸದ" ಆಧಾರದಲ್ಲಿ ಅನುಯಾಯಿಯಾಗಿರುವ ಈ ಎರಡೂ ಪಂಥಗಳಿಗೆ, ಸದ್ಯ ಅಸ್ತಿತ್ವದಲ್ಲಿರುವ ವಿಶ್ವವು ಆದಿಯೂ ಅಲ್ಲ; ಅಂತ್ಯವೂ ಅಲ್ಲ. ಅನಂತಾನಂತ ಸರಣಿಗಳ ವ್ಯವಸ್ಥೆಯಲ್ಲಿ ಈಗಿನದೂ ಒಂದು "ಸ್ಥಿತಿ" ಅಷ್ಟೇ. ಈ ಆದ್ಯಂತರಹಿತವಾದ ಅನಂತಾನಂತವು ಪ್ರತಿಯೊಂದು ಘಟನೆಯಲ್ಲಿಯೂ ಪ್ರಕಟಗೊಳ್ಳುತ್ತ ಮತ್ತೆ ಅದೃಶ್ಯವಾಗುತ್ತ (ಮರಣ ಹೊಂದುತ್ತ/ರೂಪಾಂತರವಾಗುತ್ತ) ಕಾಣದಂತಾಗುತ್ತ ಇರುತ್ತದೆ. ಇದೇ ಸಮಯದಲ್ಲಿ ಈ ಜನನ–ಮರಣಗಳ ಬಂಧ(ಸಂಸಾರ)ದಿಂದ ಸಂಪೂರ್ಣ ಬಿಡುಗಡೆ ಹೊಂದಿ, ಮುಕ್ತಿಯ (ನಿರ್ವಾಣತ್ವ) ಹಂತವನ್ನು ಪಡೆಯುವ ವರೆಗೂ, ಮಮಕಾರ ರಹಿತವಾದ ಜೀವನ ವಿಧಾನವನ್ನು ಅನುಸರಿಸಬೇಕಾದ ನಿಯಮಗಳು ರೂಪಿಸಲ್ಪಟ್ಟಿವೆ. ಉಚ್ಚ ವಿಚಾರಗಳ ಮೂಲಕ ಅನುಷ್ಠಾನಗೊಳ್ಳುವ ಕಾರ್ಯಗಳು ಅದರ ಮೂಲಕ ರೂಪುಗೊಳ್ಳುವ ಜ್ಞಾನ, ಭಕ್ತಿ ಮತ್ತು ನೀತಿಶಾಸ್ತ್ರದ (Morallity) ಕುರಿತು, ಹಲವಾರು ಸಮರ್ಥ, ಯಶಸ್ವೀ ಉದಾಹರಣೆಗಳನ್ನು ಕೊಡುತ್ತ, ಉಪದೇಶ ನೀಡುತ್ತವೆ. ಹೀಗಾಗಿ ಮುಕ್ತಿ ಎನ್ನುವದು "ಜೀವವು ಹೊಂದಬಹುದಾದ ತುರೀಯಾವಸ್ಥೆ"ಯಾಗಿದೆ.

ಇದನ್ನೇ ನಿಶ್ಶೂನ್ಯವೆಂತಲೂ (Void) ನಿರ್ವಾಣವೆಂದೂ ಮತ್ತೆ ಹಲವು ಹೆಸರುಗಳಲ್ಲಿ ಗುರುತಿಸಲಾಯಿತು. ಇದರಿಂದಾಗಿ "ಒಂದೇ ವಿಶ್ವ; ಒಂದೇ ಜನ್ಮ" ಎನ್ನುವ ಸಿದ್ಧಾಂತವನ್ನು ಇವು ಒಪ್ಪುವದಿಲ್ಲ. ಅದರಲ್ಲೂ ಈ ಭೂಮಂಡಲದಲ್ಲಿ ಜನಿಸಿದ ಮಾನವ(ಸಂತತಿಗೆ)ನಿಗೆ ಕೇವಲ ಒಂದೇ ಒಂದು ಜನ್ಮ ಎನ್ನುವದನ್ನಂತೂ ಮೊದಲು ಒಪ್ಪುವದಿಲ್ಲ. ಮತ್ತೂ ಮುಖ್ಯವಾಗಿ ಮಾನವ ಸಂತತಿಯಲ್ಲಿ "ಕೆಲವರಿಗೆ ಮಾತ್ರ" ಸ್ವರ್ಗದ ದಿವ್ಯ ಜೀವನ ಸಿಗುತ್ತದೆ ಎನ್ನುವದನ್ನೂ ಒಪ್ಪುವದಿಲ್ಲ. ಕೆಲವರಿಗೆ ಸದಾ ನರಕದ ಶಿಕ್ಷೆಯೇ (Limbo) ಖಾಯಂ ಎನ್ನುವದನ್ನೂ ತಿರಸ್ಕರಿಸಲಾಗುತ್ತದೆ. ಯಾವುದೇ ವ್ಯಕ್ತಿ ಕೇವಲ ನರಕದಲ್ಲಿಯೇ ಕರಗಿ ಹೋಗುತ್ತಾನೆ ಎನ್ನುವ ಕಲ್ಪನೆಯೇ ಈ ಪಂಥಗಳಲ್ಲಿ ಇಲ್ಲ.

ಆದಾಗ್ಯೂ ಸ್ವರ್ಗದ ದಿವ್ಯಾನುಭಾವವನ್ನಾಗಲೀ ಅಥವಾ ನರಕದ ಘೋರಾತಿಘೋರ ಶಿಕ್ಷೆಯನ್ನು ಅನುಭವಿಸಲು ಸೂಕ್ತವಾದ "ಶರೀರ ವ್ಯವಸ್ಥೆಯ" (ಬದುಕಿರುವ ಶರೀರದ ರೂಪದಲ್ಲಿ ಅಲ್ಲ) ಹಂತವನ್ನು ಮರಣ ಹೊದಿದ ವ್ಯಕ್ತಿಯ ಚೇತನವು ಪಡೆದುಕೊಳ್ಳುತ್ತದೆ ಎನ್ನುವ ವಿಷಯದಲ್ಲಿ ಅಚಲವಾದ ವಿಶ್ವಾಸವಿದೆ. ಏಕೆಂದರೆ ಸ್ವರ್ಗವಾಗಲೀ ಅಥವಾ ನರಕವಾಗಲೀ, ಇವು ಸಾವಿನ ನಂತರದಲ್ಲಿ ಪಂಚಭೂತಗಳಲ್ಲಿ ಸಂಪೂರ್ಣವಾಗಿ ಲೀನವಾಗಿರುವ ಶರೀರಕ್ಕೆ ಅಲ್ಲವೇ ಅಲ್ಲ ಎನ್ನುವದನ್ನೂ ವಿಶ್ವಾಸದಿಂದಲೇ ಒಪ್ಪಿಕೊಂಡಿದ್ದಾರೆ.

ಅದ್ವೈತವಾದದ (ವಿದೇಹಮುಕ್ತಿ) ಅನುಯಾಯಿಗಳನ್ನು ಹೊರತು ಪಡಿಸಿ, ಉಳಿದಂತೆ ಎಲ್ಲರೂ ಹೊಂದಿರುವ ವಿಶ್ವಾಸವೆಂದರೆ "ಕೆಲವು ದೇಹಗಳು ಯಾವಾಗಲೂ ಅಸ್ತಿತ್ವವನ್ನು ಹೊಂದಿರುತ್ತವೆ, ಮತ್ತು ಆ ರೀತಿ ಇರಬೇಕಾದುದು ಅವಶ್ಯವೂ ಹೌದು" ಎಂದು ನಂಬುತ್ತಾರೆ. ಈ ನಾಲ್ಕೂ (ಹಿಂದೂ/ಬೌದ್ಧ/ ಕ್ರಿಶ್ಚಿಯನ್/ಮುಸ್ಲೀಂ) ಧರ್ಮಗಳು ದೃಢೀಕರಿಸುತ್ತಿರುವದೇನೆಂದರೆ, ಪ್ರತಿಯೊಂದೂ ದೇಹದಲ್ಲಿ ಸೂಕ್ಷ್ಮಾತಿಸೂಕ್ಷ್ಮವಾದ (Infinitesimal) ಅಂಶವೊಂದು ಇದ್ದು, ಇದು ಸಾವಿನ ನಂತರದಲ್ಲೂ ಸಹಿತ ಅಸ್ತಿತ್ವವನ್ನು ಉಳಿಸಕೊಳ್ಳುವ ಜೀವಾಳ (Vital) ಮತ್ತು ಆತ್ಮಿಕ ರೂಪ (Psychical) ವಾಗಿ ಈ ಭವ (ಭೌತಿಕ ದೇಹದ /ರಕ್ತ–ಮಾಂಸ ತುಂಬಿ ರಚಿತಗೊಂಡಿರುವ) ದೇಹದಲ್ಲಿಯೇ ಇರುತ್ತದೆ. ಇದು ಶಾಶ್ವತವಾದ ಅಸ್ತತ್ವವಾಗಿಯೋ ಅಥವಾ "ಸ್ವ(ಆತ್ಮ)" ಆಗಿಯೋ ಇರುತ್ತದೆ. ಈ ವಿಷಯವನ್ನು ಎಲ್ಲ ಮತಾನುಯಾಯಿಗಳೂ ಒಪ್ಪಿಕೊಂಡಿದ್ದಾರೆ. ಇದನ್ನೇ ಬ್ರಾಹ್ಮಣ ಪರಂಪರೆಯಲ್ಲಿ (ಭಾರತೀಯ ಅಥವಾ ಹಿಂದೂ ಪಂಥದಲ್ಲಿ)

ಆತ್ಮವೆಂದೂ, ಮುಸ್ಲೀಂ ಪಂಥದಲ್ಲಿ "ರೂಹ (Ruh)" ಎಂದೂ ಮತ್ತು ಕ್ರಿಶ್ಚಿಯನ್ ಪಂಥದಲ್ಲಿ ಸೋಲ್ (Soul) ಎಂದೂ ಕರೆಯಲಾಗುತ್ತಿದೆ. ಈ ಎಲ್ಲ ವಿಷಯಗಳನ್ನು ಒಳಗೊಂಡ ಈ ವ್ಯವಸ್ಥೆಯನ್ನು ಅದರಲ್ಲೂ ಸಂಕೀರ್ಣಮಯವಾದ ಈ ಸೈದ್ಧಾಂತಿಕ ನೆಲೆಯ ಚಟುವಟಿಕೆಗಳಿಂದ ಕೂಡಿದ "ಸ್ಕಂದ"ದಂತೆ, ಮಾನಸಿಕ ಮತ್ತು ಭೌತಿಕ ರೂಪದಲ್ಲಿ, ಆಯಾ ಜೀವನದ ಕರ್ತವ್ಯಗಳೇ ಎನ್ನುವಂತೆ, ನಿರಂತರವೂ ಸಂಕೀರ್ಣಮಯವಾದ ಪರಿವರ್ತನೆ ಹೋದುತ್ತಿರುವ ಮತ್ತು ಇವೆಲ್ಲವೂ ಒಂದರಿಂಲೇ ಒಂದು ಅವಲಂಬಿತವಾಗಿ ಉದ್ಭವಿಸುತ್ತ, ರೂಪಾಂತರವಾಗುತ್ತ ಇರುವ ಎಲ್ಲ ಅವಸ್ಥೆಯನ್ನು ಭೌದ್ಧ ಧರ್ಮ ವಿವೇಚಿಸುತ್ತದೆ.

ಹೀಗಾಗಿ ಇಲ್ಲಿ, ಸಾವು ಎನ್ನುವದು ಅಂತಿಮ ಹಂತ ಅಲ್ಲವೇ ಅಲ್ಲ. ಆದರೆ ಈ ಭೌತಿಕ ಶರೀರದ ವ್ಯವಸ್ಥೆಯಿಂದ ಮುಕ್ತ ನಾಗಿ ಹೊರ ಹೋಗುತ್ತಿರುವ "ಪ್ರಾಣ(Psyche)ದ ಅಸ್ತಿತ್ವದ ಬಗೆಗೆ ಸಂಪೂರ್ಣ ವಿಶ್ವಾಶವಿದೆ. ಇಲ್ಲಿ ಪ್ರಾಣವು (ಆತ್ಮವು) ನೂತನ ಲೋಕವೊಂದನ್ನು ಪ್ರವೇಶಿಸಿ, ಹೊಸ ಜೀವನವನ್ನು ಪಡೆದುಕೊಳ್ಳುತ್ತದೆ. ದೇಹ ಮಾತ್ರ ತನ್ನ ರೂಪಾಂತರವಾಗುವ ತತ್ವವನ್ನು ಕಳೆದುಕೊಂಡು, ಪಂಚಭೂತಗಳಲ್ಲಿ ಲೀನವಾಗುತ್ತದೆ. ಇಲ್ಲಿ "ಜನನ ಎನ್ನುವದು ಆತ್ಮದ ಪುನರುತ್ಥಾನ; ಮರಣ ಎನ್ನುವದು ಆತ್ಮದ ವಿಮೋಚನ" ಎಂದು ಪುಸ್ತಕದ ಲೇಖಕರಾದ ಡಾ॥ ಇವಾನ್ ಮೆಂಟಿಂಗ್ಜರು ಉದ್ದೇಶಪೂರ್ವಕವಾಗಿಯೇ ಪ್ರತಿಪಾದಿಸುತ್ತಿದ್ದಾರೆ. ಹೀಗಾಗಿ ಸಾವು ಎನ್ನುವದು ಒಂದು ಜೀವನ ವ್ಯವಸ್ಥೆಯಿಂದ ಮತ್ತೊಂದು ವ್ಯವಸ್ಥೆಗೆ ಇಡುವ ಪ್ರಪ್ರಥಮ ಹೆಜ್ಜೆಯಾಗಿದೆ. ಈ ಹಿನ್ನೆಲೆಯಲ್ಲಿ ಸಾವನ್ನು ಅಂತಿಮ ಹಂತ ಎಂದು ಪರಿಗಣಿಸಲು ಸಾಧ್ಯವಾಗುವದೇ ಇಲ್ಲ.

ಇನ್ನು ಸಾವಿನ ಭೌತಿಕ ಅಂಶಗಳ ಕುರಿತಾಗಿ ವಿಶ್ಲೇಷಿಸುವಲ್ಲಿ, ಈ "ಸಾವಿನ ಪುಸ್ತಕ"ದಲ್ಲಿ, ಓದುಗರಿಗೆ ಸವಿವರವಾದ ಸಮರ್ಪಕವಾದ ವೈಜ್ಞಾನಿಕ ಸಾಕ್ಷ್ಯಾಧಾರಗಳ ಮೂಲಕವೇ ವಿವರಗಳನ್ನು ಒದಗಿಸುತ್ತಾರೆ. ಸಾವಿನ ಹಂತದ ಸೂಕ್ಷ್ಮಾತಿಸೂಕ್ಷ್ಮ ಹಂತಗಳನ್ನೂ ಸಹಿತ ವಿವೇಚಿಸಲಾಗಿದೆ. ಇದನ್ನೆಲ್ಲ ಸವಿವರವಾಗಿ ಚರ್ಚಿಸಲೇಬೇಕಾದ ಅವಶ್ಯಕತೆ ಇದೆ. ಏಕೆಂದರೆ, ಸಾವಿನ ಸಮೀಪದಲ್ಲಿರುವ ವ್ಯಕ್ತಿ ಅಥವಾ ಅವನ ಸಂಬಂಧಿಗಳು, ಆಗಮಿಸಲಿರುವ ಸಾವಿನ ನಿರ್ಣಯಾತ್ಮಕವಾದ ಘಳಿಗೆಯನ್ನು ಎದುರಿಸಲು ಸಿದ್ಧವಾಗಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ

ಮುಖ್ಯ ಸಂಗತಿ ಎಂದರೆ, "ಸಾವಿನ ಘಳಿಗೆ ಸಮೀಪವಾಗಿರುವಾಗ ಕೇಳಿ ಬರುವ ಧ್ವನಿ"ಗಳ ಕುರಿತು ಈ ಪುಸ್ತಕದ ಲೇಖಕರಾದ ಡಾ॥ ಇವಾನ್ ವೆಂಟಿಂಗ್ಸ್ - ತುಂಬ ವಿವರಗಳನ್ನು ಒದಗಿಸಿದ್ದಾರೆ; "ಆತ್ಮಸಂಬಂಧೀ" ವಿಷಯಗಳಲ್ಲಿ ಪರಿಣಾಮ ಸ್ವರೂಪದಲ್ಲಿ ವಿಘಟನೆಗೊಳ್ಳುತ್ತಿರುವ ಪ್ರಕ್ರಿಯೆಯನ್ನು ಸಾವು ಎಂದು ಕರೆಯಬಹುದಾಗಿದೆ. ಈ ಸಮಯದಲ್ಲಿ ಮನಸ್ಸಿಗೆ (ಚಿತ್ತಕ್ಕೆ) ಅನುರಣನ ಧ್ವನಿ (Humming), ಕೆಲವೊಮ್ಮೆ ಕರ್ಕಶದ ಧ್ವನಿಗಳು ಸಾವಿ ಹದಿನೈದು ತಾಸು ಮೊದಲು ಮತ್ತು ಸಾವಿನ ನಂತರದಲ್ಲಿ ಹದಿನೈದು ತಾಸಿನ ತನಕ ಅವಿರತವಾಗಿ ಕೇಳುತ್ತಿರುತ್ತವೆ. ಈ ಘಟನೆಯನ್ನು 1608 ನೇ ಇಸ್ವಿಯಲ್ಲಿ ಗ್ರೇಯುನ್ ವಾಲ್ಡೀ (Greun Waldi) ಗುರುತಿಸಿದ್ದರು. ತದನಂತರದ ಲೇಖಕರು ಬಹುತೇಕವಾಗಿ ಈ ತಘಟನೆಯನ್ನು ಆಧರಿಸಿಯೇ, ಹಲವಾರು ಸಂಶೋಧನೆಗಳ ಮೂಲಕ ಸಮರ್ಥನೀಯವಾದ ಪುರಾವೆಗಳನ್ನು ಒದಗಿಸಿದರು. ಇದನ್ನೇ ಮುಂದುವರೆಸಿದ ಡಾ॥ ಕಾಲಿಂಗ್ಸ್ (Dr. Collingvas) 1860 ರಲ್ಲಿ, ವಿಶೇಷ ಅಧ್ಯಯನ ಮಾಡಿ ಈ ವಿಷಯವನ್ನು ಒಂದು "ಅಧ್ಯಯನಶೀಲ ಶಾಸ್ತ್ರ"ವನ್ನಾಗಿಸಿದ್ದಾರೆ.

ಈ ಸರಣಿ–ಸರಣಿಗಳ ಸರಮಾಲೆಯು ಸಾವಿನ ಮೂಲಕ ತುಂಡರಿಸಲ್ಪಡುವದಿಲ್ಲ. ಈ ಪ್ರಜ್ಞೆಯಲ್ಲಿರುವ ಶಕ್ತಿ(Phowa)ಯು, ಪ್ರಜ್ಞೆಯ ಹಂತವನ್ನು ನಿಗದಿಗೊಳಿಸುತ್ತ, ಮತ್ತೊಂದು ದೇಹವನ್ನು (ರೂಪವನ್ನು) ಪ್ರವೇಶಿಸುತ್ತ ಸಾಗುತ್ತದೆ. ಭಾರತೀಯ ರಹಸ್ಯ–ವಾದ(ಗುಹ್ಯ–ವಾದ)ವು ಈ ವಿಷಯವಾಗಿ, ಅದರಲ್ಲೂ ಸ್ವೇಚ್ಛೋತ್ಕ್ರಾಂತಿಯ ಕುರಿತು ತಂತ್ರರಾಜ ಗ್ರಂಥವು ವಿವರಿಸುತ್ತದೆ. [ತಂತ್ರರಾಜ; ಪಾಠ; XXVII,VV,45-7/ 72-80]. ಇದು ದೇಹದಲ್ಲಿರುವ (ದಶ) ವಾಯುವಿನ ಕಾರ್ಯಗಳನ್ನು ವಿವರಿಸುತ್ತ, ವಾಯುವಿನ ಧಾರಣೆ ಮತ್ತು ದೇಹದ ವ್ಯವಸ್ಥೆಯ ಬಗೆಗೆ ವಿವರಗಳನ್ನು ಒದಗಿಸುತ್ತದೆ. ಇದು ದೇಹದ ಮುವತ್ತೆಂಟು ಹಂತಗಳಲ್ಲಿ ಅಥವಾ ಸಂಧಿಗಳಲ್ಲಿ ಅಂದರೆ ಮರ್ಮಗಳಲ್ಲಿ ನಡೆಯುವ ಕಾರ್ಯವನ್ನು ಕುರಿತು ಹೇಳುತ್ತಿದೆ. ಇದೇ ತೆರನಾದ ಕಾರ್ಯವು ಪುನರುತ್ಥಾನದ ಅವಧಿಯಲ್ಲಿಯೂ ನಡೆಯುತ್ತದೆಯೆ? ಎನ್ನುವ ಪ್ರಶ್ನೆ ಉದ್ಭವಿಸದರೆ, ಇದಕ್ಕೆ ಇವಾನ್ ವಿವರವಾದ ಸಮರ್ಥನೆಗಳನ್ನು ಕೊಟ್ಟಿರುವದು ಸಂತಸದ ಸಂಗತಿಯಾಗಿದೆ

ಒಂದು ನಿಯಮದಂತೆ (ತತ್ವದಂತೆ), ಸಾವಿನ ನಂತರದಲ್ಲಿ ಪ್ರಜ್ಞೆಯು ಹೇಗೆ ತನ್ನ ಸರಣಿಯನ್ನು ತುಂಡರಿಸಿಕೊಂಡು, ರೂಪಾಂತರವಾಗುತ್ತಿರುವಂತೆಯೇ,

ಇನ್ನೂ ದೇಹಧಾರಣೆ ಮಾಡಿರದ ಸ್ಥಿತಿಗೆ ಪ್ರವೇಶ ಮಾಡುವ ಹಂತದ ಸಂದರ್ಭದಲ್ಲಿ, ಅಂತಹ ಪ್ರವೇಶವು ಮಾತೃಕೆ (ಗರ್ಭ–Matrix) ಎಡೆಗೆ ಇದ್ದ ಹಾಗೆ ತೋರುತ್ತದೆ. ಆದರೆ ಈಗಾಗಲೇ ಜೀವ–ದೇಹ ಹೊಂದಿದ ವ್ಯವಸ್ಥೆಯ ಹಂತದಲ್ಲಿರುವ ದೇಹವನ್ನು ಪ್ರವೇಶಿಸುವ ಸಂದರ್ಭವಿರುವಲ್ಲಿ, ಆ ಶಕ್ತಿಯ ಕಾರ್ಯವು ಅಥವಾ ಅದರ ಶಕ್ತಿಯು(ಸಿದ್ಧಿಯು) "ಆವೇಶದ" ಮೂಲಕವಾಗಿ ಪ್ರಕಟಗೊಳ್ಳುತ್ತದೆ. ಇದು ಮತ್ತೊಂದು ದೇಹ ಮತ್ತು ಪ್ರಜ್ಞೆ ಹೊಂದಿದ ವ್ಯವಸ್ಥೆಗೆ ಪ್ರವೇಶಿಸುತ್ತಿರುವ ಬೇರೆಯದೇ ಆದ ಪ್ರಜ್ಞಾಸ್ಥಿತಿಯಾಗಿರುತ್ತದೆ. ಇದನ್ನೇ ಸರಳೀಕರಿಸಿ ವ್ಯತ್ಯಾಸವನ್ನು ಅರಿತುಕೊಳ್ಳುವದಾದಲ್ಲಿ,ಈ ರೀತಿಯಲ್ಲಿ ರೂಪು ಪಡೆಯುವ ಪ್ರಜ್ಞೆಯು "ಆವೇಶ ಪ್ರಜ್ಞೆ"ಯಾಗಿ ಹೊರ ಬರುವಲ್ಲಿ, ಅದು ಮತ್ತೆ ತನ್ನ ಮೂಲ ದೇಹಕ್ಕೆ ಹೋಗಲು ಸಾಧ್ಯವಾಗುವದಿಲ್ಲ. ಇದನ್ನೇ "ಸಾವು" ಎಂದು ಊಹಿಸಬಹುದಾದ ಹಂತ. ಇಲ್ಲಿ ಪ್ರಜ್ಞೆಯು ಅದನ್ನು ತೊರೆದಿರುತ್ತದೆ.

**ಪ್ರಜ್ಞೆಯ ಸ್ಥಾನಾಂತರ**

ಒಂದು ವೇಳೆ ಈ ಪ್ರಜ್ಞೆಯ ಸ್ಥಾನಾಂತರವು ಘಟಿಸಿದ್ದರೆ (Effected), ಅಂತಹ ಸಂಧರ್ಭವಿರುವಲ್ಲಿ, ಬಹುತೇಕವಾಗಿ ಅದು Bordo ಹಂತವಾಗಿರುವದಿಲ್ಲ. ಅಂತಹ ಸಂದರ್ಭದಲ್ಲಿ, ಪ್ರಜ್ಞೆಯ ಸ್ಥಾನಾಂತರವು ತುಂಡರಿಸಲ್ಪಟ್ಟು ಸಾವಿನ ಹಂತವನ್ನು ಒಳಗೊಂಡ ಘಟನೆಯಾಗಿರುವದಿಲ್ಲ. ಇದನ್ನು ವಿವರವಾಗಿ ತಿಳಿದುಕೊಳ್ಳ ಬೇಕೆಂದರೆ, ಈ "ಸಾವಿನ ಗ್ರಂಥ"ವನ್ನು ಪೂರ್ತಿಯಾಗಿ ಅಧ್ಯಯನ ಮಾಡಬೇಕಾಗುತ್ತದೆ.

ಯಾವಾಗ ವ್ಯಕ್ತಿಯ ಉಸಿರಾಟವು ನಿಲ್ಲುವ ಹಂತವನ್ನು ತಲುಪುತ್ತದೆಯೋ, ಆಗ ಆ ವ್ಯಕ್ತಿಗೆ ಕೆಲವೊಂದು ಸೂಚನೆಗಳನ್ನು ಕೊಡಲಾಗುತ್ತದೆ. ಆ ಸೂಚನೆಗಳ ಪ್ರಕಾರವಾಗಿಯೇ ನಿಗದಿಗೊಳಸಿದ ಅಪಧಮನಿ(Arteries)ಗಳನ್ನು ಒತ್ತಿ ಹಿಡಿದು ಸೂಚನೆಗಳನ್ನು ನೀಡಲಾಗುತ್ತದೆ. (ಅಪಧಮನಿ ನಾಳಗಳು ಹೃದಯದಿಂದ ಪ್ರಾಣವಾಯುಯುಕ್ತ ಶುದ್ಧರಕ್ತವನ್ನು ದೇಹದ ಇತರ ಅಂಗೋಪಾಂಗಗಳಿಗೆ ಒಯ್ಯುವ ತೋರಭಿತ್ತಿಯ ಕಿರು ತೆರಪಿನ ನಾಳವಾಗಿದೆ. ಇನ್ನು ಅಭಿಧಮನಿಯ ನಾಳಗಳಲ್ಲಿ ಆಕ್ಸಿಜನ್ ರಹಿತ ರಕ್ತ ಪ್ರವಹಿಸುತ್ತಿರುತ್ತದೆ.) ಈ ರೀತಿಯಾಗಿ, ಅಪಧಮನಿಗಳನ್ನು ಒತ್ತಿ ಹಿಡಿಯುವದರ ಮೂಲಕ ಸಾವಿನ ಸಮೀಪದಲ್ಲಿರುವ ವ್ಯಕ್ತಿಯ ಪ್ರಜ್ಞೆಯನ್ನು ಸೂಕ್ತವಾದ ಸಂಪ್ರಜ್ಞೆಯತ್ತ ನಿರ್ದೇಶಿಸಲಾಗುತ್ತದೆ. ಸಾವಿನ–

ಪ್ರಜ್ಞೆಯ ಗುಣಲಕ್ಷಣವೆಂದರೆ, ಅದು “ಆತ್ಮಸ್ವರೂಪ ಕಾರ್ಯದ” ಭವಿಷ್ಯವನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಅಂದರೆ, ಅಸ್ತಿತ್ವದಲ್ಲಿರುವ ಈ ಜೀವವು ತನ್ನ ಮುಂದಿನ ರೂಪಾಂತರಗಳ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಹೋಗುವ ಸಂಗತಿಯನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿಯೇ ಸಾವಿನ ಸಂದರ್ಭವಿರುವ ಸಮಯದಲ್ಲಿ ಹಿಂದೂ ಮತ್ತು ಕ್ಯಾಥೋಲಿಕ್ ಪರಂಪರೆಯಲ್ಲಿ ದೇವಪೂಜೆ, ದೇವರ ನಾಮ ಪಠಣಗಳು ಇರುತ್ತವೆ.

ಈ ರೀತಿಯಲ್ಲಿ ಒತ್ತಿ ಹಿಡಿಯಲ್ಪಟ್ಟ ಅಪಧಮನಿಗಳು, ಈ ದೇಹದಿಂದ ಹೊರಗೆ ಹೊರಡುತ್ತಿರುವ ಪ್ರಾಣ(Vital Current)ವು ಪಯಣಿಸಬೇಕಾದ ಪಥವನ್ನು ನಿಬಂಧನೆಗೊಳಪಡಿಸುತ್ತದೆ. ಅತ್ಯಂತ ಸೂಕ್ತವಾದ ನಿರ್ಗಮನದ ಪಥವೆಂದರೆ “ಬ್ರಹ್ಮರಂಧ್ರ”ವಾಗಿದೆ. ಇದನ್ನು Foraman ಅಥವಾ Monoro ಎಂದು ಕರೆಯಲಾಗುತ್ತಿದೆ. ಈ ರೀತಿಯಲ್ಲಿ ಬ್ರಹ್ಮರಂಧ್ರದಿಂದ ಪ್ರಾಣೋತ್ಕ್ರಮಣವಾಗಿರುವ ಹಲವಾರು ಘಟನೆಗಳು ದಾಖಲೆಗಳಾಗಿವೆ. ಪಾಶ್ಚಿಮಾತ್ಯ ವ್ಯವಸ್ಥೆಯಲ್ಲಿ ಅತ್ಯಂತ ಪ್ರಾಚೀನ ಘಟನೆಯೆಂದರೆ, ಅತ್ಯಂತ ಕುಗ್ರಾಮವಾಗಿರುವ ಮತ್ತು ಪ್ರಾಚೀನ ಪ್ರದೇಶವೂ ಆಗಿರುವ ಸ್ಯಾನ್ ಕ್ರಿಸ್ಟೋವೆಲ್ (ಫ್ಯಾಸಿಫಿಕ್ ಮಹಾಸಾಗರದ ಸೋಲೋಮನ್ ನಡುಗಡ್ಡೆ)ದಲ್ಲಿ ಒಂದು ಘಟನೆ ದಾಖಲಿಸಲ್ಪಟ್ಟಿದೆ. ಅದೇ ರೀತಿಯಲ್ಲಿ ಧಾರ್ಮಿಕ ವಿಧಿ–ವಿಧಾನಗಳಲ್ಲಿ ಬಳಸುವ “ರಂಧ್ರವಿರುವ ಕಲ್ಲಿನ” ವಿಧಾನದ ಘಟನೆಗಳೂ ಯುರೋಪ್, ದಕ್ಷಿಣ ರಶಿಯಾ, ಮತ್ತು ದಕ್ಷಿಣ ಭಾರತದಲ್ಲಿ ಕಾಣ ಸಿಗುತ್ತವೆ. ಈ ರಂಧ್ರೀಶಿಲೆಯ ವಿಧಾನವು, ಮೃತವ್ಯಕ್ತಿಯ (ಪ್ರಾಣದ) ಮುಂದಿನ ಪ್ರಯಾಣವನ್ನು ಸುಖಕರವಾಗಿಸುವತ್ತ ಹಾಗೂ ಮೂಲ ಗುರಿಯನ್ನು ಸೇರಲಿ ಎನ್ನುವ ಭಾವವನ್ನು ಹೊಂದಿದೆ.

ಭಾರತದ ವ್ಯವಸ್ಥೆಯಲ್ಲಿ, ಗರುಡ ಪುರಾಣದ ಪ್ರೇತಖಂಡದ ವಿವರಣೆಯಂತೆ, ದೇಹಕ್ಕಿರುವ ನವರಂಧ್ರಗಳು ವ್ಯಕ್ತಿ ಬದುಕಿದ್ದಾಗ ಅನುಭವಕ್ಕೆ ದಾರಿ ಮಾಡಿ ಕೊಡುವ ಮಾರ್ಗಗಳಾಗಿವೆ. ಇವು ನೈಸರ್ಗಿಕವಾಗಿ ದತ್ತವಾಗಿರುತ್ತವೆ. ಹೀಗಾಗಿ ಗುರುಸ್ವರೂಪಿಯಾಗಿರುತ್ತವೆ. ಹೀಗಾಗಿ ಅತ್ಯಂತ ಪರಿಶುದ್ಧವಾದ ನಿಷ್ಕ್ರಮಣದ ರೀತಿಯೆಂದರೆ, ಅದು ನಾಭಿಗಿಂತ ಮೇಲಿನ ಹಂತದ ದ್ವಾರಗಳ ಮೂಲಕವೇ ಪ್ರಾಣೋತ್ಕ್ರಮಣವಾಗಬೇಕಾಗುತ್ತದೆ. ಅದರಲ್ಲೂ ತಲೆಬುರುಡೆಯ ಮೇಲ್ಭಾಗದಲ್ಲಿ ಸೀಳು ಉಂಟಾಗುವ ಮೂಲಕ (Fissure on the top of cranium) ಪ್ರಾಣ ನಿರ್ಗಮಿಸಿದಲ್ಲಿ ಶ್ರೇಷ್ಠವೆಂದು

ಪರಿಗಣಿಸಲಾಗುತ್ತದೆ. [ಸಾಧುಗಳು/ಗುರುಗಳು ದೇಹತ್ಯಾಗ ಮಾಡಿದಾಗ ತಲೆಯ ಮೇಲೆ ತೆಂಗಿನಕಾಯಿ ಒಡೆಯುವ ಪದ್ಧತಿ ಇದನ್ನೇ ಸಂಕೇತಿಸುತ್ತದೆ. ಮಹಾಭಾರತದ ಯುದ್ಧದ ಸಂದರ್ಭದಲ್ಲಿ ಕರ್ಣನ ಸಾವಿನ ಸಂದರ್ಭದಲ್ಲಿ ಅವನ ಸಾವುನ್ನು ಕುರಿತು ಭಾನು ಮಂಡಲವನೊಡೆದು ಅಮಲ ಸ್ವರ್ಗಕ್ಕೆ ಏರಿದ ಎನ್ನುವ ವಿವರಣೆ ಇದೆ]. ಈ ಬ್ರಹ್ಮರಂಧ್ರವು ಮನುಷ್ಯನ ದೇಹದಲ್ಲಿ ಭೌತಿಕ ಅಸ್ತಿತ್ವವನ್ನು ಹೊಂದಿದ್ದು, ಪ್ರಮಸ್ತಿಷ್ಕ(ಮುಮ್ಮಿದಿಳು)ದ ಹಂತಕ್ಕಿಂತಲೂ ಮೇಲೆ ಇರುತ್ತದೆ. ಇದನ್ನೇ ಯೋಗಶಾಸ್ತ್ರವು ಸಹಸ್ರದಳ ಪದ್ಮವೆಂದು ಗುರುತಿಸುತ್ತದೆ. ಈ ಸಹಸ್ರದಳ ಪದ್ಮದಲ್ಲಿರುವ ಆತ್ಮವು (Spirit) ಪ್ರಮುಖ ಅಭಿವ್ಯಕ್ತಿಯಾಗಿದ್ದು (Manifest) ಇದೇ ಸಂಪ್ರಜ್ಞೆಯ ಮೂಲಪೀಠವಾಗಿರುತ್ತದೆ. ಹೀಗಾಗಿಯೇ ಹಿಂದೂಗಳು ಈ ಸ್ಥಳದಲ್ಲಿ ಜುಟ್ಟು ಅಥವಾ ಶಿಖಾ (Crest-lock) ಇಟ್ಟುಕೊಂಡಿರುತ್ತಾರೆ. ಇದರ ಮೂಲಕವೇ ಅವರು ಪ್ರಜ್ಞೆಯ ಪರಮಧಾಮವಾದ ಭಗವಂತನ (ಪರಮಾತ್ಮನ) ಕೃಪೆಗೆ ಪಾತ್ರರಾಗಿ, ಗೌರವಯುತವಾಗಿ, ಮುಕ್ತಿಯನ್ನು ಪಡೆಯಲು ಆಯ್ಕೆಯಾಗುವದನ್ನು ಇಚ್ಛಿಸುತ್ತಾರೆ. ಈ ಶಿಖಾ ಮಾರ್ಗದ ಮೂಲಕವೇ ಸ್ವರ್ಗಕ್ಕೋ ಅಥವಾ ನರಕಕ್ಕೋ ಸಾಗಲು ಸಾಧ್ಯವಾಗುತ್ತದೆ ಎನ್ನುವ ಬಾಲಿಶ ಹೇಳಿಕೆಗಳ ಮೂಲಕ ಅವರನ್ನು ಅವಹೇಳನ ಮಾಡುವದನ್ನು ಬಿಡಬೇಕಾಗಿದೆ.

---

**ಹೆಚ್ಚಿನ ಅಧ್ಯಯನಕ್ಕೆ –**


* The Science of Death; Thanatology; Author; Rosewell Parks [Journal of the American Medical Association 1912/4/2]

1. ತಂತ್ರರಾಜ, ಭಾಗ 17, 15 / ಪುಟ (83–100), ಸಾವು ಸಂಭವಿಸುತ್ತಿರುವಾಗ ತೋರುವ ಸಂಕೇತಗಳು. [ತಾಂತ್ರಿಕ ಪಠ್ಯಗಳು; ಲೇ; ಆರ್ಥರ್ ಎವಿಲಾನ್]

2. ತಾಂತ್ರಿಕ ಗ್ರಂಥಗಳು; ಸಂಪುಟ VII ಪುಟ 23 ಶ್ರೀ ಚಕ್ರಸಂಹಾರ ಗ್ರಂಥ (ಬೌದ್ಧ ಗ್ರಂಥ)


ಈ ಲೇಖನವು "ದಿ ಟಿಬೇಟಿಯನ್ ಬುಕ್ ಆಫ್ ಡೆಥ್'ದ ಮುನ್ನುಡಿಯನ್ನು ಆಧರಿಸಿದೆ.

# ದಿವ್ಯ ಜೀವನ

## ಮೃತ್ಯು ವಾಸನಾ ಮತ್ತು ಅಸಾಮರ್ಥ್ಯ

**– ಅನುವಾದಕರು: ಜಾನ್ವಿ**

ಈ ಅಧ್ಯಾಯದಲ್ಲಿ ಶ್ರೀ ಅರವಿಂದರು ಪ್ರಾಣ ಶಕ್ತಿಯು ಮಾನವನ ವೈಯಕ್ತಿಕ ನೆಲೆಯಲ್ಲಿ ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ವಿವರಿಸುತ್ತಾರೆ.

ಪ್ರಾಣ ಶಕ್ತಿಯು ವಿಶ್ವವ್ಯಾಪಿಯಾದ ಶಕ್ತಿಯು ಇದು ಸೃಷ್ಟಿ ಮಾಡುವ, ಚಲನೆ ಮೂಡಿಸುವ, ಪೋಷಣೆ ಮಾಡುವ, ಪರಿವರ್ತನೆ ಮಾಡುವ, ಅವಶ್ಯಕತೆಗನು–ಗುಣವಾಗಿ ನಾಶ ಮಾಡಿ ಪುನಃಸೃಷ್ಟಿ ಮಾಡುವ ಕೆಲಸ ಮಾಡುತ್ತದೆ. ಪ್ರಾಣಶಕ್ತಿಯು ಪ್ರಜ್ಞಾ (ಬೆಲ್) ಶಕ್ತಿಯ ಕೊನೆಯ ಕ್ರಿಯಾಶಕ್ತಿಯಾಗಿದ್ದು ಪ್ರತ್ಯೇಕ ಜೀವಿಯಲ್ಲಿ ವೈಯಕ್ತಿಕ ನೆಲೆಯಲ್ಲಿ ಕೆಲಸ ಮಾಡುತ್ತದೆ. ಮನಸ್ಸು ಮತ್ತು ಪ್ರಾಣ ಎರಡೂ ಒಂದೇ ಬೆಲ್‌ಶಕ್ತಿಯ ರೂಪಗಳೇ. ಆದರೆ ವೈಯಕ್ತಿಕ ನೆಲೆಯಲ್ಲಿ ಅವು ಮಾಡುವ ಕೆಲಸಗಳ ಮೇಲಿಂದ ಭಿನ್ನವೆಂದು ತೋರುತ್ತವೆ.

ಪ್ರಾಣ ಶಕ್ತಿಯು, ವಿದ್ಯುತ್ ಯಂತ್ರದಲ್ಲಿ ನಿರಂತರ ವಿದ್ಯುತ್ ನಿರ್ಮಾಣ–ವಾಗುವಂತೆ ಶರೀರದಲ್ಲಿ ನಿರಂತರ ಶಕ್ತಿಯನ್ನು ತುಂಬುತ್ತ, ನವೀಕರಿಸುತ್ತ ಹೋಗುತ್ತದೆ. ಅಂತರಂಗದಲ್ಲಿರುವ ಆತ್ಮನ ಉಪಯೋಗಕ್ಕೆ ಶರೀರವು ಯೋಗ್ಯವಾಗಿರುವಂತೆ, ಅದನ್ನು ಸಿದ್ಧಪಡಿಸುತ್ತ, ನವೀಕರಿಸುತ್ತ, ಅವಶ್ಯವಿದ್ದರೆ ಎಲ್ಲವನ್ನೂ ವಿಘಟನೆ ಮಾಡಿ ಪುನರಚಿಸುವ ಕೆಲಸವನ್ನು ಕೂಡ ಪ್ರಾಣ ಶಕ್ತಿಯು ಮಾಡುತ್ತದೆ. ಆದರೆ ಮನಸ್ಸಿನ ಸ್ತರದ ಕೆಲಸ ಬಂದಾಗ ತುಸು ಅಸ್ತವ್ಯಸತೆ ನಿರ್ಮಾಣವಾಗುತ್ತದೆ. ಅಲ್ಲಿಂದಲೇ ಸಮಸ್ಯೆಯ ಆರಂಭ ಎಂದು ಶ್ರೀ ಅರವಿಂದರು ಹೇಳುತ್ತಾರೆ. ಏಕೆಂದರೆ ಮನಸ್ಸಿನ ಕೆಲಸ ಆರಂಭವಾಗುವುದೇ ಅಜ್ಞಾನದಿಂದ ಈ ಅಜ್ಞಾನವನ್ನು ನಾವು ಗುರುತಿಸಬೇಕಾಗುತ್ತದೆ. ಅತಿಮಾನಸ ಪ್ರಜ್ಞೆಯು ಮನಸ್ಸಿನ ಸ್ತರದಲ್ಲಿ ಕೆಲಸ ಮಾಡಲು ಬರುವಾಗ ಅನೇಕ ಅಂಶಗಳಲ್ಲಿ ಒಡೆಯುತ್ತದೆ. ಅತಿಮಾನಸ ಪ್ರಜ್ಞೆಯ ವಿಭಜನೆಯೇ ಪ್ರಾಣದ ವಿಭಿನ್ನ ಆಕಾರಗಳ ವೈಯಕ್ತಿಕತೆಯ ನಿಮಾಣಕ್ಕೆ ಕಾರಣ. ಮನಸ್ಸಿನ ಈ ವಿಭಜನೆಯನ್ನೇ ಅವಿದ್ಯೆ ಎಂದು ಗುರುತಿಸಲಾಗುವುದು. ಅವಿದ್ಯೆಯಿಂದಾಗಿ ಏಕತೆಯ ಭಾವ ಸಂಪೂರ್ಣ ಮರೆಯಾಗುತ್ತದೆ.

ಅವಿದ್ಯೆಯಿಂದಲೇ ನಮ್ಮ ವಿಶ್ವದ ಕಥೆ ಆರಂಭವಾಗುತ್ತದೆ. ಮಾನವನು ಸಾವು, ವಾಸನಾ ಮತ್ತು ಅಸಾಮರ್ಥ್ಯ ಎಂಬ ಹಣೆಪಟ್ಟಿ ಕಟ್ಟಿಕೊಂಡೇ ಹುಟ್ಟುತ್ತಾನೆ.

ಪರಾತ್ಪರ ಚಿತ್‌ಶಕ್ತಿಯು ಪ್ರಕಟ ವಿಶ್ವದಲ್ಲಿ ಅಂತರ್ಗತವಾಗುವ ಕ್ರಿಯೆಯಲ್ಲಿ ಬಂದಾಗ ವ್ಯಕ್ತಿಗತವಾಗಿ ಬದಲಾಗುತ್ತದೆ. ಇದನ್ನೂ ಒಂದು ಸಮುದ್ರಕ್ಕೆ ಹೋಲಿಸಿ ತಿಳಿದುಕೊಳ್ಳಬಹುದು. ಸಮುದ್ರದ ನೀರಿನಲ್ಲಿ ಅಲೆಗಳ ನೀರಿನಲ್ಲಿ ಭೇದವಿಲ್ಲ; ಆದರೆ ಅವುಗಳ ತೋರಿಕೆಯಲ್ಲಿ, ಚಲನೆಯಲ್ಲಿ ಭೇದವಿದೆ. ಸಮುದ್ರದ ನೀರಾಗಿರುವವರೆಗೆ ಅಲೆಗಳ ನೀರಿಗೆ ಭಯವಿಲ್ಲ. ಆದರೆ ಅಲೆಗಳಾಗಿ ಬದಲಾಯಿತೋ ಆಗ 'ವಿನಾಶದ' ಭಯ ಆರಂಭವಾಗುತ್ತದೆ. ಇದನ್ನೇ ಅಸಾಮರ್ಥ್ಯ ಎಂದು ಕರೆಯುವುದು. ಅಸಾಮರ್ಥ್ಯವೇ ತಾತ್ಕಾಲಿಕ (ಅಶಾಶ್ವತತೆ), ಅವಿದ್ಯೆ, ಮೃತ್ಯು ಮತ್ತು ಬಯಕೆ ಈ ರೀತಿ ಪ್ರಭೇದಗಳ ರೂಪದಲ್ಲಿ ವ್ಯಕವಾಗುತ್ತದೆ. ತನ್ನ ಸೀಮಿತತೆ, ತಾತ್ಕಾಲಿಕ ಅಸಾಮರ್ಥ್ಯವನ್ನು ಮೀರಬೇಕೆಂಬ ಬಯಕೆಯೇ ವಾಸನಾ; ಇದು ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲಿಯೂ ಸೂಕ್ಷ್ಮ ರೂಪದಲ್ಲಿಯಾದರೂ ಇದ್ದೇ ಇರುತ್ತದೆ. ಪರಮಾಣುವಿನಲ್ಲಿರುವ ಆಕರ್ಷಣ–ವಿಕರ್ಷಣ ಕ್ರಿಯೆಗೆ ಈ ವಾಸನಾ ಅಥವಾ ಬಯಕೆಯೇ ಮೂಲ. ಆಕರ್ಷಣೆಯು ಏಕತೆಯ ಅಥವಾ ಸಮೀಕರಣತೆಯ ದ್ಯೋತಕ ಹಾಗೆಯೇ ವಿಕರ್ಷಣೆಯು ಪ್ರತ್ಯೇಕತೆಯ ಅಥವಾ ವೈಯಕ್ತಿಕತೆಯನ್ನು ಕಾಪಡಿಕೊಳ್ಳಬೇಸ್ನುವುದರ ಸಂಕೇತ. ಆದ್ದರಿಂದ ಪೂರ್ಣ ಯೋಗದಲ್ಲಿ ಇವರೆಡೂ ಮುಖ್ಯ: ಪ್ರತ್ಯೇಕತೆ ಹಾಗೂ ಏಕತೆ. ಈ ಆಕರ್ಷಣೆಯೇ ಬಯಕೆ. ಇದೇ ವಾಸನಾ. ಬಯಕೆ ಅಥವಾ ವಾಸನಾ ಕೆಟ್ಟದ್ದೇನಲ್ಲ: ಅದು ಏಕತೆಯ ಪ್ರತೀಕ. ಭೌತಿಕ ಸ್ತರದಲ್ಲಿ ಈ ವಾಸನಾ; 'ಹಸಿವಿನ' ರೂಪ ತಾಳುತ್ತದೆ. ಈ ಹಸಿವು ಕೂಡ ಏಕತೆಯ ಬಯಕೆಯನ್ನೇ ಸೂಚಿಸುತ್ತದೆ. ಪ್ರೀತಿ, ಪ್ರೇಮ ಕೂಡ ಏಕತೆಯ ಪ್ರತೀಕವು; ಇದು ಪ್ರಾಣಿಕ ಸ್ತರದಲ್ಲಿ ವ್ಯಕವಾಗುವ ಹಸಿವು ಅಥವಾ ಏಕತೆಯ ಸೂಚಕ.

ಈ ಹಸಿವು ಅಥವಾ ಬಯಕೆಯೇ ಸಾವಿಗೆ ಹೇಗೆ ಕಾರಣವಾಗುತ್ತದೆ? The eater eating is him self eaten. ನಮ್ಮ ಬಯಕೆ ನಮ್ಮನ್ನು ಹಾಳು ಮಾಡಬಹುದು. "ತಿನ್ನುವವನು ತಿನ್ನಲ್ಪಡುತ್ತಾನೆ" ಇದು ನಿಯಮ. ಹಾಗೆಂದು ಅದನ್ನು ಬಿಡಬೇಕೆಂದು ಅರ್ಥವಲ್ಲ. ಅದನ್ನು ಬಿಡುವುದು ಸಾಧ್ಯವಿಲ್ಲ ಕೂಡ. ನಾವು ಅದರ ಸೀಮೆ ಹಾಗೂ ವ್ಯಾಪ್ತಿಯನ್ನು ತಿಳಿದುಕೊಳ್ಳಬೇಕು. ಈ ಬಯಕೆಯನ್ನು ನಾವು ಬೆಳೆಯಲು ಬಳಸಿಕೊಳ್ಳಬೇಕು, ಪ್ರಜ್ಞೆಯನ್ನು ವಿಶಾಲಗೊಳಿಸಲು ಬಳಸಬೇಕು.

ಈ ಹಸಿವು ಅಥವಾ ಬಯಕೆಯು ಸಾವಿಗೆ ಕಾರಣವಾಗುತ್ತದೆ. ಇದನ್ನು ಶ್ರೀ ಅರವಿಂದರು ಬಹಳ ಚೆನ್ನಾಗಿ ವಿವರಿಸುತ್ತಾರೆ. ವಿಶ್ವದಲ್ಲಿ ಬಾಹ್ಯದಿಂದ ಅನೇಕ ಶಕ್ತಿಗಳು ನಮ್ಮ ಮೇಲೆ ದಾಳಿ ಮಾಡುತ್ತವೆ, ಆ ಸಂಘಾತಗಳನ್ನು ನಾವು

ತಿಳಿದುಕೊಳ್ಳಬೇಕಾಗುತ್ತದೆ. ಇಲ್ಲಿ ಸಮತೋಲ ತಪ್ಪಿದ್ದರೆ, ಶರೀರ, ಪ್ರಾಣಗಳಲ್ಲಿ ಅಸಾಮರ್ಥ್ಯ ಮತ್ತು ವಿಘಟನೆ ಅಥವಾ ಸಾವಿನ ಪ್ರಕ್ರಿಯೆ ಆರಂಭವಾಗುತ್ತದೆ. ಏಕೆಂದರೆ ಹೊಸ ಸಂಘಟನೆ ಅವಶ್ಯವಾಗುತ್ತದೆ. ಅಂದರೆ, ಮೃತ್ಯುವಿನ ಮೊದಲ ಕಾರಣವೆಂದರೆ ಈ "ತಿನ್ನುವವನನ್ನು ತಿನ್ನುವ ಕ್ರಿಯೆಯೇ ತಿಂದು ಹಾಕುತ್ತದೆ" ಎಂಬ ತತ್ವವೇ. ವೈಯಕ್ತಿಕ ವ್ಯಕ್ತಿ ಹಾಗೂ ವಿಶ್ವ ಇವುಗಳ ನಡುವೆ ಶಕ್ತಿ ವಿನಿಮಯ ಪ್ರಾಣವು ಬಾಹ್ಯ ಶಕ್ತಿಗಳ ಸಂಘಾತದಿಂದ ವಿಘಟನೆ ಹೊಂದುವ ಪ್ರತಿಕ್ಷಣ ಇರುತ್ತದೆ.

ಪ್ರಾಣ ಶಕ್ತಿಯು ಶರೀರದ ಆಹಾರವಾಗಿದೆ, ಅದೇ ಕಾಲಕ್ಕೆ ಶರೀರವು ಪ್ರಾಣ ಶಕ್ತಿಯ ಆಹಾರವು ಆಗಿದೆ. ನಾವು ತಿಂದ ಆಹಾರವನ್ನು ಜೀರ್ಣಿಸಲು ಶರೀರದೊಳಗಿನ ಸಂಗ್ರಹಿತ ಶಕ್ತಿ ವ್ಯಯವಾಗುತ್ತದೆ. ಹೀಗೆ ಅವು ಪರಸ್ಪರ ಭೋಕ್ತಾ. ಭೋಗ್ಯ ಎರಡೂ ಆಗಿವೆ. ಈ ಸಮತೋಲನ ಕಾಯ್ದುಕೊಂಡರೆ ವ್ಯಾಧಿ ಮುಂತಾದವು ಕಾಡುವುದಿಲ್ಲ. ಅನ್ಯಥಾ ವ್ಯಾಧಿ, ವೃದ್ಧಾಪ್ಯ, ಅಸಾಮರ್ಥ್ಯ, ದೌರ್ಬಲ್ಯ ಇವೆಲ್ಲ ಸಾಮಾನ್ಯ. ಅಷ್ಟೇ ಅಲ್ಲ ಪ್ರಾಣಿಕ ಶಕ್ತಿಗಳು, ಅಂದರೆ ಸಿಟ್ಟು, ದ್ವೇಷ, ಮತ್ಸರ ಮುಂತಾದ ನಕಾರಾತ್ಮಕ ಶಕ್ತಿಗಳೂ ಸಹ ನಮ್ಮ ಶರೀರದ ಸಾಕಷ್ಟು ಬಲವನ್ನು ಹಾಳು ಮಾಡುತ್ತವೇ ಅಥವಾ ತಿನ್ನುತ್ತವೆ.) ಆದ್ದರಿಂದ ಸಾಧಕರು ಆದಷ್ಟು ಇಂಥ ಭಾವಾವೇಶಗಳಿಗೆ ಮನಸೋಲದಂತೆ ಸಮತೆ ಕಾಯ್ದಕೊಳ್ಳುತ್ತಾರೆ. ಆದರೆ ಅನೇಕ ಸಂದರ್ಭಗಳಲ್ಲಿ ವೈಯಕ್ತಿಕ ಪ್ರಯತ್ನದಿಂದ ಇದು ಸಾಧ್ಯವಾಗದಾದಾಗ ಉನ್ನತ ಪ್ರಜ್ಞೆಯನ್ನು ನೆರವಿಗಾಗಿ ಪ್ರಾರ್ಥಿಸಬೇಕಾಗಿ ಬರುತ್ತದೆ.

ಆದ್ದರಿಂದ ಎಲ್ಲಕ್ಕಿಂತ ಉತ್ತಮ ಉಪಾಯವೆಂದರೆ ಅಂತರಾತ್ಮನ ಜಾಗೃತೆ. ಅಂತರಾತ್ಮನು ಸದ್ಯಕ್ಕೆ ಒಂದೇ, ಅಂದರೆ ವರ್ತಮಾನದ ಶರೀರ, ಪ್ರಾಣ, ಮನಗಳ ಕ್ಷೇತ್ರಕ್ಕೆ ಸೀಮಿತವಾಗಿದೆ ಅನಿಸಿದರೂ, ಅವನಿಸಿದರೂ ಜನ್ಮ ಜನ್ಮಾಂತರಗಳ ಅನುಭವ ಹಾಗೂ ಶಕ್ತಿಸಂಚಯ ಇರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಈ ಶರೀರದ, ಸೀಮಿತ ವ್ಯಕ್ತಿ ಮತ್ತೆಯ ಬದಲಾವಣೆ ಅವಶ್ಯವಿದೆ ಎಂದು ಅನಿಸುವುದು. ಶರೀರ ಮತ್ತು ವ್ಯಕ್ತಿ ಮತ್ತೆಯ ವಿಘಟನೆ ಅಂದರೆ ಆತ್ಮದ ಅನುಭವ ಮತ್ತು ಪಾಠ ಎಂದು ಅರ್ಥ. ವಿಶ್ವ ಶಕ್ತಿಗಳಿಗೆ ಮಣಿಯುವ, ಅವುಗಳ ಆಘಾತಗಳನ್ನು ತಾಳಿಕೊಂಡು ಮತ್ತೆ ನವೀಕೃತವಾಗಿ ಬರುವ ಯತ್ನ. ಈ ದೃಷ್ಟಿಯಿಂದ ಕೂಡ ಸಾವು ಅನಿವಾರ್ಯವಾಗುವುದು.

ಸಚ್ಚಿದಾನಂದನು ವೈಯಕ್ತಿಕ ಜೀವಿಯಾಗಿ ಪ್ರಕಟನಾಗಿರುವ ಉದ್ದೇಶವೇನು? ಸೃಷ್ಟಿಯ ಅಮೃತ ಆನಂದವನ್ನು ಸವಿಯಲೆಂದೇ ಅವನು ಪ್ರಕಟವಾಗಿದ್ದಾನೆ.

ಜೀವನಾಗಿ, ಪ್ರತ್ಯೇಕ ಆತ್ಮನಾಗಿ ಬರುವಾಗ ವಿಶ್ವದಲ್ಲಿನ ಅನಂತ ಅನುಭವಗಳ ಆನಂದವನುಭವಿಸಬೇಕೆಂಬ ಇಚ್ಛೆಯೇ ಆಗಿದೆ. ಅಂದರೆ, ಸಾಂತವಾದ ಶರೀರದಲ್ಲಿ ಅನಂತ ಆನಂದವನ್ನು ಅನುಭವಿಸಬೇಕೆಂಬ ಬಯಕೆಯೇ ಈ ಅಭಿವ್ಯಕ್ತಿಯ ಮೂಲ ಕಾರಣ. ಅನಂತವಾದ ಆನಂದವನ್ನು ಸವಿಯಲು ವ್ಯಕ್ತಿಯಾಗಿ (ಆತ್ಮನು) ಪದೇಪದೇ ಬರಬೇಕಾಗುತ್ತದೆ ಅನ್ನುವುದರಲ್ಲಿ ಆಶ್ಚರ್ಯ ಏನಿದೆ? ಬದಲಾಗಿ ಅವಶ್ಯವೆಂದು ಗೊತ್ತಾಗುವುದು. ಶರೀರ ನಿರ್ಮಾಣವಾಗಿ ಅದರಲ್ಲಿ ಆತ್ಮನ ಪ್ರವೇಶವಾಯಿತೆಂದರೆ, ವೈಯಕ್ತಿಕತೆಯ ಕಲ್ಪನೆಗಾಗಿ ಅದು ಅಜ್ಞಾನದಲ್ಲಿ ಬೀಳುವುದು ಅವಶ್ಯವಾಗುವುದು. ಅಂತೆಯೇ ಶಾರೀರಕ, ಪ್ರಾಣಿಕ ಹಾಗೂ ಮಾನಸಿಕ ಪ್ರಜ್ಞೆಯು ತಾನು ಇತರರಿಂದ ಭಿನ್ನವೆಂದು ಭಾವಿಸುವುದು (ಅನ್ಯಥಾ ಏಕತೆ ಇರುತ್ತ, ವಿಭಕ್ತತೆ ಸಾಧ್ಯವಾಗುವುದಿಲ್ಲ) ಜನ್ಮಜನ್ಮಾಂತರಗಳಲ್ಲಿ ಬೇರೆ ಬೇರೆ ಶರೀರ ಮನಃಪ್ರಾಣಗಳ ಸಂಸರ್ಗದಿಂದ ಅನುಭವ ಪಕ್ವವಾದಾಗ ಅಜ್ಞಾನ ಕಳೆಯುವುದು, ಜ್ಞಾನ ಪ್ರಾಪ್ತಿಯಾಗುವುದು. ನೋವು ದುಃಖ ಇವು ಬೇರೆ ಬೇರೆ ಕಾರಣಗಳಿಂದ ಇರಬಹುದು, ಬೇರೆ ಬೇರೆ ಪ್ರಕಾರದ್ದೂ ಇರಬಹುದು, ಆದರೆ ಆ ಕಾರಣ, ಈ ಕಾರಣ ಹೀಗೆ ಹುಡುಕಾಡುತ್ತ ಕೊಡುವುದರಲ್ಲಿ ಅರ್ಥವಿಲ್ಲ. ಯಾವ ಕಾರಣ ಅನ್ನುವುದು ಮಹತ್ವದ ವಿಷಯವಲ್ಲ. ಎಲ್ಲದರ ಹಿಂದೆ ಇರುವ ನಿಜವಾದ ಕಾರಣ ಒಂದೇ, ಅಂತರಾತ್ಮನನ್ನು ಜಾಗೃತಗೊಳಿಸುವುದು. ಈ ಅನುಭವ, ಆನಂತ ಅನುಭವ ಪ್ರಾಪ್ತಿಯ ದೆಶೆಯಿಂದಲೇ

ಆತ್ಮವು ಅನೇಕ ಜನ್ಮಗಳನ್ನು ತಾಳುತ್ತ ಹೋಗುತ್ತದೆ. ಈ ದೃಷ್ಟಿಯಿಂದ ನೋಡಿದರೆ 'ಆಕಾರಗಳ ಬದಲಾವಣೆ ಅಂದರೆ ಶರೀರದ ಬದಲಾವಣೆ' ಅವಶ್ಯವಿದೆ. ಒಂದು ಆಕಾರ ಅಥವಾ ಶರೀರದಲ್ಲಿ ವಾಸಿಸುವ ಆತ್ಮವು ಬದಲಾವಣೆ ಅಂದರೆ ಶರೀರವನ್ನು ತ್ಯಜಿಸುವುದು ಅವಶ್ಯವಾಗಿದೆ. ಅಂತೆಯೇ ಶರೀರದ ವಿಘಟನೆ ಅನಿವಾರ್ಯವಾಗಿದೆ. ಶರೀರದ ಅವಸಾನದ ನಂತರ ಆತ್ಮವು ತನ್ನ ಸ್ತರಕ್ಕೆ ಮರಳಿ ಹೋಗುತ್ತದೆ. ಅದು ಉಪಯೋಗಿಸಿಕೊಂಡಿದ್ದ ಶರೀರ–ಮನಃ ಪ್ರಾಣಗಳು ವಿಘಟನೆ ಹೊಂದಿ, ಪುನಃ ಮತ್ತೊಂದು ಶರೀರ ರಚನೆಯ ಕಾರ್ಯದಲ್ಲಿ ಪಾಲ್ಗೊಳ್ಳಲು ಸಿದ್ಧವಾಗುತ್ತವೆ. ಅಂದರೆ ಯಾವುದೇ ವಸ್ತುವಾಗಲಿ ಶರೀರ, ಮನ, ಪ್ರಾಣ ಹಾಗೂ ಆತ್ಮ ಯಾವುವೂ ಈ ಸೃಷ್ಟಿಯನ್ನು ಬಿಟ್ಟು ಹೊರಹೋಗುವುದಿಲ್ಲ. ನಾಶವಾಗುವುದಿಲ್ಲ; ತಮ್ಮ ತಮ್ಮ ಸ್ತರದಲ್ಲಿ ಪುನರ್‌ನಿರ್ಮಾಣಕ್ಕೆ ಸಜ್ಜಾಗುತ್ತವೆ. ಸಾವಿನ ಸಮರ್ಥನೆ ಏನೆಂದರೆ, ಆತ್ಮವು

(ಜೀವವು) ಬಯಸುವ ಅನಂತ ಅನುಭವಗಳನ್ನು ಕೊಡುವ ಸಾಮರ್ಥ್ಯ ಸದ್ಯದ ಭೌತಿಕ ಶರೀರದಲ್ಲಿ ಇಲ್ಲ. ಅದು ಅತಿಮಾನಸ ಶರೀರವಾಗಿ ಬದಲಾಗದ ಮಾತ್ರ, ಸ್ವತಃ ನಾಶವಾಗದೇ ಅಥವಾ ವಿಘಟನೆ ಹೊಂದದೆ ಅನಂತ ಅನುಭವಗಳನ್ನು ನೀಡಲು ಸಮರ್ತವಾಗುವುದು. ಕೇವಲ ಶರೀರದ ಆಯುಷ್ಯ ವೃದ್ಧಿಯಾದರೆ ಮಾತ್ರ ಇದೆಲ್ಲ ಸಾಧ್ಯವಾಗುವುದಿಲ್ಲ; ವಿಜ್ಞಾನಿಗಳು ಹೇಳುವಂತೆ ಮೇಲೆ ಕೆಲಸ ಮಾಡಿ ಜೀವಿತಾವಧಿ ಹೆಚ್ಚಳ ಮಾಡಿದರೆ ಆತ್ಮದ ಬೇಡಿಕೆಯಾದ ಆನಂತ ಅನುಭವಗಳ ಸಾಧ್ಯತೆ ಈಡೇರುವುದಿಲ್ಲ. ಅದಕ್ಕೆ ಅತಿಮಾನಸದ ಪ್ರಜ್ಞೆ ಬೇಕು, ಅತಿಮಾನಸ ಶರೀರ ಕೂಡ ಬೇಕು. (ವಿಜ್ಞಾನಿಯಾಗಲಿ, ವೈದ್ಯವಿಜ್ಞಾನಿಯಾಗಲಿ ಮಾಡುತ್ತಿರುವುದನ್ನು ಸಾರಾಸಗಟಾಗಿ ತಳ್ಳಬೇಕೆಂದೇನಲ್ಲ, ಆದರೆ ಅದರ ಮಿತಿಯನ್ನು ಹಾಗೂ ವ್ಯಾಪ್ತಿಯನ್ನು ಎರಡನ್ನೂ ನಾವು ತಿಳಿದುಕೊಂಡಿರಬೇಕು)

ಇದು ನಮ್ಮ ಭೌತಿಕ ಜೀವನದಲ್ಲಿ ಸಾವಿನ ಅವಶ್ಯಕತೆ ಮತ್ತು ಅದರ ಸಮರ್ಥನೆ; ಸಾವು ಜೀವನದ ನಿರಾಕರಣೆ ಅಥವಾ ವಿರೋಧ ಅಲ್ಲ, ಅದು ಜೀವನದ ವಿಧಾನ ಸಾವು ಅತ್ಯಂತ ಅಪೇಕ್ಷಣೀಯ ಮತ್ತು ಅವಶ್ಯಕತೆ, ಏಕೆಂದರೆ ಶರೀರದ ನಿರಂತರ ಬದಲಾವಣೆಯೇ ಸಾಮತ ವಸ್ತುವಿನ ಆನಂತ ಬದುಕಿನ ಮೂಲ ತತ್ವ. ಅನುಭವಗಳ ಅನೇಕತೆಯೇ ಶರೀರದಲ್ಲಿ ಸೀಮಿತವಾಗಿ ಕುಳಿತಿರುವ ಆತ್ಮದ ಏಕೈಕ ಉದ್ದೇಶವಾಗಿರುವಾಗ ಶರೀರದ ಬದಲಾವಣೆ ಅನಿವಾರ್ಯ ಮತ್ತು ಅಗತ್ಯ ಕೂಡ. ಹಾಗೆಂದು ಒಂದೇ ರೀತಿಯ ಶರೀರ ನಿರ್ಮಾಣವಾಗುತ್ತ ಹೋಗುವುದೇನು? ಇಲ್ಲ. ಹೊಸ ಶರೀರ, ಹೊಸ ಪರಿಸರ, ಹೊಸ ಬದುಕು ಮುಂತಾದ ಹೊಸತುಗಳ ನಡುವೆ ಅದೇ ಹಳೆಯ ಶರೀರ. ಧಾತು ಹೇಗೆ ಹೊಂದಿಕೊಳ್ಳುವುದು? ಹೊಸ ವಾತಾವರಣ ಹೊಸ ನಿಯಮಕ್ಕೆ ತಕ್ಕಂತೆ, ಕಾಲ–ದೇಶಗಳ ಬೇಡಿಕೆಗೆ ತಕ್ಕಂತೆ ಬದಲಾವಣೆ ಬರಲೇಬೇಕು, ಬರುತ್ತದೆ ಕೂಡ. ಆತ್ಮವು ಕೇವಲ ಭೌತಿಕ ಶರೀರ ಮಾತ್ರ ಅಲ್ಲ, ಪ್ರಾಣಿಕ, ಮಾನಸಿಕ ಸಂರಚನೆ ಎಲ್ಲವನ್ನೂ ಬದಲಾಯಿಸುತ್ತದೆ, ಅದೇ ಮುಂದಿನ ಅನುಭವಗಳಿಗೆ ದಾರಿಯಾಗುತ್ತದೆ. ಅನ್ಯಥಾ ಹಳೆಯ ಸಂಸ್ಕಾರಗಳೇ ಮುಂದುವರಿಯುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸಂಪೂರ್ಣ ನವೀಕರಣ ಅವಶ್ಯವಿರುತ್ತದೆ.

“ವೈಯಕ್ತಿಕ ಶಕ್ತಿಯು ಮನಸ್ಸಿನ ಶಕ್ತಿಯೇ ಆಗಿದ್ದು ಅಜ್ಞಾನ ಮಿಶ್ರಿತವಿಲ್ಲದಿದ್ದರೆ, ಇಂಥ ಸೀಮಿತತೆ, ಬಯಕೆ (ವಾಸನಾ) ಅಗತ್ಯತೆ ಇವುಗಳೇ ಅಡ್ಡ ಬರುತ್ತಿರಲಿಲ್ಲ. ಏಕೆಂದರೆ ಮನವು ಅತಿಮಾನಸದಿಂದ ವಿಭಕ್ತವಾಗಿರದೇ

ದಿವ್ಯಜ್ಞಾನದ ಮನಸ್ಸಾಗಿ ಸೃಷ್ಟಿಯ ಉದ್ದೇಶ, ವ್ಯಾಪ್ತಿ, ಪರಿಣಾಮ ಎಲ್ಲವನ್ನೂ ತಿಳಿದಿರುವುದು. ಅದರ ಪ್ರತಿ ಹೆಜ್ಜೆ ಕೂಡ ಪರಿಚಿತವಿರುದು. ಆಗ ವೃಥಾ ಹೋರಾಟ, ವಾಸನೆ, ಇವೆಲ್ಲ ಇರುವುದಿಲ್ಲ. ವಾಸನೆ, ಅಸಾಮರ್ಥ್ಯ ಅವಶ್ಯಕತೆಯೇ ಇರುವುದಿಲ್ಲ. ಈಗಲೇ ಆಗಬೇಕು ಎಂಬ ಗಡಿಬಿಡಿ ಅವಸರ ಏನೂ ಇರುವುದಿಲ್ಲ. ಏಕೆಂದರೆ ಸೋಲು, ವಿಳಂಬ ಇವು ಕೂಡ ಪರಮಾತ್ಮನವೇ; ಸರ್ವಜ್ಞ, ಸರ್ವಶಕ್ತ ಪರಮಾತ್ಮನ ಕ್ರಿಯೆಗಳೇ; ಅವನಿಗೆ ಸಮಾಯಾಸಮಯವೂ ಗೊತ್ತು, ಸಂದರ್ಭಸಂದರ್ಭಕೂಡ ಗೊತ್ತು, ವಿಶ್ವಾತ್ಮಕ ಕಾರ್ಯ, ಅವುಗಳ ಕಾಲ ಎಲ್ಲ ಗೊತ್ತು."

ಶ್ರೀ ಅರವಿಂದರ ಈ ಅಧ್ಯಾಯವನ್ನು ಮನಸ್ಸು ಹುಟ್ಟು ಹಾಕಿದ ಸಮಸ್ಯೆಯಿಂದ ಆರಂಭಮಾಡುತ್ತಾರೆ. ಅಂರ್ಗತ ಕ್ರಿಯೆಯ ಸ್ತರದಲ್ಲಿ 'ಮನಸ್ಸಿನ' ಪ್ರವೇಶದ ನಂತರ ಪ್ರಾಣ ತತ್ವ ಮತ್ತು ಅದರ ನಾನಾ ರೂಪಗಳು ಸೃಷ್ಟಿಯಲ್ಲಿ ಬಂದವು. ಏಕೆಂದರೆ ಅಜ್ಞಾನದ ಮನಸ್ಸೇ ಆರಂಭ, ಅದರ ಕೆಳಗಿನ ಸ್ತರದ ಸಮಸ್ತ ದೃಷ್ಟಿ ಅಜ್ಞಾನದ್ದೇ.

ಇಂಥ ಮನಸ್ಸಿನಿಂದ ಸೃಷ್ಟಿಯಾದುದೆಲ್ಲವೂ 'ಅಜ್ಞಾನವನ್ನೇ' ಹಂಚಿಕೊಳ್ಳುತ್ತವೆ. ಹಾಗಾದರೆ ಈ ಅಜ್ಞಾನ ಅಂದರೇನು? ಈ ಅಜ್ಞಾನದ ಪರಿಣಾಮ ಏನು? ಅರ್ಥ ಸ್ಪಷ್ಟವಿದೆ, ಅಜ್ಞಾನ ಅಂದರೆ ಸಾವು, ಬಯಕೇ(ವಾಸನಾ) ಮತ್ತು ಅಸಾಮರ್ಥ್ಯ ನಾವು ಈ ಮಾನಸಿಕ ಪ್ರಜ್ಞೆಯಲ್ಲಿ ಇರುವವರೆಗೆ, ಏನೇ ಮಾಡಲಿ (ಜಗತ್ತಿನ ಎಲ್ಲ ಧರ್ಮ, ಮತ, ಪಂಥಗಳನ್ನು ಒಂದೆಡೆ ಸೇರಿದರೂ) ಈ ಜಗತ್ತು ಬದಲಾಗುವುದಿಲ್ಲ, ಮಾನವ ಬದಲಾಗುವುದಿಲ್ಲ – ಏಕೆಂದರೆ ಮನಸ್ಸು ಈ ಹಣೆಪಟ್ಟಿಗಳನ್ನು ಸಾವು ವಾಸನಾ ಮತ್ತು ಅಸಾಮರ್ಥ್ಯಗಳನ್ನು ಪ್ರತಿ ವಸ್ತುವಿಗೂ ಅಂಟಿಸುತ್ತದೆ. ಮನಸ್ಸಿನ ಆಚೆಗೆ ಹೋಗಲು ಅಥವಾ ಬೆಳೆಯಲು ಸಾಧ್ಯವಾದಾಗ ಮಾತ್ರ ಈ ಸಾವು, ಬಯಕೆ, ಆಸಾಮರ್ಥ್ಯಗಳನ್ನು ಗೆಲ್ಲಲು ಸಾರ್ಧಯವಾಗುವುದು. ಸಮಗ್ರ ಪರಿವರ್ತನೆ ಆಗಬೇಕಾದರೆ ಇದೊಂದೇ ದಾರಿ. ಧಾರ್ಮಿಕತೆ, ನೈತಿಕತೆ ಇತ್ಯಾದಿಗಳನ್ನು ಕಿರಿದಾಗಿಸಿ ತೋರಿಸುವ ಪ್ರಯತ್ನ ಅಲ್ಲ ಇದು; ಇದುವರೆಗೆ ಮಾನವನ ಬೆಳವಣಿಗೆಗೆ ಅವೆಲ್ಲ ಅವಶ್ಯವಾಗಿದ್ದವು. ಆದರೆ ಸದ್ಯದ ಧರ್ಮ, ಅವಶ್ಯಕತೆ ಕರ್ತವ್ಯ ಅದಲ್ಲ. ಅವಶ್ಯವಿರುವುದು ಮಾನಸಿಕ ಪ್ರಜ್ಞೆಯ ಪರಿವರ್ತನೆ!


[ಮುಂದುವರೆಯುತ್ತದೆ]

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |




ಅನಿರ್ವಚನೀಯ ಪೂರ್ಣಯೋಗದಲಿ ಅನಿಕೇತವಾದ ಯೋಗಿ
ಶಬ್ದ–ಸಂಚಲನ–ಬಂಧ ಬಯಕೆಗಳ ಸಂಬಂಧ ತ್ಯಜಿಸಿ ಸಾಗಿ
ಸೃಷ್ಟಿ ಸಂಕುಲದ ಜೀವ–ಜಾಲಕ್ಕೆ ನಿರ್ಲಿಪ್ತವಾದ ಚಿತ್ತ
ತನ್ಮಯದ ಘನದಿ ತಲ್ಲೀಯಗೊಂಡು ಏಕಾಂತವಾದನಿತ್ತ
ಆತ್ಮದೌನ್ನತ್ಯ ಶಿಖರಗಳ ಶ್ರೇಣಿ–ಶ್ರೇಣಿಗಳ ತಾಣಗಳಲಿ
ನಿತ್ಯ ನಿರ್ಮಲದ ಪಾವಿತ್ರ್ಯ ಪರಮ ಊರ್ಧ್ವಾತಿ ಊರ್ಧ್ವಗಳಲಿ
ದೇದೀಪ್ಯಮಾನ ಶಿವತಾಣದಲ್ಲಿ ನಿರ್ಮಾಯ ಮೌನ ಘನದಿ
ಏಕಾಗ್ರ ಚಿತ್ತ ಚಿದ್ಘನದ ಚೈತ್ಯ ಚಿನ್ಮಯದ ಕಾಂತಿ ಹೊಂದಿ

**– ಪುಟ್ಟು ಕುಲಕರ್ಣಿ**

[ಶ್ರೀ ಅರವಿಂದರ **'ಸಾವಿತ್ರಿ'**; ದಳ 4 ರೇಣು 4 ಪು 382]

**ಟಿಪ್ಪಣಿ:** ಇಲ್ಲಿರುವ ಶ್ರೀ ಅರವಿಂದರ ಪ್ರತಿಮೆ ತಯಾರಾಗಿರುವದು/ ಸ್ಥಾಪಿಸಲ್ಪಡುತ್ತಿರುವದು ರಷ್ಯಾ ದೇಶದಲ್ಲಿ.




ಚಿಂತನಾಪೂರ್ಣ ಕಾಲ–ಋತು–ಮೂರು ಉಪರತಿಯ ಹೊಂದಿ
ಜಾಜ್ವಲ್ಯಮಾನ್ಯ ಪಥದಲ್ಲಿ ನಿತ್ಯ ಪದ–ಧ್ವನಿಯನಿರಿಸಿ
ಒಂದಾದ ಮೇಲೆ ಒಂದೊಂದರಂತೆ ಗರ್ಭಸ್ಥ ಘಳಿಗೆಯರಸಿ
ಸೂಕ್ಷ್ಮಾತಿಸೂಕ್ಷ್ಮ ಅವಲೋಕದೊಳಗೆ ಛಂದ–ವಿಶ್ಲೇಷವಿರಿಸಿ
ದೇದೀಪ್ಯಮಾನದಾ ಆಳಗಳಲು ಪರಿವೀಕ್ಷೆಗೊಳುತಲಿರಲು
ಅಗೋಚರದಲ್ಲಿ ತಾನಿದ್ದ ದಿವ್ಯ–ಜ್ವಾಲೆಯಭೀಪ್ಸೆಗೊಳಲು
ಮಾಬಲದ ಜನ್ಮ ಅವತರಣಗೊಂಡು ಆಗಮಿಸಲೆಂದು ತಪಿಸಿ
ಜಾಗರಣೆಯಲ್ಲಿ ಪ್ರಾರ್ಥಿಸುತ ಸತತ ಪೂರ್ಣತೆಯ ಗುರಿಯ ಜಪಿಸಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 4 ರೇಣು 1  ಪುಟ 351)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysuru Road, Bengaluru - 560 026



ಮರಣವೆಂಬುದಿದು ನಮ್ಮ ಚರಣಕ್ಕೆ ಚಾರಣದ ಪಥದ ಹಾಗೆ
ನಮ್ಮ ಗಮನಕಿದು ಗಮ್ಯ ತಾನಲ್ಲ, ಅಂತಿಮದ ಗುರಿಯ ಹಾಗೆ,
ಗಹನ ಭಾವದಲಿ ಆದಿ ಪರಿಶ್ರಮದ ಹಲ–ಕೆಲವು ನಾಡಿ–ಸ್ಪಂದ
ಆ ಗುಪ್ತಪಾಶದಲಿ ನಮ್ಮ ಆತ್ಮಗಳ ಸೆಳೆತಕ್ಕೆ ಚರ್ಮಬಂಧ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 197)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.